ದಶಮಾನ ಕಂಡ ಜಿಲ್ಲೆಯ ಮೊದಲ ಪ್ರಾದೇಶಿಕ ದಿನ ಪತ್ರಿಕೆ

KB 12 YEARS 2013

ದಾವಣಗೆರೆ, ಉಡುಪಿ, ಶಿವಮೊಗ್ಗ, ಹಾಸನ, ಚಿಕ್ಕಮಗಳೂರು, ಗದಗ, ಬೆಂಗಳೂರು ಗ್ರಾಮಾಂತರ

# ಕನ್ನಡ ಭಾರತಿ

ಸಂಪಾದಕರು : ಮಲ್ಲಿಕಾರ್ಜುನ್ ಕಬ್ಬೂರು

ನೊಂದವರ ನೈಜ ಕನ್ನಡಿ

ಸಂಪುಟ : 12 ಸಂಚಿಕೆ : 221
25–2–2025 ಮಂಗಳವಾರ

₹3 KA/SK/DVG-006/2023-2025 KARKAN/2013/50807 KANNADA BHARATHI REGIONAL DALIY DAVANAGERE dvgkanndabharathi@gmail.com Page : 6 VOLUME : 12 ISSUE : 221

## ರಸ್ತೆ ಒತ್ತುವರಿ ಆರೋಪ; ಪೇವರ್ಸ್ ಕಾಮಗಾರಿ ಪೂರ್ಣಕ್ಕೆ ಆಯುಕ್ತರಿಗೆ ಮನವಿ



**ದಾವಣಗೆರೆ:** ಇಲ್ಲಿನ ಕೆ.ಬಿ. ಬಡಾವಣೆಯ ಬಳ್ಳಾರಿ ಸಿದ್ದಮ್ಮ ಪಾರ್ಕ್ ಸುತ್ತಮುತ್ತಲ ಮುಖ್ಯರಸ್ತೆಗಳಲ್ಲಿ ಕೆಲವು ಮನೆಮಾಲೀಕರು ಅಕ್ರಮವಾಗಿ ರಸ್ತೆ ಒತ್ತುವರಿ ಮಾಡಿ, ನೀರಿನ ಸಂಪುಗಳ ರಕ್ಷಿಸಲೆಂದು ಪಾಲಿಕೆಯಿಂದ ನಡೆಯುತ್ತಿರುವ ಪೇವರ್ಸ್ ಕಾಮಗಾರಿಯನ್ನು ಪೂರ್ಣಗೊಳಿಸಲು ತಡೆಹಿಡಿಯುತ್ತಿದ್ದು, ಸಾರ್ವಜನಿಕರ ಹಿತದೃಷ್ಟಿಯಿಂದ ಕೂಡಲೇ ಕಾಮಗಾರಿಯನ್ನು ಪೂರ್ಣಗೊಳಿಸಬೇಕೆಂದು ಅಲ್ಲಿನ ನಾಗರೀಕರು ಪಾಲಿಕೆ ಆಯುಕ್ತರಿಗೆ ಮನವಿ ಮಾಡಿದ್ದಾರೆ.

ಕೆ.ಬಿ. ಬಡಾವಣೆ ಮತ್ತು ಸಿದ್ಧಮ್ಮ ಪಾರ್ಕ್ ರಸ್ತೆಗಳಲ್ಲಿ ಪೇವರ್ಸ್ ಹಾಕುವ ಕಾಮಗಾರಿ ನಡೆಯುತ್ತಿದ್ದು, ಈ ಭಾಗದ ಕೆಲ ಮನೆ ಮಾಲೀಕರು ರಸ್ತೆಗಳನ್ನು ಅಕ್ರಮವಾಗಿ ಒತ್ತುವರಿ ಮಾಡಿ, ನೀರಿನ ಸಂಪುಗಳನ್ನು ನಿರ್ಮಿಸಿದ್ದಾರೆ. ಪೇವರ್ಸ್ ಹಾಕುವ ಸಮಯದಲ್ಲಿ ಈ ಸಂಪು ಅಡೆತಡೆ–ಯಾಗಿದ್ದು, ಇದನ್ನು ತೆರೆವುಗೊಳಿಸಿ ಪೇವರ್ಸ್‌ಗಳನ್ನು ಹಾಕಬೇಕಿರುತ್ತದೆ. ಆದರೆ ಇಲ್ಲಿನ ಕೆಲ ಮನೆ ಮಾಲೀಕರು ಇದಕ್ಕೆ ತಡೆ ಮಾಡುತ್ತಿದ್ದಾರೆ ಮತ್ತು ಗುತ್ತಿಗೆದಾರರ ಮೇಲೆ ಇಲ್ಲಸಲ್ಲದ ಆರೋಪ ಮಾಡುತ್ತಿದ್ದಾರೆ ಎಂದು ಅಲ್ಲಿನ ನಿವಾಸಿಗಳು ಆರೋಪಿಸಿದ್ದಾರೆ.

## ಮಂಡ್ಯ: ವಿಸಿ ನಾಲೆಗೆ ಹಾರಿ ಒಂದೇ ಕುಟುಂಬದ ಮೂವರು ಆತ್ಮಹತ್ಯೆ



**ಮಂಡ್ಯ:** ಸಾಲಭಾದೆ ತಾಳಲಾರದೆ ಒಂದೇ ಕುಟುಂಬದ ಮೂವರು ವಿಷ ಸೇವಿಸಿ, ನಂತರ ವಿಸಿ ನಾಲೆಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿರುವಂತಹ ದಾರುಣ ಘಟನೆ ಸೋಮವಾರ ಮಂಡ್ಯ ಜಿಲ್ಲೆಯಲ್ಲಿ ನಡೆದಿದೆ.

ಮೃತರನ್ನು ಮಾಸ್ತಪ್ಪ, ಅವರ ಪತ್ನಿ ರತ್ನಮ್ಮ ಹಾಗೂ ಮಗಳು ಲಕ್ಷ್ಮೀ ಎಂದು ಗುರುತಿಸಲಾಗಿದ್ದು, ದಂಪತಿಯ ಮೃತದೇಹ ಪತ್ತೆ ಆಗಿದೆ. ಮಗಳ ಮೃತದೇಹಕ್ಕಾಗಿ ಶೋಧಕಾರ್ಯ ನಡೆದಿದೆ.

ಮೃತರು ಶ್ರೀರಂಗಪಟ್ಟಣದ ಗಂಜಾಂ ನಿವಾಸಿಗಳಾಗಿದ್ದು, ಮಾಸ್ತಪ್ಪ ಆಟೋ ಓಡಿಸಿಕೊಂಡು ಜೀವನ ಮಾಡುತ್ತಿದ್ದರು. ಸುಮಾರು 3 ಲಕ್ಷ ರೂಪಾಯಿ ಕೈಸಾಲ ಮಾಡಿಕೊಂಡಿದ್ದ ಮಾಸ್ತಪ್ಪ, ಸಾಲಕೊಟ್ಟವರು ಇಂದು ಮನೆ ಬಳಿ ಗಲಾಟೆ ಮಾಡಿದ್ದಕ್ಕೆ ನೊಂದು, ಕುಟುಂಬದೊಂದಿಗೆ ಸಾವಿಗೆ ಶರಣಾಗಿದ್ದಾರೆ ಎನ್ನಲಾಗಿದೆ.

## ಅಪ್ರಾಪ್ತ ಬಾಲಕ ವಾಹನ ಚಾಲನೆ ವಾಹನ ಮಾಲೀಕರಿಗೆ 25 ಸಾವಿರ ರೂ. ದಂಡ

**ದಾವಣಗೆರೆ:** ಅಪ್ರಾಪ್ತ ಬಾಲಕನಿಗೆ ಸವಾರಿ ಮಾಡಲು ನೀಡಿದ್ದ ಬೈಕ್ ಮಾಲೀಕನಿಗೆ ಇಲ್ಲಿನ 3ನೇ ಜೆಎಂಎಫ್ ಸಿ ನ್ಯಾಯಾಲಯ 25 ಸಾವಿರ ರೂ. ದಂಡ ಮಹಮದ್ ಶಫಿ ಎಂಬುವರು ಅಪ್ರಾಪ್ತ ಬಾಲಕನಿಗೆ ತಮ್ಮ ಹೊಂಡ ಆಕ್ಟೀವ ಸ್ಕೂಟರ್ ಚಾಲನೆ ಮಾಡಲು ಕೊಟ್ಟಿದ್ದರು.

ದಕ್ಷಿಣ ಸಂಚಾರ ಠಾಣೆಯ ಪಿಎಸ್ ಐ ನಿರ್ಮಲ ಡಿ.ಎಚ್. ಹಾಗೂ ಸಿಬ್ಬಂದಿ ಸ್ಕೂಟರ್ ಸಂಗೊಳ್ಳಿ ರಾಯಣ್ಣ ವೃತ್ತದಲ್ಲಿ ಸವಾರಿ ಮಾಡುತ್ತಿದ್ದ ಬಾಲಕನಿಂದ ಸ್ಕೂಟರ್ ವಶಪಡಿಸಿಕೊಂಡು ದೂರು ದಾಖಲಿಸಿದ್ದರು.

ಅಪ್ರಾಪ್ತರು ವಾಹನ ಚಾಲನೆ ಮಾಡುವುದನ್ನು ತಡೆಯಲು ಎಸ್ಪಿ ಉಮಾ ಪ್ರಶಾಂತ್ ಮಾರ್ಗದರ್ಶನದಲ್ಲಿ ಪೋಲೀಸರು ಫೆ.21 ರಂದು ಕಾರ್ಯಾಚರಣೆ ಮಾಡಿದ್ದರು.

### ಭಿನ್ನಮತಿಯರ ನಡೆ ಬಿಜೆಪಿ ಘನತೆಗೆ ಧಕ್ಕೆ : ಬಿಜೆಪಿ ಮುತ್ಸದ್ಧಿ ಎಸ್.ಎ. ರವೀಂದ್ರನಾಥ್ ವಿಷಾದ

## ಕರ್ನಾಟಕದಲ್ಲಿ ಈಗಲೂ ಬಿಜೆಪಿ ಅಂದರೆ ಯಡಿಯೂರಪ್ಪ ಅನ್ನುವಂತಿದೆ

**ಕನ್ನಡ ಭಾರತಿ**

**ದಾವಣಗೆರೆ:** ರಾಜ್ಯದಲ್ಲಿ ಬಿಜೆಪಿ ಮುನ್ನಡೆಸುವ ಶಕ್ತಿ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಕುಟುಂಬಕ್ಕೆ ಮಾತ್ರ ಇದೆ ಎಂದಿರುವ ಮಾಜಿ ಸಚಿವ ಹಾಗೂ ಬಿಜೆಪಿ ಮುತ್ಸದ್ಧಿ ಹಿರಿಯ ರಾಜಕಾರಣಿ ಎಸ್.ಎ. ರವೀಂದ್ರನಾಥ್, ಭಿನ್ನಮತಿಯರಿಂದ ಪಕ್ಷದ ಬಲವರ್ಧನೆಗೆ ಅಡ್ಡಿಯಾಗುತ್ತಿದೆ ಎಂದು ವಿಷಾದಿಸಿದ್ದಾರೆ.

ಕನ್ನಡ ಭಾರತಿ ಬಹುವರ್ಣದ ಪತ್ರಿಕೆ ಓದಿದ ನಂತರ ಬಿಜೆಪಿಯ ರಾಜ್ಯ ರಾಜ್ಯಕಾರಣದ ವಿಷಯ ಪರಿಸ್ಥಿತಿ ಬಗ್ಗೆ ಸಂಪಾದಕರೊಂದಿಗೆ ಚರ್ಚಿಸಿದರು.

ಭಿನ್ನಬಣದ ಮಾಜಿ ಸಚಿವ ಬಸವನಗೌಡ ಪಾಟೀಲ್ ಯತ್ನಾಳ್ ಹಾದಿಯಾಗಿ ಅಲ್ಲಿರುವ ಅನೇಕ ನಾಯಕರಿಗೆ ಪಕ್ಷ ಕಟ್ಟಲು ತ್ಯಾಗ ಮಾಡಿದ ಹಿರಿಯರ ಬಗ್ಗೆ ಸರಿಯಾದ ಮಾಹಿತಿ ಇಲ್ಲ. ಕೇವಲ ಅಧಿಕಾರಕ್ಕಾಗಿ ಅಪಸ್ವರ ಎತ್ತಿದ್ದಾರೆ ವಿನಃ, ದೇಶಾಭಿಮಾನ ಅಥವಾ ಅಭಿವೃದ್ಧಿ ಪರ ಚಿಂತನೆ ಇಲ್ಲಿ ಕಾಣುತ್ತಿಲ್ಲ ಎಂದು ಕಿಡಿ–ಕಾರಿದರು.

ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ, ಶಾಮ ಪ್ರಸಾದ್ ಮುಖರ್ಜಿ, ಬಾಬುರಾವ್ ದೇಶಪಾಂಡೆ ಸೇರಿದಂತೆ ಅನೇಕ ನಾಯಕರ ಪರಿಶ್ರಮ ಹಾಗೂ ತ್ಯಾಗದಿಂದ ಬಿಜೆಪಿ ಇವತ್ತು ರಾಷ್ಟ್ರದಲ್ಲಿ ದೇಶ ಮುನ್ನಡೆಸುತ್ತಿದೆ. ರಾಜ್ಯದಲ್ಲಿ ಬಿಜೆಪಿ ಎಂದರೆ ಈಗಲೂ ಬಿ.ಎಸ್. ಯಡಿಯೂರಪ್ಪ ಎಂಬ ಅಭಿಪ್ರಾಯ ಇದೆ. ಇಂಥ ಸಮಯದಲ್ಲಿ ಅಪಸ್ವರ ಎತ್ತುವುದು ಪಕ್ಷದ ಘನತೆಗೆ ಮಸಿ ಬಳಿಯುವಂತಹ ಯತ್ನವಾಗಿದೆ ಎಂದು ಅಸಮಾಧಾನ ಹೊರ ಹಾಕಿದರು.

ಕುಮಾರ ಬಂಗಾರಪ್ಪ ಅವರ ಮೂಲಕ ಸಲ್ಲದ ಹೇಳಿಕೆ ಕೊಡಿಸಲಾಗುತ್ತಿದೆ. ಕುಮಾರ ಬಂಗಾರಪ್ಪ ಅವರಿಗೆ ರಾಜಕೀಯ ಮರು ಜನ್ಮ ನೀಡಿದವರು ಯಡಿಯೂರಪ್ಪ. ಈಗ ಅವರೇ ಯಡಿಯೂರಪ್ಪನವರ



ನಿರ್ಧಾರ (ವಿಜಯೇಂದ್ರ) ಧಿಕ್ಕರಿಸುತ್ತಿದ್ದಾರೆ. ಬದ್ಧತೆ ಹಾಗೂ ನಿಷ್ಠೆ ಇಲ್ಲದವರಿಂದ ಪಕ್ಷ ಘನತೆ ಎತ್ತಿ ಹಿಡಿಯಲಾಗುದು ಎಂದಿದ್ದಾರೆ.

ಬರಿ ಹಣದಿಂದ ಪಕ್ಷ ಕಟ್ಟಲಾಗದು. ಜನತೆ ಬೆಂಬಲ ಬೇಕೇಬೇಕು. ಜನ ಬೆಂಬಲ ಯಡಿಯೂರಪ್ಪ ಅವರಿಗೆ ಈಗಲೂ ಇದೆ. ಯಡಿಯೂರಪ್ಪ ಅವರ ರೀತಿ ಅವರ ಮಗ ಬಿ.ವೈ. ವಿಜಯೇಂದ್ರ ಪಕ್ಷದಲ್ಲಿ ಕಾರ್ಯಕರ್ತರ ಮನ ಗೆಲ್ಲುತ್ತಿದ್ದಾರೆ. ಇಂತಹ ಸಮಯದಲ್ಲಿ ಅಧ್ಯಕ್ಷರ ಬದಲಾವಣೆ ಕೂಗು ಪಕ್ಷಕ್ಕೆ ಪೆಟ್ಟು ನೀಡಲಿದೆ. ಪಕ್ಷವನ್ನು ಮುನ್ನಡೆಸುವ ಶಕ್ತಿ–ಯುಕ್ತಿ ಭಿನ್ನ ಬಣದ ಯಾವ ನಾಯಕರಿಗೆ ಇದೆಎಂದು ಪ್ರಶ್ನಿಸಿದರು.

**ಸಂವಹನದ ಸಮಸ್ಯೆ ಇರಬಹುದು**

ಕರ್ನಾಟದಕ ಭಿನ್ನಮತಿಯರ ಸಮಸ್ಯೆ ಹೈಕಮಾಂಡ್‌ಗೆ ಸರಿಯಾಗಿ ಮನವರಿಕೆ ಆದಂತೆ ಕಾಣುತ್ತಿಲ್ಲ. ಪ್ರಾಯಶಃ ಭಾಷಾ ಸಂವಹನದ ಕೊರತೆಯಿಂದ ದಿಲ್ಲಿ ವರಿಷ್ಠರಿಗೆ ಇಲ್ಲಿನವರು ವಾಸ್ತವ ಸ್ಥಿತಿ ಮನವರಿಕೆ ಮಾಡುವಲ್ಲಿ ವಿಫಲರಾದಂತೆ ಕಾಣುತ್ತಿದೆ.

**–ಎಸ್.ಎ. ರವೀಂದ್ರನಾಥ್,**
ಬಿಜೆಪಿ ವರಿಷ್ಠರು

**ಮಾಧ್ಯಮ ಸಮಾಜದ ಆತ್ಮ**

ಮಾಧ್ಯಮಗಳು ಸಮಾಜದ ಆತ್ಮವಾಗಿ ಕೆಲಸ ಮಾಡಬೇಕು ಎಂದಿರುವ ಮಾಜಿ ಸಚಿವ ಎಸ್.ಎ. ರವೀಂದ್ರನಾಥ್, ವಸ್ತುನಿಷ್ಠ ವಿಮರ್ಶೆಯ ಕೆಲಸ ಮಾಧ್ಯಮಗಳು ಮಾತ್ರ ಮಾಡಲು ಸಾಧ್ಯ ಎಂದಿದ್ದಾರೆ.

ಕನ್ನಡ ಭಾರತಿ ಈಗ ಬಹುವರ್ಣದಲ್ಲಿ ಮುದ್ರಣಗೊಳ್ಳುತ್ತಿರುವುದಕ್ಕೆ ಸಂತಸ ವ್ಯಕ್ತಪಡಿಸಿದ ರವೀಂದ್ರನಾಥ್, ಬದಲಾಗುತಿರುವ ಸಾಮಾಜಿಕ ವ್ಯವಸ್ಥೆ ಹಾಗೂ ರಾಜಕಾರಣವನ್ನು ಸರಿಯಾದ ದಿಕ್ಕಿಗೆ ಕೊಂಡೊಯ್ಯುವ ಜವಾಬ್ದಾರಿ ಮಾಧ್ಯಮಗಳದು ಎಂದು ಹೇಳಿದರು.

### ಪೋಲೀಸರ ಪೂರ್ಣ ಹೆಲ್ಮೆಟ್ ಆಂದೋಲನಕ್ಕೆ ಸಚಿವರಾಪ್ತರಿಬ್ಬರ ಅಪಸ್ವರ

## ರಣ ಬಿಸಿಲ ಝಳಕ್ಕೆ ಹೆಲ್ಮೆಟ್ ವಿನಾಯಿತಿ ಕೋರಿಕೆ







**ದಾವಣಗೆರೆ:** ಸುರಿವ ರಣ ಬಿಸಿಲಿನ ಝಳಕ್ಕೆ ಜನ ಹೈರಾಣಾಗುವ ಹೊತ್ತಲ್ಲಿ ಪೊಲೀಸರು ಹೆಲ್ಮೆಟ್ ಕಡ್ಡಾಯದ ಜಾಗೃತಿ ಶುರು ಮಾಡಿರುವುದು ಕೆಲ ಬೈಕ್ ಸವಾರರಿಗೆ ಇರುಸು ಮುರುಸು ತಂದಿದೆ.

ಕಾನೂನಾತ್ಮಕ ಕಾರ್ಯ ಕೈಗೊಂಡ ಪೊಲೀಸರನ್ನು ಬೆಂಬಲಿಸಬೇಕಾದ ಆಡಳಿತ ಪಕ್ಷದ ಮುಖಂಡರೇ ಅಪಸ್ವರ ಎತ್ತಿರುವುದರಿಂದ ಇಲಾಖೆಯನ್ನು ಪೇಚಿಗೆ ಸಿಲುಕಿಸಿದಂತಾಗಿದೆ. ಪೊಲೀಸರ ಹಾಫ್ ಹೆಲ್ಮೆಟ್ ಹೈಜಾಕ್ ಮಾಡುತ್ತಿರುವುದನ್ನು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರ ಆಪ್ತರು ವಿನಾಯಿತಿ ಕೋರುವುದರ ಮೂಲಕ ವಿರೋಧಿಸಿದ್ದಾರೆ.

ದಾವಣಗೆರೆ–ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ದಿನೇಶ್ ಕೆ.ಶೆಟ್ಟಿ ಹಾಗೂ ಪಾಲಿಕೆ ಮಾಜಿ ಸದಸ್ಯ ಎ. ನಾಗರಾಜ್ ಜಂಟಿಯಾಗಿ ಪೊಲೀಸರ ವಿನಾಯಿತಿ ನೀಡುವಂತೆ ಕೇಳಿಕೊಂಡಿದ್ದಾರೆ. ಬೇಸಿಗೆ ಬಿಸಿಲ ಝಳದಲ್ಲಿ ಫುಲ್ ಹೆಲ್ಮೆಟ್ ಹಾಕುವುದು ಹಲವರಿಗೆ ತೊಂದರೆಯಾಗಲಿದೆ. ಈ ಬಗ್ಗೆ ಪೊಲೀಸ್ ಇಲಾಖೆ ಈ ಕಾರ್ಯಾಚರಣೆ ಪರಿಶೀಲಿಸಬೇಕೆಂಬ ಕೋರಿಕೆ ಇಬ್ಬರು ಮಾಡಿದ್ದಾರೆ. ಇದರ ಜೊತೆ ಹಲವು ಬೈಕ್ ಸವರಾರು ಪೊಲೀಸರ ಕಾರ್ಯವೈಖರಿ ವಿರೋಧಿಸುತ್ತಿದ್ದಾರೆ.

**ಮಳೆಗಾಲ–ಚಳಿಗಾಲ ಬಿಟ್ಟು ಬೇಸಿಗೆಯಲ್ಲಿಯೇ ಯಾಕೆ?**

ಪೊಲೀಸ್ ಇಲಾಖೆ ಇದ್ದಕ್ಕಿದ್ದಂತೆ ಪುರ್ಣ ಹೆಲ್ಮೆಟ್ ಬಗ್ಗೆ ಎಚ್ಚುತ್ತುಕೊಂಡಿರುವುದು ಹಲವರಿಗೆ ಆಶ್ಚರ್ಯ ತಂದಿದೆ. ರಸ್ತೆ ಸುರಕ್ಷಿತ ನಿಯಮ ಪಾಲನೆ ಆಗಬೇಕೆಂಬುದರಲ್ಲಿ ಎರಡು ಮಾತಿಲ್ಲ. ಇಷ್ಟು ದಿನ ಸುಮ್ಮನಿದ್ದು ಈಗ ಒಮ್ಮೆಲೆ ಐಎಸ್ಐ ಹೆಲ್ಮೆಟ್ ಹಾಕಬೇಕೆಂಬ ನಿಯಮ ಅನುಷ್ಠಾನಕ್ಕೆ ಮುಂದಾಗಿರುವುದು ಯಾಕೆಂದು ಪ್ರಶ್ನಿಸುತ್ತಿದ್ದಾರೆ. ಮಳೆಗಾಲ, ಚಳಿಗಾಲದಲ್ಲಿ ಸುಮ್ಮನಿದ್ದ ಪೊಲೀಸ್ ಇಲಾಖೆ, ಬಿರು ಬೇಸಿಗೆಯಲ್ಲಿಯೇ ಏಕಾಏಕಿ ಪೂರ್ಣ ಹೆಲ್ಮೆಟ್ ಕಡ್ಡಾಯ ಆಂದೋಲನ ಮಾಡುತ್ತಿದೆ. ಇಷ್ಟು ದಿನ ಇಲಾಖೆ ಯಾಕೆ ಸುಮ್ಮನಿತ್ತು? ಹಾಫ್ ಹೆಲ್ಮೆಟ್ ಇಲ್ಲಿ ತನಕ ಗೋಚರವಾಗಲಿಲ್ಲವೇ ಎಂಬ ಪ್ರಶ್ನೆ ಹಲವು ಸವಾರರು ಎತ್ತ ತೊಡಗಿದ್ದಾರೆ.

ಬೇಸಿಗೆ ಪ್ರಾರಂಭದಲ್ಲಿಯೇ ಉಷ್ಣಾಂಶ 35 ಡಿಗ್ರಿ ಸೆಲ್ಸಿಯಸ್ ದಾಟುತ್ತಿದ್ದು, ಜನ ಈಗಲೇ ನಿಟ್ಟುಸಿರು ಬಿಡುವಂತಾಗಿದೆ. ಉಂಷ್ಣಾಂಶ ಮತ್ತಷ್ಟು ಹೆಚ್ಚಾಗಲಿದೆಯೆಂಬ ಅಭಿಪ್ರಾಯ ಹವಾಮಾನ ಇಲಾಖೆ ಮನ್ಸೂಚನೆ ನೀಡಿದೆ. ಇಂಥ ಸಮಯದಲ್ಲಿ ಪೊಲೀಸರು ಐಎಸ್ಐ ಮಾರ್ಕಿನ ಹೆಲ್ಮೆಟ್ ಮಾತ್ರ ಧರಿಸಬೇಕೆಂದು ಅಭಿಯಾನ ಪ್ರಾರಂಭಿಸಿರುವುದು ಬೈಕ್ ಸವಾರರಿಗೆ ಸಂಕಟ ತಂದಿದೆ.

ಕೆಲವರು ಹಾಫ್ ಹೆಲ್ಮೆಟ್ ಇಟ್ಕೊಂಡು ಪೊಲೀಸರು ಕಂಡೊಡನೆ ಹಾಕಿಕೊಂಡ ನೆಪ ಮಾಡುತ್ತಿದ್ದರು. ಇದನ್ನೆಲ್ಲ ಗಮನಿಸಿದ ಪೊಲೀಸ್ ಇಲಾಖೆ ಪೂರ್ಣ ಪ್ರಮಾಣದ ಹೆಲ್ಮೆಟ್ ಹಾಕುವಂತೆ ಎಸ್ಪಿ ಆದಿಯಾಗಿ ಎಲ್ಲ ಅಧಿಕಾರಿಗಳು, ಪೊಲೀಸರು ಬೀದಿಗಿಳಿದು ಜನರಿಗೆ ಸೂಚನೆ ನೀಡಿದ್ದಾರೆ.

ಈಗ ಪೊಲೀಸರು ಹಾಫ್ ಹೆಲ್ಮೆಟ್ ಬೈಕ್ ಸವಾರರಿಂದ ಕಸಿದುಕೊಂಡು ರಾಶಿ ಹಾಕಿಕೊಂಡಿದ್ದಾರೆ. ಪ್ರಸ್ತುತ ಒಂದು ಅಂದಾಜಿನ ಪರಕಾರ ಶೇ.40ರಷ್ಟು ಬೈಕ್ ಸವಾರರು ಮಾತ್ರ ಹಾಫ್ ಹೆಲ್ಮೆಟ್ ಮಾತ್ರ ಹೊಂದಿದ್ದಾರೆ. ಹೀಗಾಗಿ ಐಎಸ್ಐ ಹೆಲ್ಮೆಟ್ ಖರೀದಿ ಮಾಡುವುದು ಸವಾರರಿಗೆ ಅನಿವಾರ್ಯವಾಗಲಿದೆ.

### ಮಹಾಕುಂಭಮೇಳಕ್ಕೆ ಕುಟುಂಬ ಸದಸ್ಯರೊಂದಿಗೆ ಭೇಟಿ ಕೊಟ್ಟ ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್

## ತ್ರಿವೇಣಿ ಸಂಗಮದಲ್ಲಿ ಭಗವಂತನ ಅನುಗ್ರಹ ಪಡೆದೆ



**ದಾವಣಗೆರೆ:** ಉತ್ತರ ಪ್ರದೇಶದ ಪ್ರಯಾಗ್ ರಾಜ್‌ನಲ್ಲಿ ನಡೆಯುತ್ತಿರುವ ಮಹಾಕುಂಭಮೇಳದಲ್ಲಿ ಕುಟುಂಬ ಸದಸ್ಯರೊಂದಿಗೆ ದಾವಣಗೆರೆ ಸಂಸದರಾದ ಡಾ. ಪ್ರಭಾ ಮಲ್ಲಿಕಾರ್ಜುನ್ ಭೇಟಿ ನೀಡಿದ್ದರು.

ಈ ವೇಳೆ ತಮ್ಮ ಅನಿಸಿಕೆ ಹಂಚಿಕೊಂಡಿರುವ ಸಂಸದರು ತ್ರಿವೇಣಿ ಸಂಗಮದಲ್ಲಿ ಪುಣ್ಯತೆಯ ಅನುಭವ ಪಡೆಯಲಾಯಿತು. ಸಾವಿರಾರು ಭಕ್ತರ ನಡುವೆ ಪವಿತ್ರ ಸಂಗಮದಲ್ಲಿ ಮಿಂದೇಳಲಾಯಿತು. ತಂಪಾದ ನೀರಿನ ಸ್ಪರ್ಶದಿಂದ ಮನಸ್ಸು ಚೈತನ್ಯಗೊಂಡಿತು ಎಂದು ತಿಳಿಸಿದ್ದಾರೆ.

ನಾನು ಅಲ್ಲಿ ಕಂಡ ನೋಟಗಳು ಅಪರೂಪದವು. ನಾಗಾ ಸನ್ಯಾಸಿಗಳ ಅದ್ಭುತ ಸನ್ನಿಧಾನ, ಗಂಗಾ ಆರತಿಯ ಪವಿತ್ರ ಜ್ಯೋತಿ, ಸನ್ಯಾಸಿಗಳು ಮತ್ತು ಭಕ್ತರ ಜಪ–ತಪದ ಆಧ್ಯಾತ್ಮಿಕ ಶಕ್ತಿ ಅಲ್ಲಿ ಕಂಡುಬಂದಿತು. ಸಂಗಮದ ತೀರದಲ್ಲಿ ಹೋಮ, ಯಜ್ಞ ಮತ್ತು ಪ್ರವಚನಗಳ ಧಾರ್ಮಿಕ ವಾತಾವರಣ ನಿರ್ಮಾಣವಾಗಿತ್ತು ಎಂದು ಬಣ್ಣಿಸಿದ್ದಾರೆ.

ಆ ಕ್ಷಣ ನಾನು ಕೂಡ ಭಗವಂತನ ಅನುಗ್ರಹವನ್ನು ಅನುಭವಿಸಿದೆ. ನಂಬಿಕೆ, ಭಕ್ತಿ ಮತ್ತು ಶ್ರದ್ಧೆಯಿಂದ ತುಂಬಿದ ಆ ಕ್ಷಣಗಳು ನನ್ನ ಮನಸ್ಸಿಗೆ ಶಾಂತಿ ಮತ್ತು ಸಂತೋಷ ತಂದಿತು ಎಂದು ಡಾ. ಪ್ರಭಾ ಮಲ್ಲಿಕಾರ್ಜುನ್ ಹೇಳಿದ್ದಾರೆ. ಈ ವೇಳೆ ಪುತ್ರ ಸಮರ್ಥ ಶಾಮನೂರು, ಪುತ್ರಿ ಡಾ.ಶ್ರೇಷ್ಠಾ ಮತ್ತಿತರರು ಇದ್ದರು.

## ಮೈಕ್ರೋ ಫೈನಾನ್ಸ್ ಸಾಲ ವಸೂಲಾತಿ ದೌರ್ಜನ್ಯ ಖಂಡಿಸಿ ಪ್ರತಿಭಟನೆ

**ಜಗಳೂರು:** ಮೈಕ್ರೋ ಫೈನಾನ್ಸ್ ಗಳ ಸಾಲ ವಸೂಲಾತಿ ದೌರ್ಜನ್ಯ ಖಂಡಿಸಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ (ಹುಚ್ಚವ್ವನಹಳ್ಳಿ ಮಂಜುನಾಥ್)ಬಣದ ನೇತೃತ್ವದಲ್ಲಿ ರೈತರು ಪ್ರತಿಭಟನೆ ನಡೆಸಿದರು.

ಸೋಮವಾರ ಪಟ್ಟಣದ ಪ್ರವಾಸಿ ಮಂದಿರದಿಂದ ಹೊರಟ ಪ್ರತಿಭಟನಾಕಾರರು ಮಹಾತ್ಮಗಾಂಧಿ ವೃತ್ತ, ಹೊಸ ಬಸ್ ನಿಲ್ದಾಣ, ಅಂಬೇಡ್ಕರ್ ವೃತ್ತದ ಮೂಲಕ ಫೈನಾನ್ಸ್ ಗಳ ವಿರುದ್ಧ ಧಿಕ್ಕಾರ ಕೂಗುತ್ತಾ ತಾಲ್ಲೂಕು ಕಛೇರಿ ಮುಂಬಾಗ ಜಮಾಯಿಸಿ ಗ್ರೇಡ್ –2 ತಹಶೀಲ್ದಾರ್ ಮಂಜಾನಂದ ಅವರಿಗೆ ಮನವಿ ಸಲ್ಲಿಸಿದರು.

ಸಂಘಟನೆ ಜಿಲ್ಲಾ ಕಾರ್ಯದರ್ಶಿ ಗೌಡಗೊಂಡನಹಳ್ಳಿ ಸತೀಶ್ ಮಾತನಾಡಿ,'ತಾಲೂಕಿನಲ್ಲಿ ಮೈಕ್ರೋ ಫೈನಾನ್ಸ್ ಸಂಸ್ಥೆಗಳಾದ ಎಲ್ ಎನ್ ಟಿ,ಚೈತನ್ಯ,ಡಿಸಿಬಿ, ಧರ್ಮಸ್ಥಳ,ಎಸ್ ಕೆಎಸ್, ಬೇಲ್ ಸ್ಟಾರ್,




ಗ್ರಾಮೀಣಕೂಟ, ನಬಾರ್ಡ್, ಮುತ್ತೂಟ್, ಸೇರಿದಂತೆ ಇನ್ನಿತರೆ ಖಾಸಗಿ ಫೈನಾನ್ಸ್ ಗಳ ವಸೂಲಿಗಾರರು ರೈತರಮೇಲೆ ಬಲವಂತವಾಗಿ ಹಣ ವಸೂಲಿಮಾಡುತ್ತಿರುವುದರಿಂದ ಮನನೊಂದು ರೈತರು ಆತ್ಮಹತ್ಯೆಯತ್ತ ಮುಖಮಾಡುತ್ತಿದ್ದಾರೆ. ಟ್ರ್ಯಾಕ್ಟರ್ ಗಳನ್ನು ಗೂಂಡಾಗಳನ್ನುಬಿಟ್ಟು ಸೀಜ್ ಮಾಡಲಾಗುತ್ತಿದೆ. ಪ್ರಸಕ್ತಸಾಲಿನಲ್ಲಿ ಅತಿವೃಷ್ಟಿಯಿಂದ ರೈತ ಕಾರ್ಮಿಕರು, ಮಹಿಳೆಯರು ಆರ್ಥಿಕ ಸಂಕಷ್ಟ ಎದುರಿಸುತ್ತಿದ್ದು ಬದುಕು ದುಸ್ತರವಾಗಿದೆ. ಉದ್ಯೋಗ ಹರಸಿ ಗುಳೆ ಹೋಗುತ್ತಿದ್ದಾರೆ ಈ ಮಧ್ಯೆ ಫೈನಾನ್ಸ್ ಗಳ ಸಾಲ ವಸೂಲಾತಿ ಮಾನಸಿಕ ಹಿಂಸೆ ಸಲ್ಲದು.ಕೂಡಲೇ ಕಡಿವಾಣ ಹಾಕಬೇಕು ಕಾಲಾವಕಾಶ ನೀಡಬೇಕು ಎಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಸಂಘಟನೆ ತಾಲ್ಲೂಕು ಅಧ್ಯಕ್ಷ ಚಿರಂಜೀವಿ ಸಿ.ಎಂ. ಹೊಳೆ, ತಾಲ್ಲೂಕು ಪ್ರಧಾನಕಾರ್ಯದರ್ಶಿ ರಾಜನಹಟ್ಟಿ ರಾಜು, ಪದಾಧಿಕಾರಿಗಳಾದ ಕಾನನಕಟ್ಟೆ ತಿಪ್ಪೇಸ್ವಾಮಿ, ಅಂಜಿನಪ್ಪ, ಅನಿಲ್ ಕುಮಾರ್, ಹುಸೇನ್ ಪೀರ್, ಬಸವರಾಜ್, ಮಲ್ಲೇಶ್, ಚಿಕ್ರೇಶ್, ಅನಿಲ್, ಶರಣಪ್ಪ, ರಂಗಪ್ಪ, ಮಲ್ಲೇಶ್, ವೀರೇಶ್, ಪರುಶರಾಮಪ್ಪ ಇನ್ನಿತರರು ಭಾಗವಹಿಸಿದ್ದರು.

## ವಾಣಿಜ್ಯ ಮಳಿಗೆಗಳ ಮರು ಹರಾಜು ಪ್ರಕ್ರಿಯೆಗೆ ಆಗ್ರಹಿಸಿ ಅರೆಬೆತ್ತಲೆ ಪ್ರತಿಭಟನೆ

**ದಾವಣಗೆರೆ:** ಹರಿಹರ ತಾಲ್ಲೂಕು ಕ್ರೀಡಾಂಗಣದ ನೆಲ ಮತ್ತು ಮಹಡಿಯ 50 ವಾಣಿಜ್ಯ ಮಳಿಗೆಗಳ ಕರಾರು ಅವಧಿ 2019ಕ್ಕೆ ಮುಗಿದಿದ್ದರೂ ಸಹ ಹರಾಜು ಪ್ರಕ್ರಿಯೆ ನಡೆಸಿರುವುದಿಲ್ಲ. ಈ ಸಂಬಂಧ ಕಳೆದ 141 ದಿನಗಳವರೆಗೂ ಜಯಕರ್ನಾಟಕ ಸಂಘಟನೆ ವತಿಯಿಂದ ಅಹಿಂಸಾತ್ಮಕ ಧರಣಿ ಸತ್ಯಾಗ್ರಹ ಹಾಗೂ ಪ್ರತಿಭಟನೆ ನಡೆಸುತ್ತಿದ್ದರೂ ನ್ಯಾಯ ದೊರಕದ ಕಾರಣ ಸೋಮವಾರ ಬೆಳಗ್ಗೆ ದಾವಣಗೆರೆಯ ಅಂಬೇಡ್ಕರ್ ಸರ್ಕಲ್ ಬಳಿ ಅರೆಬೆತ್ತಲೆಯಾಗಿ ಹಾಗೂ ಕಣ್ಣಿಗೆ ಕಪ್ಪು ಬಟ್ಟೆ ಧರಿಸಿ ಪ್ರತಿಭಟಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಜಯಕರ್ನಾಟಕ ಸಂಘಟನೆಯ ತಾಲ್ಲೂಕು ಅಧ್ಯಕ್ಷ ಎಸ್. ಗೋವಿಂದ್ ಮಾತನಾಡಿ,

ಹರಿಹರ ನಗರಸಭೆ ವ್ಯಾಪ್ತಿಯಲ್ಲಿ ಬರುವ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಅಧೀನದಲ್ಲಿ ಒಟ್ಟು 50 ಮಳಿಗೆಗಳು ಇದ್ದು,



ಸದರಿ ಮಳಿಗೆಗಳ ಬಾಡಿಗೆ ಕರಾರು ಅವಧಿಯು 2019 ರಲ್ಲಿ ಪೂರ್ಣಗೊಂಡಿರುವ ಕಾರಣ ಕೆಲ ಮಳಿಗೆಗಳ ಬಾಡಿಗೆದಾರರು ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿರುವುದ್ದು, ಇನ್ನುಳಿದ ಮಳಿಗೆ ಬಾಡಿಗೆದಾರರು ಪರವಾನಿಗೆ ಪಡೆಯದೆ ಇರುವುದು ಕಾನೂನು ಬಾಹಿರವಾಗಿರುತ್ತದೆ. ಹಾಗೂ ಅನಧಿಕೃತವಾಗಿ ಇಲ್ಲಿಯವರೆಗೆ ನಗರಸಭೆ ವತಿಯಿಂದ ಪರವಾನಿಗೆ ನವೀಕರಿಸದಿರುವುದರಿಂದ ಸರ್ಕಾರಕ್ಕೆ ಅಪಾರ ನಷ್ಟವಾಗಿದೆ ಎಂದು ಆರೋಪಿಸಿದರು.

ಅಲ್ಲದೆ, ಕಾನೂನು ಬಾಹಿರವಾಗಿ ಬಹುತೇಕ ಒಳಬಾಡಿಗೆ ನೀಡಿ ಬೇರೆ ಮಳಿಗೆ ಬಾಡಿಗೆದಾರರು ಉದ್ದಿಮೆಯನ್ನು ನಡೆಸುತ್ತಿರುವ ಕಾರಣ ಸಂಬಂಧಪಟ್ಟ ಎಲ್ಲಾ ಇಲಾಖೆ ಅಧಿಕಾರಿಗಳಿಗೂ, ಸರ್ಕಾರಕ್ಕೂ ಹಲವಾರು ಬಾರಿ ಮನವಿ ಸಲ್ಲಿಸಿದರೂ ಸಹ ಕ್ರೀಡಾ ಇಲಾಖೆಯವರ ನಿರ್ಲಕ್ಷ್ಯತನ ಹಾಗೂ ಜಿಲ್ಲಾಡಳಿತ ವಿಫಲವಾಗಿರುವ ಹಿನ್ನೆಲೆಯಲ್ಲಿ ಆರ್ಥಿಕವಾಗಿ ಹಿಂದುಳಿದ ಬಡ ಸಾರ್ವಜನಿಕರಿಗೆ ಉದ್ಯೋಗವಿಲ್ಲದೆ ವಂಚಿತರಾಗಿದ್ದಾರೆ.

ಸಾರ್ವಜನಿಕ ಹಿತದೃಷ್ಟಿಯಿಂದ ಕೂಡಲೇ ಮರು ಹರಾಜು ಪ್ರಕ್ರಿಯೆ ಕೈಗೊಳ್ಳಬೇಕೆಂದು ಕಳೆದ 141 ದಿನಗಳಿಂದ ನಿರಂತರವಾಗಿ ಹರಿಹರ ನಗರದಲ್ಲಿ ಧರಣಿ ನಡೆಸಿದರೂ,

ಇದುವರೆಗೂ ಸಂಬಂಧಪಟ್ಟ ಇಲಾಖಾಧಿಕಾರಿಗಳು ಯಾವುದೇ ಮಳಿಗೆಗಳ ಹರಾಜು ಪ್ರಕ್ರಿಯೆ ಕೈಗೊಂಡಿಲ್ಲ. ಇಂದಿನ ಪ್ರತಿಭಟನೆ ಮೂಲಕ ಇಲಾಖೆ ಅಧಿಕಾರಿಗಳ ನಡೆಯನ್ನು ತೀವ್ರವಾಗಿ ಖಂಡಿಸುತ್ತಿದ್ದು, ಕೂಡಲೇ ಮರು ಹರಾಜು ಪ್ರಕ್ರಿಯೆ ನಡೆಸುವಂತೆ ಆಗ್ರಹಿಸುತ್ತಿರುವುದಾಗಿ ಹೇಳಿದರು. ಈ ಸಂದರ್ಭದಲ್ಲಿ ಸಂಘಟನೆಯ ಪದಾಧಿಕಾರಿಗಳು, ಸದಸ್ಯರು ಪಾಲ್ಗೊಂಡಿದ್ದರು.

## ಗುಣಮಟ್ಟದ ರಸ್ತೆ ದುರಸ್ತಿ ಕಾಮಗಾರಿಗೆ ಒತ್ತು ಕೊಡಿ: ಶಾಸಕ ಕೆ.ಎಸ್. ಬಸವಂತಪ್ಪ ತಾಕೀತು

**ದಾವಣಗೆರೆ:** ದುರಸ್ತಿ ಮಾಡಿ ತಿಂಗಳು ಕಳೆಯುವುದರೊಳಗೆ ಕಿತ್ತು ಹೋಗಬಾರದು. ತಾತ್ಕಾಲಿಕ ದುರಸ್ತಿ ಮಾಡಿದರೂ ದೀರ್ಘ ಕಾಲ ಬಾಳಿಕೆ ಬರುವಂತಿರಬೇಕು ಎಂದು ಗುತ್ತಿಗೆದಾರನಿಗೆ ಶಾಸಕ ಕೆ.ಎಸ್. ಬಸವಂತಪ್ಪ ತಾಕೀತು ಮಾಡಿದರು.

ತಾಲ್ಲೂಕಿನ ಗುಡಾಳು,ಹಾಲುವರ್ತಿ, ಕೆಂಚಮ್ಮನಹಳ್ಳಿ ಮಾರ್ಗದ ಲೋಕೋಪಯೋಗಿ ಇಲಾಖೆಗೆ ಒಳಪಡುವ ರಸ್ತೆಗೆ ತಾತ್ಕಾಲಿಕ ಡಾಂಬರೀಕರಣ ದುರಸ್ತಿ ಕಾಮಗಾರಿ ಸ್ಥಳಕ್ಕೆ ಸೋಮವಾರ ಭೇಟಿ ನೀಡಿ, ನಡೆಯುತ್ತಿದ್ದ ದುರಸ್ತಿ ಕಾಮಗಾರಿ ಪರಿಶೀಲನೆ ನಡೆಸಿದರು.



ಗುಡಾಳು–ಕೆಂಚಮ್ಮನಹಳ್ಳಿ ಗ್ರಾಮಗಳ ಸಂಪರ್ಕ ಮಾಡುವ ರಸ್ತೆಯ ಮಧ್ಯೆ ಕೆಲವೆಡೆ ಗುಂಡಿಗಳು ಬಿದ್ದು ಹದಗೆಟ್ಟಿತ್ತು. ತಾತ್ಕಾಲಿಕ ರಸ್ತೆ ದುರಸ್ತಿ ಡಾಂಬರೀಕರಣ ಕಾಮಗಾರಿ ನಡೆಯುತ್ತಿದ್ದು, ಖುದ್ದು ಸ್ಥಳಕ್ಕೆ ಭೇಟಿ ನೀಡಿ ಗುಣಮಟ್ಟ ಪರಿಶೀಲಿಸಿದರು.

ತಾತ್ಕಾಲಿಕ ರಸ್ತೆ ದುರಸ್ತಿ ಕಾಮಗಾರಿಯು ನೂರಾರು ವಾಹನಗಳು ಓಡಾಡಿದ ಮೇಲೆ ಕಿತ್ತು ಹೋಗಿರುತ್ತದೆ. ಇದು ಆಗಬಾರದು. ಶಾಶ್ವತ ಕಾಮಗಾರಿ ಕೈಗೊಳ್ಳುವವರೆಗೆ (3ನೇ ಪುಟಕ್ಕೆ

# ಇಂದಿನ ರಾಶಿ ಭವಿಷ್ಯ

### ಮೇಷ ರಾಶಿ

ಎಣ್ಣೆಯುಕ್ತ ಮತ್ತು ಮಸಾಲೆಯುಕ್ತ ಆಹಾರ ತಪ್ಪಿಸಿ. ದಿನದ ಆರಂಭದಲ್ಲಿ ಇಂದು ನೀವು ಯಾವುದೇ ಆರ್ಥಿಕ ನಷ್ಟವನ್ನು ಹೊಂದಿರಬಹುದು. ಇದರಿಂದ ನಿಮ್ಮ ಪೂರ್ತಿ ದಿನ ಹದಗೆಡಬಹುದು. ನಿಮ್ಮ ಮಕ್ಕಳ ಸಮಸ್ಯೆಗಳನ್ನು ನಿಭಾಯಿಸಲು ಸ್ವಲ್ಪ ಸಮಯ ತೆಗೆದುಕೊಳ್ಳಿ. ಧೃತಿಗೆಡಬೇಡಿ – ವೈಫಲ್ಯಗಳು ಸಹಜ ಅವುಗಳು ಜೀವನದ ಸೌಂದರ್ಯವಾಗಿವೆ. ಕಡಿಮೆ ಅಡೆತಡೆಗಳೊಂದಿಗೆ–ಇದು ಅದ್ಭುತ ಸಾಧನೆಗಳ ದಿನದಂತೆ ಕಾಣುತ್ತದೆ ತಾವು ಬಯಸಿದ್ದು ಸಿಗದಿದ್ದಲ್ಲಿ ಕಿರಿಕಿಯಾಗಿ ವರ್ತಿಸುವ ಸಹೋದ್ಯೋಗಿಗಳ ಎಚ್ಚರದಿಂದಿರಿ.

### ವೃಷಭ ರಾಶಿ

ಹೆಚ್ಚಿನ ಕ್ಯಾಲೊರಿ ಆಹಾರವನ್ನು ತಪ್ಪಿಸಿ ಮತ್ತು ನಿಮ್ಮ ವ್ಯಾಯಾಮವನ್ನು ಕೈಬಿಡಬೇಡಿ. ಮೌಲ್ಯ ಹೆಚ್ಚಾಗುವ ವಸ್ತುಗಳನ್ನು ಖರೀದಿಸಲು ಪರಿಪೂರ್ಣ ದಿನ. ನಿಮ್ಮ ಅತಿಥಿಗಳ ಜೊತ ಒರಟಾಗಿ ನಡೆದುಕೊಳ್ಳಬೇಡಿ. ನಿಮ್ಮ ವರ್ತನೆ ಕೇವಲ ನಿಮ್ಮ ಕುಟುಂಬಕ್ಕೆ ಮಾತ್ರವೇ ಅಸಮಾಧಾನ ತರದೇ ಸಂಬಂಧಗಳಲ್ಲೂ ಶೂನ್ಯತೆಯನ್ನು ತರಬಹುದು. ನಿಮ್ಮ ಪ್ರೇಮಿಗೆ ಇಷ್ಟವಿಲ್ಲದ ಉಡುಪುಗಳು ಅವರಿಗೆ ಮುಜುಗರ ಉಂಟುಮಾಡಬಹುದಾದ್ದರಿಂದ ಅವುಗಳನ್ನು ಧರಿಸಬೇಡಿ. ನೀವು ಕಷ್ಟಕರವೆಂದು ತೋರುವ ಸಮಸ್ಯೆಗಳನ್ನು ಪರಿಹರಿಸಲು ನಿಮಗಿರುವ ಸಂಪರ್ಕಗಳನ್ನು ಬಳಸಬೇಕಾಗುತ್ತದೆ

### ಮಿಥುನ ರಾಶಿ

ಒಬ್ಬ ಸಂತನಿಂದ ಆಧ್ಯಾತ್ಮಿಕ ಜ್ಞಾನ ಸಾಂತ್ವನ ಮತ್ತು ಆರಾಮವನ್ನು ಒದಗಿಸುತ್ತದೆ. ನಿಮ್ಮ ಖರ್ಚುಗಳನ್ನು ನಿಯಂತ್ರಿಸಲು ಮತ್ತು ಕೇವಲ ಅಗತ್ಯವಾದ ವಸ್ತುಗಳ ಮಾತ್ರ ಇಂದು ಖರೀದಿಸಲು ಪ್ರಯತ್ನಿಸಿ. ಕೌಟುಂಬಿಕ ಸಮಸ್ಯೆಗೆ ಮೊದಲ ಆದ್ಯತೆ ನೀಡಬೇಕು. ನೀವು ವಿಳಂಬವಿಲ್ಲದೇ ಇದನ್ನು ಚರ್ಚಿಸಬೇಕು, ಏಕೆಂದರೆ ಒಮ್ಮೆ ಇದನ್ನು ಬಗೆಹರಿಸಿದ ನಂತರ ಮನೆಯಲ್ಲಿನ ಜೀವನ ನಡೆಸಲು ಹೆಚ್ಚು ಸುಲಭವಾಗುತ್ತದೆ ಮತ್ತು ನಿಮ್ಮ ಕುಟುಂಬದ ಸದಸ್ಯರ ಮೇಲೆ ಪ್ರಭಾವ ಬೀರಲು ನಿಮಗೆ ಯಾವುದೇ ತೊಂದರೆ ಕಂಡುಬರುವುದಿಲ್ಲ.

### ಕರ್ಕ ರಾಶಿ

ಅತ್ಯಂತ ಪ್ರಭಾವಿ ಜನರ ಬೆಂಬಲ ನಿಮ್ಮ ನೈತಿಕ ಸ್ಥೈರ್ಯವನ್ನು ಹೆಚ್ಚಿಸುತ್ತದೆ. ನೀವು ನಿಮ್ಮ ಹೂಡಿಕೆಗಳನ್ನು ಸಂಪ್ರದಾಯಬದ್ಧವಾಗಿ ಉಳಿತಾಯ ಮಾಡಿದರೆ ಹಣ ಮಾಡುತ್ತೀರಿ. ನಿಮಗೆ ಆಶ್ಚರ್ಯವಾಗುವ ಹಾಗೆ ನಿಮ್ಮ ಸಹೋದರ ನಿಮ್ಮನ್ನು ಪಾರು ಮಾಡುತ್ತಾರೆ. ನೀವು ಒಬ್ಬರೊಬ್ಬರನ್ನು ಸಂತೋಷವಾಗಿಡಲು ಒಟ್ಟೊಟ್ಟಿಗೆ ಕೆಲಸ ಮಾಡಬೇಕು.

### ಸಿಂಹ ರಾಶಿ

ಅತ್ಯಂತ ಪ್ರಭಾವಿ ಜನರ ಬೆಂಬಲ ನಿಮ್ಮ ನೈತಿಕ ಸ್ಥೈರ್ಯವನ್ನು ಹೆಚ್ಚಿಸುತ್ತದೆ. ಹಣದ ಲಾಭ ನಿಮ್ಮ ನಿರೀಕ್ಷೆಯಂತಿರುವುದಿಲ್ಲ. ಸ್ನೇಹಿತರು ಜೊತೆಗಿನ ಚಟುವಟಿಕೆಗಳು ಆಹ್ಲಾದಕರವಾಗಿರುತ್ತವೆ – ಇಲ್ಲದಿದ್ದರೆ ನೀವು ಖಾಲಿ ಕೈಯಲ್ಲಿ ಜೊತೆ ತೆರಳುತ್ತೀರಿ. ಪ್ರಣಯದ ಬಂಧಗಳು ನಿಮ್ಮ ಸಂತೋಷವನ್ನು ಆಸಕ್ತಿಕರವಾಗಿಸುತ್ತವೆ. ಇಂದು ಕೆಲಸದಲ್ಲಿ ನಿಮಗೆ ನಿಜಕ್ಕೂ ಒಳ್ಳೆಯದಾಗಬಹುದು, ಇಂದು ನಿಮ್ಮನ್ನು ದ್ವೇಷಿಸುವವರಿಗೆ 'ಹಲೋ' ಎಂದಲ್ಲಿ.

### ಕನ್ಯಾ ರಾಶಿ

ಇಂದು ಆರೋಗ್ಯ ಪರಿಪೂರ್ಣವಾಗಿರುತ್ತದೆ. ಅನಿರೀಕ್ಷಿತ ಬಿಲ್ಲುಗಳು ಹಣಕಾಸಿನ ಹೊರೆಯನ್ನು ಹೆಚ್ಚಿಸುತ್ತದೆ. ಪ್ರೀತಿ ಸಾಂಗತ್ಯ ಮತ್ತು ಬಂಧ ಏರಿಕೆಯಲ್ಲಿರುತ್ತವೆ. ಪ್ರೀತಿ ಇಂದ್ರಿಯಗಳ ಮಿತಿಯನ್ನು ಮೀರಿದ್ದಾಗಿದೆ, ಆದರೆ ನಿಮ್ಮ ಇಂದ್ರಿಯಗಳು ಇಂದು ಪ್ರೀತಿಯ ಭಾವಪರವಶತೆಯನ್ನು ಅನುಭವಿಸುತ್ತವೆ. ನೀವು ಏನೂ ಮಾಡಿದರೂ ಪರಿಪೂರ್ಣವಾಗಿ ಮಾಡುತ್ತೀರಿ – ನಿಮ್ಮ ಸುತ್ತಲಿನವರಿಗೆ ನೀವೆಷ್ಟು ಪರಿಣಾಮಕಾರಿಯೆಂದು ತೋರಿಸುವ ಮೂಲಕ ನಿಮ್ಮ ಮೌಲ್ಯವನ್ನು ಸಾಬೀತು ಮಾಡಿ.

### ತುಲಾ ರಾಶಿ

ಇತ್ತೀಚೆಗೆ ನಿಮ್ಮಲ್ಲಿ ಕೆಲವರು ಓವರ್ಟೈಮ್ ಮಾಡುತ್ತಿರುತ್ತಾರೆ ಹಾಗೂ ನಿಮ್ಮ ಚೈತನ್ಯ ಉಡುಗುತ್ತಿರುತ್ತದೆ– ಇಂದು ನೀವು ಒತ್ತಡ ಹಾಗೂ ಸಂದಿಗ್ಧತೆಯನ್ನು ಬಯಸುವುದಿಲ್ಲ. ಯಾವುದೇ ಆಪ್ತ ಸಂಬಂಧಿಕರ ಬೆಂಬಲದಿಂದ ನೀವು ನಿಮ್ಮ ವ್ಯಾಪಾರದಲ್ಲಿ ಉತ್ತಮವಾಗಿ ಮಾಡಬಹುದು. ಇದು ನಿಮಗೆ ಆರ್ಥಿಕ ಲಾಭವನ್ನು ನೀಡುತ್ತದೆ. ಒಬ್ಬ ಹತ್ತಿರದ ಸಂಬಂಧಿಗೆ ಹೆಚ್ಚು ಗಮನ ನೀಡಬೇಕಾಗಬಹುದಾದರೂ ಅವರು ಬೆಂಬಲ ಮತ್ತು ಆರೈಕೆ ನೀಡಬಹುದು. ಪ್ರಣಯದ ಅವಕಾಶಗಳಿವೆ – ಆದರೆ ಅವು ಕ್ಷಣಿಕವಾಗಿರುತ್ತವೆ

### ವೃಶ್ಚಿಕ ರಾಶಿ

ನಿಮ್ಮ ಮಗುವಿನಂಥ ಸ್ವಭಾವ ಕಾಣಿಸಿಕೊಳ್ಳುತ್ತದೆ ಮತ್ತು ನೀವು ಒಂದು ಆಹ್ಲಾದಕಾರಿ ಮನಸ್ಥಿತಿಯಲ್ಲಿರುತ್ತೀರಿ. ತಮ್ಮ ವ್ಯಾಪರಕ್ಕಾಗಿ ಮನೆಯಿಂದ ಹೊರಗೆ ಹೋಗಿರುವ ವ್ಯಾಪಾರಿಗಳು, ತನ್ನ ಹಣವನ್ನು ಜಾಗರೂಕವಾಗಿಡಿ, ಹಣದ ಕಳ್ಳತನವಾಗುವ ಸಾಧ್ಯತೆ ಇದೆ. ಥಿಯೇಟರ್ ಅಥವಾ ನಿಮ್ಮ ಸಂಗಾತಿಯ ಜೊತೆಗಿನ ಊಟ ನಿಮ್ಮನ್ನು ಒಂದು ಶಾಂತವಾದ ಮತ್ತು ಅದ್ಭುತ ಲಹರಿಯಲ್ಲಿರಿಸುವಂತೆ ತೋರುತ್ತದೆ.

### ಧನು ರಾಶಿ

ಕ್ರೀಡೆಗಳು ಸಾರ್ವಕಾಲಿಕ ಯೌವನದ ರಹಸ್ಯವಾಗಿದ್ದರಿಂದ ಯಾವುದಾದರೂ ಆಟಗಳಲ್ಲಿ ನಿಮ್ಮನ್ನು ತೊಡಗಿಸಿಕೊಳ್ಳಿ. ಇಂದು ಹಣದ ಆಗಮನವು ನಿಮ್ಮನ್ನು ಯಾವುದೇ ಸಮಸ್ಯೆಗಳಿಂದ ಮುಕ್ತಗೊಳಿಸಬಹುದು ನಿಮ್ಮ ಸಹಾನುಭೂತಿ ಮತ್ತು ತಿಳುವಳಿಕೆಗೆ ಪ್ರತಿಫಲ ದೊರಕುತ್ತದೆ. ಆದರೆ ಯಾವುದೇ ಆತುರದ ತೀರ್ಮಾನ ಒತ್ತಡ ಉಂಟುಮಾಡಬಹುದಾದ್ದರಿಂದ ಎಚ್ಚರಿಕೆಯಿಂದಿರಿ.

### ಮಕರ ರಾಶಿ

ನಿಮ್ಮ ಚಿಂತನೆ ಮತ್ತು ಶಕ್ತಿಯನ್ನು ನೀವು ವಾಸ್ತವವಾಗಿ ಏನನ್ನು ನೋಡಬಯಸುತ್ತೀರೋ ಅದನ್ನು ಸಾಧಿಸುವಲ್ಲಿ ನಿರ್ದೇಶಿಸಿ. ಇದುವರೆಗೆ ನಿಮ್ಮ ಸಮಸ್ಯೆಯಂದರೆ ನೀವು ಪ್ರಯತ್ನಿಸದೇ ಕೇವಲ ಆಸೆಪಡುತ್ತೀರಿ. ನಿಮ್ಮ ಹಿಂದಿನ ಸಾಲವನ್ನು ಇಂದಿನ ವರೆಗೂ ಮರುಪಾವತಿ ಮಾಡದೇ ಇರುವ ನಿಮ್ಮ ಸಂಬಂಧಿಕರಿಗೆ ಇಂದು ಸಾಲ ಕೊಡಬಾರದು. ಸ್ನೇಹಿತರು ಜೊತೆಗಿನ ಚಟುವಟಿಕೆಗಳು ಆಹ್ಲಾದಕರವಾಗಿರುತ್ತವೆ – ಇಲ್ಲದಿದ್ದರೆ ನೀವು ಖಾಲಿ ಕೈಯಲ್ಲಿ ಜೊತೆ ತೆರಳುತ್ತೀರಿ.

### ಕುಂಭ ರಾಶಿ

ಇಂದು ಆರೋಗ್ಯ ಪರಿಪೂರ್ಣವಾಗಿರುತ್ತದೆ. ನಿಮ್ಮ ಜೀವನ ಸಂಗಾತಿಯೊಂದಿಗೆ ಸೇರಿ ಇಂದು ನೀವು ಭವಿಷ್ಯಕ್ಕೆ ಯಾವುದೇ ಆರ್ಥಿಕ ಯೋಜನೆಯನ್ನು ಮಾಡಬಹುದು ಮತ್ತು ಈ ಯೋಜನೆ ಯಶಸ್ವಿಯಾಗಲಿದೆ ಎಂದು ಭರವಸೆ ಇದೆ. ಇಂದು ನೀವು ಇತರರ ಅಗತ್ಯಗಳಿಗೆ ಗಮನ ನೀಡಬೇಕಾದರೂ ಮಕ್ಕಳೊಂದಿಗೆ ಅತೀ ಉದಾರತೆ ತೋರಿಸುವುದು ತೊಂದರೆಗೆ ಕಾರಣವಾಗುತ್ತದೆ.

### ಮೀನ ರಾಶಿ

ನಿಮ್ಮ ನೀಡುವ ವರ್ತನೆ ಪರೋಕ್ಷವಾಗಿ ನಿಮಗೆ ಆಶೀರ್ವಾದವೇ ಆಗುತ್ತದೆ, ಏಕೆಂದರೆ ನೀವು ಅನುಮಾನ, ನಿರಾಸೆ, ವಿಶ್ವಾಸರಾಹಿತ್ಯ ಅಹಂಭಾವ ಮತ್ತು ಅಸೂಯೆಯಂಥ ಅನೇಕ ದುರ್ಗುಣಗಳಿಂದ ಮುಕ್ತಿ ಹೊಂದುವ ಸಾಧ್ಯತೆಗಳಿವೆ. ಇಂದು, ನೀವು ಸಾಕಷ್ಟು ಸಕಾರಾತ್ಮಕತೆಯೊಂದಿಗೆ ಮನೆಯಿಂದ ಹೊರಬರುತ್ತೀರಿ, ಆದರೆ ಕೆಲವು ಅಮೂಲ್ಯ ವಸ್ತುವಿನ ಕಳ್ಳತನದಿಂದಾಗಿ, ನಿಮ್ಮ ಮನಸ್ಥಿತಿಗೆ ತೊಂದರೆಯಾಗಬಹುದು.

# ಕೆಲವೇ ವ್ಯಕ್ತಿಗಳು ಭೌತಿಕವಾಗಿ ನಮ್ಮನ್ನಗಲಿದರೂ ಅವರ ವ್ಯಕ್ತಿತ್ವದ ನೆನಪುಗಳು ನಮ್ಮ ಮನದಂಗಳದಲ್ಲಿ ಸದಾ ಇರುತ್ತವೆ

**ಚಿಕ್ಕಮಗಳೂರು:** ಕೆಲವೇ ವ್ಯಕ್ತಿಗಳು ಭೌತಿಕವಾಗಿ ನಮ್ಮನ್ನಗಲಿದರೂ ಅವರ ವ್ಯಕ್ತಿತ್ವದ ನೆನಪುಗಳು ನಮ್ಮ ಮನದಂಗಳದಲ್ಲಿ ಸದಾಇರುತ್ತವೆ. ಹೀಗೆ ಆಗಾಗ ನೆನಪಿಗೆ ಬರುವ ವ್ಯಕ್ತಿತ್ವ ಹಿ.ನಾ. ತಿಪ್ಪೇಸ್ವಾಮಿಅವರದುಎಂದು ಹಿರಿಯ ಪತ್ರಕರ್ತ ಸ.ಗಿರಿಜಾಶಂಕರ ಹೇಳಿದರು.

ನಗರದ ಕುವೆಂಪು ಕಲಾಮಂದಿರದಲ್ಲಿ ಭಾನುವಾರ ಬೆಳವಾಡಿಯ ಹಿ.ನಾ. ತಿಪ್ಪೇಸ್ವಾಮಿಕುಟುಂಬ ಹಾಗೂ ಉದ್ಭವ ಪ್ರಕಾಶನಟ್ರಸ್ಟ್ ಏರ್ಪಡಿಸಿದ್ದ ತಿಪ್ಪೇಸ್ವಾಮಿಅವರ ನೂರರಸಂಸ್ಮರಣೆ ಮತ್ತು ಡಾ.ಬೆಳವಾಡಿ ಮಂಜುನಾಥ್‌ಅವರ ಪಿಎಚ್.,ಡಿ ಪದವಿಯ ಸಂಶೋಧನಾ ಪ್ರಬಂಧ 'ಸತ್ಯವಿಠಲ ಅವರ ಕಾವ್ಯಗಳ ಸಮಗ್ರಅಧ್ಯಯನ ದಕೃತಿ ಬಿಡುಗಡೆ ಸಮಾರಂಭದಲ್ಲಿತಿಪ್ಪೇಸ್ವಾಮಿಅವರಿಗೆ ನುಡಿನಮನ ಸಲ್ಲಿಸಿ ಮಾತನಾಡಿದರು.ಸಮಾಜಮುಖಿ ವ್ಯಕ್ತಿತ್ವದ ಚಟುವಟಿಕೆಗಳು, ಅವರ ಸ್ವಭಾವ, ಮಾತು ಪ್ರತಿಯೊಂದು ಸಹ ನೆನಪನ್ನು ಮೊಗೆದು ನೀಡುತ್ತದೆ.ಇಂಥ ವ್ಯಕ್ತಿಗಳ ಸಾಲಿಗೆ ಸೇರಿದವರುತಿಪ್ಪೇಸ್ವಾಮಿಎಂದುಅವರುನುಡಿದರು.

ತಿಪ್ಪೇಸ್ವಾಮಿ ಅನ್ಯಾಯಕ್ಕೆಎಂದೂತಲೆಬಾಗಿದವರಲ್ಲ. ಮನೆಯವರಿಂದಾಗಲಿ ಅಥವಾ ಹೊರಗಿನವರಿಂದಾಗಲಿ ಅನ್ಯಾಯವಾಗುವುದನ್ನು ಸಹಿಸದೆತೀವ್ರವಾಗಿ ವಿರೋಧಿಸುತ್ತಿದ್ದರು. ಅವರಿದ್ದರಾಜಕೀಯ ಪಕ್ಷದಲ್ಲೂಎಂದೂ ಸಹ ಅನ್ಯಾಯ ಮತ್ತು ಭ್ರಷ್ಟಾಚಾರದ ಪ್ರಸಂಗಗಳು ಎದುರಾದಲ್ಲಿ ನೇರವಾಗಿಯೇ ಪ್ರತಿಭಟಿಸುತ್ತಿದ್ದರು.ಅವರ ವ್ಯಕ್ತಿತ್ವವೇ'ವಜ್ರಾದಪಿ ಕಠೋರಾಣಿ ಮೃದು ನಿಕುಸುಮಾದಪಿ?ಎನ್ನುವಂತಿತ್ತು.ಮೃದುತ್ವ ಮತ್ತುಕಾಠಿಣ್ಯಅವರ ವ್ಯಕ್ತಿತ್ವದ ಹಿರಿಮೆ. ತಿಪ್ಪೇಸ್ವಾಮಿಯವರದುಕೊಡುವಕೈಯಾಗಿತ್ತೇ ಹೊರತು ಕೇಳುವ ಕೈ ಆಗಿರಲಿಲ್ಲ. ಕೆಲವೊಮ್ಮೆಅವರಕಠಿಣ ನಿರ್ಧಾರಗಳು ಮನೆಯವರನ್ನೂ ಮುಜುಗರಕ್ಕೆ ನೂಕುತ್ತಿತ್ತು. ಆದರೆಎಂದೂ ಸಹ ಅವರ ನಿರ್ಧಾರದಲ್ಲಿ ಬದಲಾವಣೆಆಗುತ್ತಿರಲಿಲ್ಲ. ಹಾಗೆಂದ ಮಾತ್ರಕ್ಕೆಕರುಣೆಇಲ್ಲದ ವ್ಯಕ್ತಿಯಲ್ಲ, ಸಹಾಯ ಬಯಸಿ ಬಂದವರ ನೆರವಿಗೂಧಾವಿಸುವ ಮೃದುಸಹೃದಯಿಅವರುಎಂದು ತಿಳಿಸಿದರು.



ನಗರದ ಕುವೆಂಪು ಕಲಾಮಂದಿರದಲ್ಲಿ ಭಾನುವಾರ ಏರ್ಪಡಿಸಿದ್ದ ತಿಪ್ಪೇಸ್ವಾಮಿ ಅವರ ನೂರರ ಸಂಸ್ಮರಣೆ ಮತ್ತು ಡಾ.ಬೆಳವಾಡಿ ಮಂಜುನಾಥ್ ಅವರ 'ಸತ್ಯವಿಠಲ ಅವರ ಕಾವ್ಯಗಳ ಸಮಗ್ರ ಅಧ್ಯಯನ ದಕೃತಿ ಬಿಡುಗಡೆ ಸಮಾರಂಭವನ್ನು ಹಿರಿಯ ಚಿತ್ರ ನಟಿ ಡಾ.ಗಿರಿಜಾಲೋಕೇಶ್ ಬಿಡುಗಡೆ ಮಾಡಿದರು.

ಡಾ.ಬೆಳವಾಡಿ ಮಂಜುನಾಥ್ ವಿರಚಿತಸತ್ಯವಿಠಲ ಅವರ ಕಾವ್ಯಗಳ ಸಮಗ್ರಅಧ್ಯಯನ ಮಹಾಪ್ರಬಂಧ ಕುರಿತುವಿಮರ್ಶಕ ಡಾ.ಎಚ್.ಎಸ್.ಸತ್ಯನಾರಾಯಣ್ ಮಾತನಾಡಿ, ಇಂದು ಬರುತ್ತಿರುವ ಪಿಎಚ್.,ಡಿ ಮಹಾ ಪ್ರಬಂಧಗಳು ತಮ್ಮ ಪ್ರೌಢತೆಯನ್ನು ಕಳೆದುಕೊಳ್ಳುತ್ತಿವೆ. ಆದರೆ ಸತ್ಯವಿಠಲ ಅವರ ಸಮಗ್ರ ಕಾವ್ಯಗಳ ಕುರಿತಈ ಮಹಾಪ್ರಬಂಧಅತ್ಯಂತ ಆಳವಾದ ಅಧ್ಯಯನತೌಲನಿಕತೆಯಿಂದಕೂಡಿದೆಎಂದು ಹೇಳಿದರು.

ಮಂಜುನಾಥ್‌ಅವರ ಈ ಬೃಹತ್ಕೃತಿಅವರ ಮಹತ್ತರ ಸಾಧನೆಯದ್ಯೋತಕ. ಮಂಜುನಾಥ್ ಈಗಾಗಲೇ ಪ್ರೌಢ ಲೇಖಕರಾಗಿ ಸಾಹಿತ್ಯ ಲೋಕಕ್ಕೆ ಪರಿಚಿತರಾಗಿದ್ದಾರೆ.ಅವರ 38 ಸ್ವತಂತ್ರ ಕೃತಿಗಳು ಮತ್ತು 37 ಸಂಪಾದನಾ ಗ್ರಂಥಗಳು ಹೊರ ಬಂದಿದ್ದು ಸಹೃದಯರ ಗಮನ ಸೆಳೆದಿವೆ. ಈ ಸಂಶೋಧನಾಗ್ರಂಥಕ್ಕೆ ಮಂಜುನಾಥ್‌ಅವರ ಪ್ರತಿಭೆ ಹಾಗೂ ಶ್ರಮದ ಪಾಲು ಅತ್ಯಂತದೊಡ್ಡದುಎಂದುತಾವು ಭಾವಿಸುವುದಾಗಿ ಹೇಳಿದರು.

ಈ ಕೃತಿಯನ್ನುಓದುವಾಗ ನನ್ನನ್ನು ಸೆಳೆದ ಎರಡು ಪ್ರಮುಖ ಅಂಶಗಳೆಂದರೆ, ಒಂದು ಮಂಜುನಾಥ್‌ಅವರ ಪರಿಶ್ರಮ ಮತ್ತುಕಾವ್ಯ ಶ್ರದ್ಧೆ, ಮತ್ತೊಂದು ಸತ್ಯವಿಠಲ ಅವರು ಸ್ವತಃ ಶಾಸ್ತ್ರೀಯವಾಗಿ ಸಾಹಿತ್ಯಅಧ್ಯಯನ ಮಾಡದಿದ್ದರೂಅವರಿಂದಾಗಿರುವಕಾವ್ಯ ಸೃಷ್ಟಿ. ಅದರಲ್ಲಿ ನಮ್ಮ ಪ್ರಾಚೀನ ಕವಿಗಳ ಕಾವ್ಯ ಪ್ರಯೋಗಗಳನ್ನು ಮುಂದುವರಿಸಿರುವುದು ಹಾಗೂ ಆ ಸಾತತ್ಯವನ್ನುಕಾಪಾಡಿಕೊಂಡಿರುವುದುಅತ್ಯಂತಉಲ್ಲೇಖನೀಯ ಅಂಶ ಎಂದರು.

ಈ ಕೃತಿಯಲ್ಲಿಮಂಜುನಾಥ್ ಆರಿಸಿಕೊಂಡಿರುವ ಭಾಮಿನಿ ಹಾಗೂ ಲಾವಣಿಕಾವ್ಯಪ್ರಕಾರಗಳ ವೈಶಿಷ್ಟ್ಯವನ್ನು ಅತ್ಯಂತ ಸೂಕ್ಷ್ಮವಾಗಿ ಅವಲೋಕಿಸಿದ್ದಾರೆ. ವಿಮರ್ಶಕರದೃಷ್ಟಿಯಿಂದ ಮರೆಯಾಗಿದ್ದ ಸತ್ಯವಿಠಲ ಅವರಂತಹ ಸಾಹಿತ್ಯ ಪ್ರತಿಭೆಯನ್ನು ಗುರುತಿಸಿ ತಮ್ಮ ಸಂಶೋಧನೆಗೆಕೈಗೆತ್ತಿಕೊಂಡಿರುವುದುಅತ್ಯಂತ ಶ್ಲಾಘನೀಯ.ಮಂಜುನಾಥ್‌ಕನ್ನಡಕಾವ್ಯ ಪರಂಪರೆಯಲ್ಲಿಆಗಿರುವಎಲ್ಲಾರೀತಿಯ ಪ್ರಯೋಗಗಳ ನಡುವೆ ಸತ್ಯವಿಠಲ ಅವರ ಕಾವ್ಯಗಳನ್ನು ಇಟ್ಟು ವಿಮರ್ಶಿಸಿರುವುದು ಅತ್ಯಂತ ವೈಶಿಷ್ಟ್ಯಪೂರ್ಣ ಎಂದರು ಸತ್ಯನಾರಾಯಣ ನುಡಿದರು.

ನಾಡಿನಖ್ಯಾತ ಹೋಮಿಯೋಪತಿ ವೈದ್ಯ, ನಾಡೋಜಡಾ.ಬಿ.ಟಿ.ರುದ್ರೇಶ್‌ತಮ್ಮತಂದೆಯ ಬಗ್ಗೆಮಾತನಾಡಿ, ಇಂದು ಕುಟುಂಬಗಳಲ್ಲೇ ಸಂಬಂಧಗಳು ಕ್ಷೀಣಿಸುತ್ತಾ ಬರುತ್ತಿವೆಎಂದು ಸೋದಾರಣವಾಗಿ ವಿವರಿಸಿ, ಅನೇಕ ಬಾರಿತಂದೆ, ಮಗನ ಸಂಬಂಧ ಸಹ ದುರ್ಬಲವಾಗುತ್ತಿದೆ. ತಂದೆಇರುವಾಗಗಟ್ಟಿಯಾಗಿರದ ಸಂಬಂಧಅವರ ಮರಣದ ನಂತರ ಆ ಹಿರಿಯರ ಮಾತುಗಳು ಇಂದು ಪ್ರಸ್ತುತವೆನಿಸುತ್ತದೆ. ನನ್ನತಂದೆ ನಾನು ಬೆಂಗಳೂರಿಗೆ ಹೊರಟಾಗ ಹೇಳಿದ್ದುಮೂರು ಮಾತುಗಳನ್ನು.ನೀನು ಎಲ್ಲಿಗೇ ಹೋಗು, ನಿನ್ನ ಕೈ, ಬಾಯಿ, ಕಚ್ಚೆಯನ್ನು ಶುದ್ಧವಾಗಿಟ್ಟುಕೊಂಡರೆ ಮಾತ್ರಯಶಸ್ಸು ಸಾಧ್ಯಎಂದು.ಅದೀಗ ನಿಜವೆನಿಸುತ್ತಿದೆಎಂದು ಹೇಳಿದರು.

ಅಭಿನಂದನೆ ಸ್ವೀಕರಿಸಿದ ಹಿರಿಯಚಿತ್ರನಟಿಡಾ.ಗಿರಿಜಾಲೋಕೇಶ್ ಮಾತನಾಡಿ, ತಿಪ್ಪೇಸ್ವಾಮಿಯವರ ವ್ಯಕ್ತಿತ್ವಅತ್ಯಂತಅನುಕರಣೀಯ. ಪ್ರಸ್ತುತಕಾಲಘಟ್ಟದಲ್ಲಿ ಈ ಬಗೆಯ ನಿಷ್ಠುರವಾದಿಗಳನ್ನು ಕಾಣುವುದೇಅಪರೂಪ. ಚಿಕ್ಕಮಗಳೂರು ಜಿಲ್ಲೆ ವಿವಿಧ ಕ್ಷೇತ್ರಗಳಲ್ಲಿ ಅಪರೂಪದ ಪ್ರತಿಭಾವಂತರನ್ನು ಹೊಂದಿರುವುದು ಹೆಮ್ಮೆಯ ವಿಷಯ.ಚಿಕ್ಕಮಗಳೂರು ಹಾಗೂ ತಮಗೂಒಂದು ಅವಿನಾಭಾವ ಸಂಬಂಧ'ವಿದೆ.ತೇಜಸ್ವಿಯವರ 'ಅಬಚೂರಿನ ಪೋಸ್ಟಾಫೀಸು? ಚಲನಚಿತ್ರವಾದಾಗಅದರಲ್ಲಿತಮ್ಮ ನಟನೆಗೆ ರಾಷ್ಟ್ರಪ್ರಶಸ್ತಿ ಬಂದಿರುವುದನ್ನು ನೆನಪಿಸಿಕೊಂಡರು.

ಬಹುಮುಖಿ ಆದರ್ಶ ವ್ಯಕ್ತಿತ್ವದತಿಪ್ಪೇಸ್ವಾಮಿಕಿರು ಹೊತ್ತಿಗೆಯನ್ನು ನಟ, ನಿರ್ದೇಶಕಚಂದೋಡಿ ಬಂಗಾರೇಶ್ ಬಿಡುಗಡೆಗೊಳಿಸಿದರು. ಅಧ್ಯಕ್ಷತೆ ವಹಿಸಿದ್ದ ಉದ್ಭವ ಪ್ರಕಾಶನದಅಧ್ಯಕ್ಷ ಡಾ.ಜೆ.ಪಿ.ಕೃಷ್ಣೇಗೌಡ ಮಾತನಾಡಿದರು.ಮಹಾಪ್ರಬಂಧಕೃತಿಕಾರ ಸಾಹಿತಿ ಡಾ.ಬೆಳವಾಡಿ ಮಂಜುನಾಥ್ ಪ್ರಾಸ್ತಾವಿಕವಾಗಿ ಮಾತನಾಡಿದರು.ಬೆಳವಾಡಿಯ ಶಿಕ್ಷಕಿ ರೂಪ ಮತ್ತು ಪತ್ರಿಕಾಛಾಯಾಗ್ರಾಹಕತಾರಾನಾಥ್‌ಕಾಮತ್ ಮಾತನಾಡಿದರು. ನೃತ್ಯಕಲಾವಿದೆ ವಿದುಷಿ ಡಾ.ವಿದ್ಯಾಲಕ್ಷ್ಮೀ, ಮಹಾಚಂದ್ರ ಪ್ರತಿಷ್ಠಾನದರವಿಶಂಕರ್, ಮಾಡೆಲ್‌ಇಂಗ್ಲೀಷ್ ಶಾಲೆಯ ಎಂ.ಎನ್. ಷಡಕ್ಷರಿಅವರನ್ನು ಸನ್ಮಾನಿಸಲಾಯಿತು. ಇಂಜಿನಿಯರ್ ಬಿ.ಟಿ.ವಿಶ್ವನಾಥ್ ಸ್ವಾಗತಿಸಿ, ವಂದಿಸಿದರು. ವಾಸಂತಿ ಪದ್ಮನಾಭ ನಿರೂಪಿಸಿದರು.

## ಸರ್ಕಾರ ನೀಡುವ ಸಲಕರಣೆಗಳನ್ನು ಸದುಪಯೋಗಪಡಿಸಿಕೊಂಡು ಮೀನುಗಾರರು ಆರ್ಥಿಕ ಸದೃಢರಾಗಿ, ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಬೇಕು



**ಚಿಕ್ಕಮಗಳೂರು:** ಸರ್ಕಾರ ನೀಡುವ ಸಲಕರಣೆಗಳನ್ನು ಸದುಪಯೋಗಪಡಿಸಿಕೊಂಡು ಮೀನುಗಾರರುಆರ್ಥಿಕ ಸದೃಢರಾಗಿ, ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಬೇಕುಎಂದು ಶಾಸಕ ಎಚ್.ಡಿ.ತಮ್ಮಯ್ಯ ಸಲಹೆ ಮಾಡಿದರು.

ಅವರು ಭಾನುವಾರ ಮೀನುಗಾರಿಕೆ ಇಲಾಖೆ ವತಿಯಿಂದ ನೀಡಲಾಗುವ ವಿವಿಧ ಸಲಕರಣೆಗಳನ್ನು ಮೀನುಗಾರ ಫಲಾನುಭವಿಗಳಿಗೆ ವಿತರಿಸಿ ನಂತರ ಮಾತನಾಡಿದರು.

ರೈತರಂತೆಯೇ ಮೀನುಗಾರರುಜನತೆಗೆಆಹಾರವನ್ನು ಪೂರೈಕೆ ಮಾಡುವ ಕೆಲಸ ಮಾಡುತ್ತಾರೆಅವರಜೀವರಕ್ಷಣೆಗೂ ಸರ್ಕಾರಕ್ರಮ ವಹಿಸಬೇಕಾಗಿರುವುದು ಸರ್ಕಾರದ ಹೊಣೆಯಾಗಿರುತ್ತದೆ. ಈ ಹಿನ್ನಲೆಯಲ್ಲಿತಾವೇ ಮೊದಲು ಈ ವಿಷಯವನ್ನು ಸರ್ಕಾರದ ಗಮನಕ್ಕೆ ತಂದ ನಂತರರಾಜ್ಯದಾದ್ಯಂತಎಲ್ಲಾ ಮೀನುಗಾರರಿಗೆಜೀವರಕ್ಷಕ ಜಾಕೆಟ್‌ಗಳನ್ನು ವಿತರಿಸುವಕಾರ್ಯಆರಂಭವಾಯಿತುಎಂದರು.

ತೆಪ್ಪ, ದೋಣಿ, ಬಲೆ ಮತ್ತು ಲೈಫ್ ಜಾಕೆಟ್‌ಗಳನ್ನು ವಿತರಿಸಲಾಗುತ್ತಿದೆ. ಇದನ್ನು ಪಡೆದ ಮೀನುಗಾರರುಅದರಲ್ಲಿ ಬರುವಆದಾಯದಲ್ಲಿಉತ್ತಮರೀತಿಕುಟುಂಬ ಸಾಗಿಸುವಂತಾಗಬೇಕು. ಮಕ್ಕಳಿಗೆ ಉತ್ತಮ ವಿದ್ಯಾಭ್ಯಾಸಕೊಡಿಸಬೇಕು.ಎಂದು ತಿಳಿಸಿದರು.

ಮೀನುಗಾರಿಕೆ ಇಲಾಖೆ ಸಹಾಯಕ ನಿರ್ದೇಶಕಿ ಸಿ.ಆರ್.ಕವನ ಮಾತನಾಡಿ, ರಾಜ್ಯ ವಲಯಯೋಜನೆಯಿಂದ 10 ಮಂದಿ ಫಲಾನುಭವಿಗಳಿಗೆ ಸಲಕರಣೆ ವಿತರಿಸಲಾಗಿದೆ. ಜಿಲ್ಲಾ ವಲಯಯೋಜನೆಯಿಂದ ಮತ್ತೊಮ್ಮೆಇತರೆ ಫಲಾನುಭವಿಗಳಿಗೆ ವಿತರಿಸಲಾಗುವುದುಎಂದು ತಿಳಿಸಿದರು.

ಮೀನುಗಾರರ ಸಹಕಾರ ಸಂಘದಅಧ್ಯಕ್ಷರಾಜಾ ಸಾಹೇಬ್, ಗ್ರಾ.ಪಂ.ಸದಸ್ಯ ಮಧುಇತರರು ಹಾಜರಿದ್ದರು.

## ಅಂಜುಮನ್ ವೆಲ್ಫೇರ್ ತಂಡಕ್ಕೆ ಗೆಲುವು



**ಚಿಕ್ಕಮಗಳೂರು:** ನಗರದಅಂಡೆಛತ್ರ ಮುಸಾಫಿರ್‌ಖಾನ್, ಅಂಜುಮನ್ ಇ ಇಸ್ಲಾಮಿಯಾ ಸಂಸ್ಥೆಯ ಆಡಳಿತ ಮಂಡಳಿಯ ನಿರ್ದೇಶಕರಆಯ್ಕೆಗೆ ಶನಿವಾರ ನಡೆದಚುನಾವಣೆಯಲ್ಲಿಅಂಜುಮನ್‌ವೆಲ್ಫೇರ್‌ಗ್ರೂಪ್ ಭರ್ಜರಿ ಜಯಸಾಧಿಸಿದೆ.

ನಗರದಐ.ಜಿರಸ್ತೆಯಲ್ಲಿರುವಉರ್ದು ಪ್ರಾಥಮಿಕ ಸರಕಾರಿ ಶಾಲೆಯಲ್ಲಿ ಮತದಾನ ನಡೆಯಿತು.57 ಮಂದಿ ಸ್ಪರ್ಧಾಕಣದಲ್ಲಿದ್ದರು. ಅಂಜುಮನ್‌ವೆಲ್ಫೇರ್‌ಗ್ರೂಪ್‌ನಿಂದ 17 ಮಂದಿ ಕಣದಲ್ಲಿದ್ದುಅದರಲ್ಲಿ 14 ಮಂದಿ ವಿಜೇತರಾಗಿದ್ದಾರೆ. ಸಿಡಿಎ ಅಧ್ಯಕ್ಷ ನಯಾಜ್‌ಅಹ್ಮದ್‌ಅವರತಂಡದಿಂದ 17 ಮಂದಿ ಚುನಾವಣೆಯಲ್ಲಿ ಸ್ಪರ್ಧಿಸಿದ್ದು ಅದರಲ್ಲಿ 5 ಮಂದಿ ಮಾತ್ರ ಗೆಲುವು ಸಾಧಿಸಿದ್ದಾರೆ. ಯಾವುದೇಗ್ರೂಪ್‌ಗೆ ಸೇರದೆ ಪಕ್ಷೇತರರಾಗಿ 2 ಮಂದಿ ವಿಜಯಶಾಲಿಗಳಾಗಿದ್ದು ಒಟ್ಟು 21 ಮಂದಿ ಅಂಜುಮನ್ ಇ ಇಸ್ಲಾಮಿಯಾ ಸಂಸ್ಥೆಗೆ ನಿರ್ದೇಶಕರಾಗಿಆಯ್ಕೆಯಾಗಿದ್ದಾರೆ.

ಶನಿವಾರ ಸಂಜೆ 4 ಗಂಟೆಗೆ ಮತದಾನ ಪ್ರಕ್ರಿಯೆ ಪೂರ್ಣಗೊಂಡ ಬಳಿಕ ಆರಂಭವಾದ ಮತಎಣಿಕೆಕಾರ್ಯತಡರಾತ್ರಿಯವರೆಗೆ ನಡೆಯಿತು.

ವಿಜಯ ಗಳಿಸಿದವರಲ್ಲಿ ಅಬ್ದುಲ್‌ರಜಾಕ್, ಹಫೀಜ್ ಮೊಹಮದ್‌ರಿಯಾಜ್‌ಖಾನ್, ಮಸೂದ್‌ಅಹ್ಮದ್, ನಜೀರ್‌ಅಹ್ಮದ್, ನಾಸೀರ್‌ಖಾನ್, ಸಿ.ಪಿ.ಬಾಬರ್, ಸಿ.ಎ.ಮೊಹಮದ್ ಇಸ್ಮಾಯಿಲ್, ಅಬ್ರಾರ್‌ಖಾನ್, ಮೊಸಿನ್‌ಖಾನ್, ಹಸನ್ ಸಲೀಂ, ಮೊಹಮ್ಮದ್‌ಇರ್ಷಾದ್, ಮೊಹಮದ್‌ಉಮರ್, ಶಿರಾಜ್‌ಖಾನ್, ಮೊಹಮದ್‌ಜಿಯಾ, ಮೊಹಮ್ಮದ್‌ರಾಹಿಲ್‌ಪಾಷಾ, ನೂರ್ ಮೊಹಮದ್, ತಬ್ರೀಜ್‌ಅಹ್ಮದ್, ಸಯದ್‌ಜಬೀ, ಮೊಹಮದ್‌ಅಜ್ಮಲ್‌ಬಾಗಿ, ಅಜ್ಮಲ್, ಮೊಹಮದ್‌ಅಬ್ರಾರ್ ಇವರುಗಳು ಚುನಾವಣೆಯಲ್ಲಿ ನಿರ್ದೇಶಕರಾಗಿಆಯ್ಕೆಯಾಗಿದ್ದಾರೆಎಂದು ಚುನಾವಣಾಕಾರಿ ನಿಸಾರ್‌ಅಹ್ಮದ್ ತಿಳಿಸಿದ್ದಾರೆ.

## ಬಾಪೂಜಿ ಎಂಬಿಎ ಕಾಲೇಜಿನಲ್ಲಿ ಸಂಸ್ಥಾಪನಾ ದಿನಾಚರಣೆ

**ದಾವಣಗೆರೆ:** ನಗರದ ಎಸ್.ಎಸ್. ಬಡಾವಣೆಯಲ್ಲಿರುವ ಬಾಪೂಜಿ ಎಂಬಿಎ ಕಾಲೇಜು ಸಭಾಂಗಣದಲ್ಲಿ ಶನಿವಾರ 28ನೇ ಸಂಸ್ಥಾಪನಾ ದಿನವನ್ನು ಹಮ್ಮಿಕೊಳ್ಳಲಾಗಿತ್ತು.

ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯ ಹಾಗೂ ಬಾಪೂಜಿ ಅಕಾಡೆಮಿ ಆಫ್ ಮ್ಯಾನೇಜ್ಮೆಂಟ್ ಅಂಡ್ ರೀಸರ್ಚ್ ಸಹಯೋಗದಲ್ಲಿ ಕಾರ್ಯಕ್ರಮ ನಡೆಯಿತು.ಬೆಂಗಳೂರಿನ ಪ್ರೊಫೈಲ್ ಡಾಟ್ ಇನ್ ಸಂಸ್ಥಾಪಕ ಎಸ್.ವಿ. ವೆಂಕಟೇಶ್ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಮಾತನಾಡಿ, ವಿದ್ಯಾರ್ಥಿಗಳು ತಮ್ಮ ಗುರಿಯ ಮೇಲೆ ಆಸಕ್ತಿ ಇಡಬೇಕು. ಜೀವನದಲ್ಲಿ ಸಾಕಷ್ಟು ಅಡೆತಡೆಗಳು ಬಂದರೂ ನಿಮ್ಮ ಗುರಿ ಬಗ್ಗೆ ಗಮನವಿರಬೇಕು. ಒಂದು ಹೆಜ್ಜೆ ಮುಂದಿಡ ಬೇಕಾದರೆ ಸಾಕಷ್ಟು ಜನ ನಿಮ್ಮ ಬೆನ್ನ ಹಿಂದೆ ಇರುತ್ತಾರೆ. ಅದನ್ನು ಗಮನದಲ್ಲಿಟ್ಟು ಮುಂದೆ ಹೋಗಬೇಕು ಎಂದು ಸಲಹೆ ನೀಡಿದರು.




ವಿದ್ಯಾರ್ಥಿಗಳು ತಮ್ಮ ತಲೆಯಲ್ಲಿರುವ ಕೊಳೆಯನ್ನು ತೆಗೆಯಬೇಕಾದರೆ ಕೆಟ್ಟ ಆಲೋಚನೆ ಬಿಡಬೇಕು. ಈಗಿನ ಯುಗದಲ್ಲಿ ಗಂಡು–ಹೆಣ್ಣು ಎಂಬುವ ವ್ಯತ್ಯಾಸವಿಲ್ಲ, ಆದ್ದರಿಂದ ನೀವು ಯಾವುದೇ ರೀತಿಯ ಕಟ್ಟುಪಾಡುಗಳಿಗೆ ಅಡ್ಡಿ ಮಾಡಿಕೊಳ್ಳದೆ ಮುಂದೆ ಸಾಗಬೇಕು ಎಂದು ಅಭಿಪ್ರಾಯಪಟ್ಟರು.

ಬಾಪೂಜಿ ಬಿ ಸ್ಕೂಲ್ಸ್ ಮುಖ್ಯಸ್ಥ ಅಥಣಿ ಎಸ್. ವೀರಣ್ಣ ಅಧ್ಯಕ್ಷತೆ ವಹಿಸಿ ಮಾತನಾಡಿ,

ಈಗಿನ ಯುಗದಲ್ಲಿ ಎಐ ಮತ್ತು ಚಾಟ್ ಜಿಪಿಟಿ ಪ್ರಯೋಜನಗಳನ್ನು ವಿದ್ಯಾರ್ಥಿಗಳು ಉತ್ತಮ ರೀತಿಯಲ್ಲಿ ಸದುಪಯೋಗಪಡಿಸಿಕೊಳ್ಳಬೇಕೆಂದು ತಿಳಿಸಿದರು. ಬಾಪೂಜಿ ಕಾಲೇಜಿನಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗೆ ಕಾಲೇಜಿನ ವ್ಯವಸ್ಥೆ ಮತ್ತು ಗ್ರಂಥಾಲಯವನ್ನು ಉತ್ತಮ ರೀತಿಯಲ್ಲಿ ಉಪಯೋಗಿಸಿಕೊಳ್ಳುವಂತೆ ಸಲಹೆ ನೀಡಿದರು. ಬಾಪೂಜಿ ಬಿ ಸ್ಕೂಲ್ ನಿರ್ದೇಶಕ ಡಾ ಎಚ್ ವಿ ಸ್ವಾಮಿ ತ್ರಿಭುವನಾನಂದ ಸ್ವಾಗತಿಸಿದರು.

ಶೈಕ್ಷಣಿಕ ವರದಿಯನ್ನು ಡಾ. ಎಸ್. ಹೆಚ್. ಸುಜಿತ್ ಕುಮಾರ್ ಮಂಡಿಸಿದರು.

ಡಾ. ಎಸ್.ಎ. ಪ್ರಕಾಶ್ ವಂದಿಸಿದರು.

ಸಹನ ಕಾರ್ಯಕ್ರಮ ನಿರೂಪಿಸಿದರು .

ಕಾಲೇಜಿನ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವರ್ಗದವರು ಮತ್ತು ವಿದ್ಯಾರ್ಥಿಗಳು ಭಾಗವಹಿಸಿದ್ದರು.

## ಬಸವ ತತ್ವ ಪ್ರಚಾರಕ್ಕೆ 500 ಕೋಟಿ ರೂ. ಅನುದಾನ ನೀಡುವಂತೆ ಲಿಂಗಾಯತ ಸಮುದಾಯದ ಬೇಡಿಕೆ

**ಬೆಂಗಳೂರು :** ಬಸವ ತತ್ವ, ವಚನ ಸಂಸ್ಕೃತಿ, ಶರಣರ ಹೋರಾಟದ ಬಗ್ಗೆ ನಮ್ಮ ಸರ್ಕಾರಕ್ಕೆ ಪೂರ್ಣ ಬದ್ಧತೆ ಇದ್ದು, ಪೂಜ್ಯರ ಬೇಡಿಕೆಗಳಲ್ಲಿ ಸಾಧ್ಯ ಇರುವವುಗಳನ್ನು ಹಂತ ಹಂತವಾಗಿ ಈಡೇರಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದರು.

ಕಾವೇರಿ ನಿವಾಸದಲ್ಲಿ ತಮ್ಮನ್ನು ಭೇಟಿಯಾದ ಲಿಂಗಾಯತ ಸ್ವಾಮೀಜಿಗಳು, ಸಚಿವರು, ಶಾಸಕರು, ಸಮಾಜದ ಮುಖಂಡರ ಸಭೆಯಲ್ಲಿ ಮಾತನಾಡಿದರು. ಮೊದಲ ಬಾರಿ ಮುಖ್ಯಮಂತ್ರಿ ಆದಾಗ ಬಸವ ಜಯಂತಿಯಂದೇ ಪ್ರಮಾಣವಚನ ಸ್ವೀಕರಿಸಿದೆ. ಬಸವಣ್ಣನವರ ಭಾವಚಿತ್ರ ಸರ್ಕಾರಿ ಕಚೇರಿಗಳಲ್ಲಿ ಕಡ್ಡಾಯಗೊಳಿಸಿದ್ದು ನಮ್ಮದೇ ಕಾಂಗ್ರೆಸ್ ಸರ್ಕಾರ ಎಂದರು.

ಬಸವಣ್ಣನವರ ವಿಚಾರ ಮತ್ತು ಹೋರಾಟ ಜಾತ್ಯತೀತ ಸಮಾಜ ನಿರ್ಮಾಣಕ್ಕೆ ಪೂರಕ, ಜಾತಿವಾದಿ ಪಟ್ಟಭದ್ರರಿಗೆ ಬಸವಣ್ಣನವರ ವಿಚಾರಗಳು ಹಿಡಿಸಲ್ಲ. ಪಟ್ಟಭದ್ರರು ಬಹಿರಂಗವಾಗಿ ಬಸವಣ್ಣನವರನ್ನು ವಿರೋಧಿಸಲು ಸಾಧ್ಯವಿಲ್ಲ. ಅದಕ್ಕೇ ಆಂತರಿಕವಾಗಿ ವಿರೋಧಿಸುತ್ತಿದ್ದಾರೆ ಎಂದರು.

ಜಾತಿ ವ್ಯವಸ್ಥೆ ಬಹಳ ಗಟ್ಟಿಯಾಗಿ ಬೇರೂರಿದೆ. ಇದಕ್ಕೆ ಪಟ್ಟಭದ್ರರು ನೀರು ಗೊಬ್ಬರ ಹಾಕುತ್ತಿದ್ದಾರೆ. ಜಾತ್ಯತೀತ, ಸಮ ಸಮಾಜ

ನಿರ್ಮಾಣ ಮಾಡಲು ಬಸವಣ್ಣನವರ ಹೋರಾಟ ಪೂರಕ. ನಮ್ಮ ಜಾತಿ ವ್ಯವಸ್ಥೆಗೆ ಚಲನೆ ಇಲ್ಲ. ಜಾತಿ ಜಡತ್ವ, ಆರ್ಥಿಕ ಜಡತ್ವ ಇರುವ ಸಮಾಜದಲ್ಲಿ ಚಲನೆ ಸಾಧ್ಯವಿಲ್ಲ, ಬಸವಣ್ಣನವರ ವಿಚಾರಗಳೇ ಅಂಬೇಡ್ಕರ್ ವಿಚಾರಗಳಾಗಿದ್ದು ಇವೆಲ್ಲವೂ ಸಂವಿಧಾನದಲ್ಲಿ ಅಡಕವಾಗಿವೆ ಎಂದು ಹೇಳಿದರು.

## ಖಸಾಯಿಖಾನೆ ಮತ್ತು ಮಾಂಸ ಮಾರಾಟ ಬಂದ

**ಗದಗ:** ಗದಗ ಬೆಟಗೇರಿ ನಗರಸಭೆ ವ್ಯಾಪ್ತಿಯ ಖಸಾಯಿಖಾನೆಗಳಲ್ಲಿ ಪ್ರಾಣಿವಧೆ ಮಾಡುವ ಹಾಗೂ ಮಾಂಸ ಮಾರಾಟಗಾರರಿಗೆ ತಿಳಿಯಪಡಿಸುವುದೇನೆಂದರೆ ಮಹಾ ಶಿವರಾತ್ರಿ ಅಂಗವಾಗಿ ಫೆಬ್ರುವರಿ 26 ರಂದು ಜಾನುವಾರುಗಳ ವಧೆ ಹಾಗೂ ಮಾಂಸ ಮಾರಾಟ ಮಾಡುವುದನ್ನು ನಿಷೇಧಿಸಲಾಗಿದೆ. ಮಾಂಸ ಮಾರಾಟ ಮಾಡುವದಾಗಲಿ ಹಾಗೂ ಜಾನುವಾರುಗಳನ್ನು ವಧೆ ಮಾಡದಿರಲು ಸೂಚಿಸಲಾಗಿದೆ. ಈ ಆದೇಶವನ್ನು ಉಲ್ಲಂಘಿಸಿದಲ್ಲಿ ಅಂಥವರ ಲೈಸನ್ಸನ್ನು ರದ್ದು ಮಾಡಲಾಗುವುದು ಎಂದು ಗದಗ ಬೆಟಗೇರಿ ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಅಡುಗೆ ಎಣ್ಣೆ ಬೆಲೆಯಲ್ಲಿ ಭಾರಿ ಹೆಚ್ಚಳ..!

**ಬೆಂಗಳೂರು:** ಕಳೆದ ಕೆಲ ದಿನಗಳಿಂದ ರೂಪಾಯಿ ಲೆಕ್ಕದಲ್ಲಿ ಏರುತ್ತದ್ದ ಖಾದ್ಯ ತೈಲ ಈ ಬಾರಿ ಬರೋಬ್ಬರಿ ಒಂದೇ ಭಾರಿ 10 ರೂ. ಗೆ ಏರಿಕೆಯಾಗಿದ್ದು ಗ್ರಾಹಕರಿಗೆಮತ್ತೊಂದು ಶಾಕ್ ನೀಡಿದೆ.

ಬಸ್, ಮೆಟ್ರೋ ಪ್ರಯಾಣದರ ಹೆಚ್ಚಳದ ಬೆನ್ನಲ್ಲೇ ಇದೀಗ ಅಡುಗೆ ಎಣ್ಣೆ 10 ರೂ. ಕೊಬ್ಬರಿ ಎಣ್ಣೆ ಏಕಾ ಏಕಿ 50 ರೂ. ಹೆಚ್ಚಳವಾಗಿದ್ದು ಗೃಣಿಯರ ಕೈ ಕಟ್ಟಿದಂತಾಗಿದೆ. ಕಳೆದು

ಒಂದು ತಿಂಗಳ ಬೆಲೆಗೂ ಪ್ರಸ್ತುತ ಬೆಲೆಗೂ 10 ರೂ. ಏರಿಕೆಯಾಗಿದೆ.ಸನ್‌ಫ್ಲವರ್, ಫಾಮ್‌ಆಯಿಲ್, ಕಡಲೆ ಎಣ್ಣೆ, ಅರಳೆಣ್ಣೆ, ಸಾಸಿವೆ ಎಣ್ಣೆ, ಬೆಲೆಯಲ್ಲಿ 10 ರೂ. ಏರಿಕೆಯಾಗಿದೆ. ಸೂರ್ಯಕಾಂತಿ ಎಣ್ಣೆ ಪೂರೈಕೆಯಲ್ಲಿ ವ್ಯತ್ಯಯವಾದ ಹಿನ್ನಲೆಯಲ್ಲಿ ಅನಿವಾರ್ಯವಾಗಿ ಸನ್‌ಫ್ಲವರ್ ಎಣ್ಣೆ ಬೆಲೆ ಹೆಚ್ಚಳವಾಗಿದೆ. ದಿನದಿಂದ ದಿನಕ್ಕೆ ಬಿಸಿಲ ಬೇಗೆ ಹೆಚ್ಚಾಗುತ್ತಿದ್ದು ಎಳನೀರಿಗೆ ಬೇಡಿಕೆ ಜಾಸ್ತಿಯಾದ ಹಿನ್ನಲೆಯಲ್ಲಿ ಕೊಬ್ಬರಿ ಅಭಾವ ಸೃಷ್ಟಿಯಾಗಿದ್ದು ಬೆಲೆ ಹೆಚ್ಚಳಕ್ಕೆ ಕಾರಣವಾಗಿದೆ ಎಂದು ಹೇಳಲಾಗುತ್ತಿದೆ

ಅಡುಗೆ ಎಣ್ಣೆ 10 ರಿಂ 20 ರೂ ಹೆಚ್ಚಳ ( ಕೆ.ಜಿ):
ಸನ್ ಫ್ಲವರ್ : ಹಳೇ ದರ 133, ಹೊಸ ದರ– 143,
ಗೋಲ್ಡ್ ಎನ್ನರ್: ಹಳೇ ದರ 135, ಹೊಸ ದರ 145
ರುಚಿ ಗೋಲ್ಡ್ ಹಳೇ ದರ 98, ಹೊಸ ದರ 133
ಜೆಮಿನಿ: ಹಳೇ ದರ 140, ಹೊಸ ದರ 155
ಇಮಾಮಿ: ಹಳೇ ದರ 135, ಹೊಸ ? 145
ಫ್ರೀಡಂ: ಹಳೇ ದರ 130, ಹೊಸ ದರ 144
ದಾರಾ : ಹಳೇ ದರ 140, ಹೊಸ 150
ತೆಂಗಿನ ಎಣ್ಣೆಗೆ 50 ರೂ ಹೆಚ್ಚಳ (1ಕೆಜಿ ಲೆಕ್ಕ):
ಪ್ಯಾರಾಚುಟ್: ಹಳೇ ದರ 380, ಹೊಸ ದರ –425
ಕೆಪಿಎಲ್: ಹಳೇ ದರ 310, ಹೊಸ ದರ 326
ವಿವಿಪಿ: ಹಳೇ ದರ 220, ಹೊಸ ದರ 250

## ‘ಧ್ವನಿ ಕೊಟ್ಟ ಧನಿ’ ಪ್ರಶಸ್ತಿ

**ಚಿಕ್ಕಮಗಳೂರು:** ಮೈಸೂರು ಅನ್ವೇಶಣಾ ಟ್ರಸ್ಟ್ ಮತ್ತು ಅರಸು ಪತ್ರಿಕೆ 12 ನೇ ವಾರ್ಷಿಕೋತ್ಸವದ ಅಂಗವಾಗಿ ಮೈಸೂರಿನಲ್ಲಿ ನಡೆದ ಸಮಾರಂಭದಲ್ಲಿ ಸಮಾಜ ಸೇವೆ ಗುರುತಿಸಿ ಹಿರೇನಲ್ಲೂರು ಶಿವು ಅವರಿಗೆ ‘ಧ್ವನಿ ಕೊಟ್ಟ ಧನಿ’ ಎಂಬ ರಾಜ್ಯ ಮಟ್ಟದ ಪ್ರಶಸ್ತಿ ನೀಡಿ ಗೌರವಿಸಿದರು.ಸಮಾರಂಭದಲ್ಲಿ ಚುಟುಕು ಯುಗಾಚಾರ್ಯ ಡಾ.ಎಂ.ಜಿ.ಆರ್.ಅರಸ್, ವಿಜಯಲಕ್ಷ್ಮಿ ಅರಸ್, ಆರ್ಯ ಅಮರನಾಥ ರಾಜೇ ಅರಸ್, ಎಂ.ಎಲ್ಸಿ. ಡಾ.ಡಿ.ತಿಮ್ಮಯ್ಯ, ರಾಜ್ಯ ಉಪಾಧ್ಯಕ್ಷ ಸೂರಜ್ ಹೆಗ್ಡೆ ಮುಖಂಡರುಗಳಾದ ವೆಂಕಟೇಶ್, ಚಂದ್ರಶೇಖರ್, ರತ್ನ, ಹಾಲಪ್ಪಗೌಡ ಮತ್ತಿತರರು ಉಪಸ್ಥಿತರಿದ್ದರು.

## ಶಾಸಕರಿಂದ ಸಂಜೀವಿನಿ ಕಟ್ಟಡ ಉದ್ಘಾಟನೆ

**ಚಿಕ್ಕಮಗಳೂರು:** ತಾಲ್ಲೂಕಿನ ಲಕ್ಕಮ್ಮನಹಳ್ಳಿ ಗ್ರಾ.ಪಂ. ಹಾಗೂ ಗ್ರಾಮೀಣಾಭಿವೃದ್ಧಿ, ಪಂಚಾಯತ್‌ರಾಜ್ ಇಲಾಖೆ ಸಹಯೋಗದಲ್ಲಿ 17 ಲಕ್ಷ ವೆಚ್ಚದಲ್ಲಿ ಗ್ರಾಮದಲ್ಲಿ ನಿರ್ಮಿಸಿರುವ ನೂತನ ಸಂಜೀವಿನಿ ಕಟ್ಟಡವನ್ನು ಶಾಸಕ ಹೆಚ್.ಡಿ.ತಮ್ಮಯ್ಯ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಈ ಸಂದರ್ಭದಲ್ಲಿ ಅಧ್ಯಕ್ಷೆ ಶಶಿಕಲಾ, ಲಕ್ಕಮ್ಮನಹಳ್ಳಿ ಗ್ರಾ.ಪಂ. ಉಪಾಧ್ಯಕ್ಷ ಲಕ್ಷ್ಮಣ ಗೌಡ, ಸದಸ್ಯರಾದ ಸಣ್ಣಕಾಟೇಗೌಡ, ಚಂದ್ರಶೇಕರ್, ರತ್ನಮ್ಮ, ಹರೀಶ್, ಯಶೋಧ, ಲತಾ, ಪಿಡಿಓ ಕೆ.ಬಿ. ಮಂಜೇಗೌಡ, ಕಾರ್ಯದರ್ಶಿ ಬಿ.ಟಿ.ರುದ್ರೇಶ್ ಮತ್ತಿತರರು ಹಾಜರಿದ್ದರು.

## ತರಕಾರಿ ಕಿಟ್ ವಿತರಣೆ

**ಚಿಕ್ಕಮಗಳೂರು:** ತೋಟಗಾರಿಕೆ ಇಲಾಖಾ ವತಿಯಿಂದ ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯಡಿ ತರಕಾರಿ ಕಿಟ್ ವಿತರಣೆ ಮತ್ತು ಎಲ್ಲಾ ವರ್ಗದ ರೈತರಿಗೆ ರೈತರಿಗೂ ಸಹಾಯಧನ ಲಭ್ಯವಿದೆ. ಹೆಚ್ಚಿನ ಮಾಹಿತಿಗಾಗಿ ಸಹಾಯಕ ತೋಟಗಾರಿಕೆ ಅಧಿಕಾರಿಗಳ ವಿವರ: ಕಸಬಾ ಹೋಬಳಿ ಅರುಣ್ ಕುಮಾರ್ ಕೆ.ಎಲ್. ಮೊ.ಸಂ. 9108948434, ಅಂಬಳೆ ಹೋಬಳಿ ಗುರುರಾಜ್ ಎಸ್. ಮೊ.ಸಂ. 7892338387, ವಸ್ತಾರೆ ಹೋಬಳಿ ಅಕ್ಷಯ್ ಹೆಚ್.ಆರ್., ಮೊ.ಸಂ. 8951253441, ಜಾಗರ&ಆವತಿ ಹೋಬಳಿ ನಟೇಶ್ ಕುಮಾರ್ ಹೆಚ್.ಎ. ಮೊ.ಸಂ. 7899048055, ಲಕ್ಯಾ ಹೋಬಳಿ ಅರುಣ್ ವಿ.ಎ. ಮೊ.ಸಂ. 8277038990, ಖಾಂಡ್ಯ ಹೋಬಳಿ ಸೀಮಾ ಹೆಚ್.ಎ. ಮೊ.ಸಂ. 9380956582, ಆಲ್ದೂರು ಹೋಬಳಿ ಭಾನುಶ್ರೀ ಮೊ.ಸಂ. 9380126498 ಇವರುಗಳನ್ನು ಸಂಪರ್ಕಿಸಬಹುದಾಗಿದೆ ಎಂದು ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ತಿಳಿಸಿದ್ದಾರೆ.

## ಒಕ್ಕಲಿಗರು ಸಂಘಟನೆಗೆ ಆದ್ಯತೆ ನೀಡಲಿ

**ಸೊರಬ:** ಒಕ್ಕಲಿಗರು ಶ್ರಮಜೀವಿಗಳಾಗಿದ್ದು, ಆರ್ಥಿಕವಾಗಿ ಸಬಲಗೊಳ್ಳುವು ದರೊಂದಿಗೆ ಸಂಘಟನೆಗೆ ಆದ್ಯತೆ ನೀಡಬೇಕೆಂದು ಸೊರಬ ತಾಲ್ಲೂಕು ಒಕ್ಕಲಿಗರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಉಮಾಕಾಂತ ಬಿ. ಗೌಡ ನೆಲ್ಲೂರು ಕರೆ ನೀಡಿದರು.ಪಟ್ಟಣದ ಮುರುಘಾಮಠದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ತಾಲ್ಲೂಕು ಒಕ್ಕಲಿಗರ ಕ್ಷೇಮಾಭಿವೃದ್ಧಿ ಸಂಘದ 9ನೇ ವರ್ಷದ ಪ್ರತಿಭಾ ಪುರಸ್ಕಾರ ಮತ್ತು ಸನ್ಮಾನ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.ಸಮುದಾಯ ಸಂಘಟನೆ ಜನರಲ್ಲಿ ಐಕ್ಯತೆಯನ್ನುಂಟು ಮಾಡಬಲ್ಲದು. ಸಮು ದಾಯದ ಪ್ರತಿಯೊಬ್ಬರೂ ತಮ್ಮ ವೈಯಕ್ತಿಕ ಜೀವನದ ಒಟ್ಟೊಟ್ಟಿಗೆ ಸಮಾ ಜದ ಸೇವೆ ಮಾಡಿದಾಗ ಮಾತ್ರ ಸಮುದಾಯ ಸಂಘಟನೆ ಸಾಧ್ಯವಿದ್ದು ಸಮುದಾಯ ಸಂಘಟನೆಯಲ್ಲಿ ಸಮಾಜ ಬಾಂಧವರ ಪಾಲ್ಗೊಳ್ಳುವಿಕೆ ಬಹು ಮುಖ್ಯ ಎಂದರು.ಕಾರ್ಯಕ್ರಮ ಉದ್ಘಾಟಿಸಿದ ಸಂಘದ ಗೌರವಾಧ್ಯಕ್ಷ ಮಂಜಪ್ಪ ಬನದಕೊಪ್ಪ ಮಾತನಾಡಿ, ಸಮಾಜ ಬಾಂಧವರು ಸಂಘಟನೆಯಲ್ಲಿ ಸಕ್ರಿಯವಾಗಿ ತೊಡಗಿ ಸಿಕೊಳ್ಳಬೇಕು. ನಮ್ಮ ಕೌಟುಂಬಿಕ ಜೀವನದ ಒಟ್ಟಿಗೆ ಸಮಾಜದ ಜನರ ಏಳ್ಗೆಗೆ ಅಳಿಲು ಸೇವೆ ಮಾಡಬೇಕು. ಇಂದಿನ ಯುವ ಪೀಳಿಗೆ ಸಂಘ ಮತ್ತು ಸಮುದಾಯ ಮುನ್ನಡೆಸಿಕೊಂಡು ಹೋಗುವ ಬಾಧ್ಯತೆ ಹೊಂದಬೇಕು ಎಂದರು.

## ಗುಣಮಟ್ಟದ ರಸ್ತೆ ದುರಸ್ತಿ ಕಾಮಗಾರಿಗೆ ಒತ್ತು

(1ನೇ ಪುಟದಿಂದ)

ದುರಸ್ತಿ ಮಾಡಿದ ಕಾಮಗಾರಿಯು ಸುಸ್ಥಿತಿಯಲ್ಲಿರಬೇಕು. ಪದೇ ಪದೇ ದುರಸ್ತಿ ಮಾಡುವಂತಿರಬಾರದು. ಪದೇ ಪದೇ ಕಾಮಗಾರಿ ನಡೆಸುವುದರಿಂದ ಸರ್ಕಾರದ ಹಣ ಪೋಲಾಗುತ್ತದೆ. ಅದನ್ನು ತಡೆಯುವ ಕೆಲಸ ಆಗಬೇಕೆಂದು ಗುತ್ತಿಗೆದಾರನಿಗೆ ತಿಳಿಸಿದರು.

ರಸ್ತೆಗೆ ನೆಪಕ್ಕೆ ಒಂದಿಷ್ಟು ಜಲ್ಲಿ ಚೆಲ್ಲಿ ಡಾಂಬರು ಹರಡಿ ದುರಸ್ತಿ ಮಾಡಬೇಡಿ. ಕೆಲವೆಡೆ ತಾತ್ಕಾಲಿಕ ರಸ್ತೆ ದುರಸ್ತಿ ಕಾಮಗಾರಿ ಪರಿಶೀಲನೆ ನಡೆಸಿದ ಸಂದರ್ಭದಲ್ಲಿ ಡಾಂಬರು ರಸ್ತೆಯನ್ನು ಉಜ್ಜಿದರೆ ಡಾಂಬರು ಪುಡಿ, ಮಣ್ಣು ಬರುತ್ತಿದೆ. ಸಣ್ಣ ವಾಹನ ಓಡಾಡಿದರೂ ರಸ್ತೆ ಗುಂಡಿ ಬೀಳುವಂತಾಗಿರುತ್ತದೆ. ಹೀಗಾಗಿ ತಾತ್ಕಾಲಿಕ ರಸ್ತಿ ದುರಸ್ತಿ ಕಾಮಗಾರಿಯೂ ಶಾಶ್ವತವಾಗಿ ಉಳಿಯುವಂತಹ ಕೆಲಸ ಆಗಬೇಕು ಎಂದರು.

# ನಿರ್ವಹಣೆ ಇಲ್ಲದೆ ಪಾಳುಬಿದ್ದ ಸಾರ್ವಜನಿಕ ಶೌಚಗೃಹಗಳು




ಶೃಂಗೇರಿ ಪಟ್ಟಣದಲ್ಲಿ ಸಾರ್ವಜನಿಕ ಶೌಚಾಲಯ, ರಸ್ತೆ ಮತ್ತು ಚರಂಡಿ ಅಭಿವೃದ್ಧಿ, ಸಮುದಾಯ ಭವನ, ಆಟೊ ನಿಲ್ದಾಣ, ಮೀನು ಮತ್ತು ಸಂತೆ ಮಾರುಕಟ್ಟೆ, ಶುದ್ಧಗಂಗಾ ಘಟಕದ ಅಭಿವೃದ್ಧಿಗಾಗಿ ನಗರೋತ್ಥಾನ ಯೋಜನೆ ಅಡಿಯಲ್ಲಿ 3.49 ಕೋಟಿ ಅನುದಾನ ಮೀಸಲಿಟ್ಟಿದ್ದು, ಕ್ರಿಯಾಯೋಜನೆ ಮಂಜೂರಾಗಿ ಜಿಲ್ಲಾಧಿಕಾರಿ ಯಿಂದ ಟೆಂಡರ್ ಪ್ರಕ್ರಿಯೆ ಹಂತ ಮುಗಿದು ಕಾಮಗಾರಿ ನಡೆಸಲು ಆದೇಶವಾಗಿದೆ
**– ಟಿ.ಡಿ.ರಾಜೇಗೌಡ,** ಶಾಸಕ

**ಶೃಂಗೇರಿ:** ಪಟ್ಟಣದ ಸಾರ್ವಜನಿಕ ಶೌಚಗೃಹಗಳು ನಿರ್ವಹಣೆ ಇಲ್ಲದೆ ಪಾಳು ಬಿದ್ದಿದ್ದು, ಪ್ರಕೃತಿ ಕರೆಗೆ ಗೋಡೆಯೇ ಶೌಚಾಲಯ ಎನಿಸಿಕೊಂಡಿದೆ. ಕಳೆದ ವರ್ಷ ನಗರೋತ್ಥಾನ ಯೋಜನೆಯಡಿ ಮೀಸಲಿಟ್ಟಿದ್ದ ಅನುದಾನ ಇನ್ನೂ ಬಳಕೆಯಾಗದೆ ಅಭಿವೃದ್ಧಿ ಕೆಲಸಗಳು ಬಾಕಿ ಉಳಿದಿವೆ. ಪಟ್ಟಣದ ಗಾಂಧಿ ಮೈದಾನ, ಕುವೆಂಪು ಬಸ್ ನಿಲ್ದಾಣ, ಸಂತೆ ಮಾರುಕಟ್ಟೆ, ಕೆ.ವಿ.ಆರ್. ರಸ್ತೆಯ ಬಳಿ, ಮಿನಿ ಬಸ್ ನಿಲ್ದಾಣ ಹಾಗೂ ಪ್ರವೇಶದ್ವಾರದ ಬಳಿ ಇರುವ ಶೌಚಗೃಹಗಳು ಆಟಕ್ಕುಂಟು ಲೆಕ್ಕಕ್ಕಿಲ್ಲದ ಸ್ಥಿತಿ ನಿರ್ಮಾಣವಾಗಿದೆ.
ಅದರಲ್ಲೂ ಕೆ.ವಿ.ಆರ್. ರಸ್ತೆ ಬಳಿ ಇರುವ ಶೌಚಗೃಹ ನಿರ್ವಹಣೆ ಇಲ್ಲದೆ, ನೀರಿನ ವ್ಯವಸ್ಥೆಯೂ ಇಲ್ಲದೇ ಇಡೀ ವಾತಾವರಣ ದುರ್ನಾತದಿಂದ ಕೂಡಿದೆ.
ಪಟ್ಟಣದಲ್ಲಿರುವ ಶೌಚಗೃಹಗಳಲ್ಲಿ ಇಂತಹ ದುಃಸ್ಥಿತಿ ಇದ್ದರೂ ಪ.ಪಂ. ಮಾತ್ರ ತನಗೆ ಸಂಬಂಧಿಸಿದ್ದೇ ಅಲ್ಲ ಎಂದು ಮೌನವಾಗಿದೆ ಎಂದಾದರೆ ಇದು ವ್ಯವಸ್ಥೆಗೆ ಹಿಡಿದ ಕನ್ನಡಿಯಾಗಿದೆ ಎನ್ನುತ್ತಾರೆ ಸ್ಥಳೀಯರು.
ಲಕ್ಷಾಂತರ ರೂ. ಅನುದಾನ ಬಳಸಿ ನಿರ್ಮಿಸಿರುವ ಶೌಚಗೃಹಗಳು ದುಃಸ್ಥಿತಿಗೆ ತಲುಪಿರುವುದು ಅಚ್ಚರಿ ತಂದಿದೆ.
ಪಟ್ಟಣದ ಸಂತೆ ಮಾರುಕಟ್ಟೆ ಬಳಿ ಶೌಚಗೃಹವು ಇದ್ದರೂ ಇಲ್ಲದಂತಾಗಿದೆ. ಯಾವಾಗಲೂ ಜನನಿಬಿಡ ಪ್ರದೇಶವಾಗಿದ್ದು, ಸಂತೆ ದಿನವಾದ ಸೋಮವಾರ ವ್ಯಾಪಾರಿಗಳು, ಗ್ರಾಹಕರು ಕಟ್ಟಡದ ಹೊರಭಾಗದಲ್ಲೇ ಮೂತ್ರ ವಿಸರ್ಜನೆ ಮಾಡುತ್ತಾರೆ.
ಬೈಪಾಸ್ ರಸ್ತೆ ಬಳಿ ಇರುವ ಶೌಚಗೃಹಗಳ ಬಗ್ಗೆ ಜನ ಹಿಡಿಶಾಪ ಹಾಕುತ್ತಿದ್ದಾರೆ. ಸದಾ ಮೂಗು ಮುಚ್ಚಿಕೊಂಡೇ ಹೋಗಬೇಕಾದ ದಾರುಣ ಸ್ಥಿತಿ ಇಲ್ಲಿದೆ. ಪಟ್ಟಣದ ಶುಚಿತ್ವ ಕಾಪಾಡಿಕೊಳ್ಳಬೇಕಾದ ಅಗತ್ಯವಿದ್ದು, ಸಂಬಂಧಪಟ್ಟವರು ಇದನ್ನು ಮನಗಂಡರೆ ಮಾತ್ರ ಇಲ್ಲಿ ಒಳ್ಳೆಯ ವಾತಾವರಣ ನಿರ್ಮಾಣ ಸಾಧ್ಯ ಎನ್ನುತ್ತಾರೆ ಸಾರ್ವಜನಿಕರು.
ಈಗಾಗಲೇ ಪಟ್ಟಣದಲ್ಲಿ ಸಾಂಕ್ರಾಮಿಕ ರೋಗಗಳು ಕಾಣಿಸಿಕೊಂಡಿದ್ದು, ಇಲಾಖೆ ಇತ್ತ ಗಮನಹರಿಸಿ ತಕ್ಷಣ ಪೂರಕ ವ್ಯವಸ್ಥೆ ಮತ್ತು ಶುಚಿತ್ವ ಕಾಪಾಡಬೇಕು. ಗಾಂಧಿ ಮೈದಾನಕ್ಕೆ ತೆರಳುವ ಬೈಪಾಸ್ ರಸ್ತೆ ಸಂಪೂರ್ಣ ಹದಗೆಟ್ಟಿದೆ. ಪಟ್ಟಣದ ಮುಖ್ಯ ಬೀದಿಯ ಈಶ್ವರಗಿರಿ ಎದುರಿನ ಗಾಂಧಿ ಮೈದಾನಕ್ಕೆ ತೆರಳುವ ಪಕ್ಕದಲ್ಲೇ ಇರುವ ರಾಜಕಾಲುವೆಯಲ್ಲಿ ಹರಿಯುವ ತ್ಯಾಜ್ಯ ನೀರು ತುಂಗಾನದಿಗೆ ಸೇರುತ್ತಿದೆ. ಕಳೆದ 2–3 ವರ್ಷಗಳ ಹಿಂದೆ ಅತಿವೃಷ್ಟಿಯಿಂದಾಗಿ ಕೆಲವು ರಸ್ತೆಗಳು ಸಂಪೂರ್ಣ ಕುಸಿತವಾಗಿ ಹೊಂಡಗುಂಡಿ ಬಿದ್ದಿದ್ದು, ಜನ ಸಂಚಾರಕ್ಕೆ ಯೋಗ್ಯವಾಗಿಲ್ಲ ಎನ್ನುತ್ತಾರೆ ವಾಹನ ಸವಾರರು.

## ಅಭಿವೃದ್ಧಿಗೆ ‘ಗ್ಯಾರಂಟಿ’ ಅಡ್ಡಿಯಾಗಿಲ್ಲ



**ಚಿಕ್ಕಮಗಳೂರು:** ಸರ್ಕಾರವು ಕೇವಲ ಗ್ಯಾರಂಟಿ ಯೋಜನೆಗಳಿಗೆ ಸೀಮಿತವಾಗದೆ ರಾಜ್ಯದ ಸರ್ವತೋಮುಖ ಅಭಿವೃದ್ಧಿಗೆ ಆದ್ಯತೆ ನೀಡುತ್ತಿದೆ. ಗ್ಯಾರಂಟಿ ಯೋಜನೆಗಳು ಅಭಿವೃದ್ಧಿ ಕಾರ್ಯಗಳಿಗೆ ಅಡ್ಡಿಯಾಗಿಲ್ಲ ಎಂದು ಶಾಸಕ ಹೆಚ್.ಡಿ. ತಮ್ಮಯ್ಯ ಹೇಳಿದರು.
ತಾಲ್ಲೂಕಿನ ಬಿಳೇಕಲ್ಲಹಳ್ಳಿ ಹಾಗೂ ಲಕ್ಕಮ್ಮನಹಳ್ಳಿ ಗ್ರಾ.ಪಂ. ವ್ಯಾಪ್ತಿಯಲ್ಲಿ ರಸ್ತೆ, ದೇವಸ್ಥಾನ, ಸಮುದಾಯ ಭವನ ಸೇರಿದಂತೆ ವಿವಿಧ ಕಾಮಗಾರಿಗಳಿಗೆ ಗುದ್ದಲಿ ಪೂಜೆ ನೆರವೇರಿಸಿ, ವಿವಿಧ ಕಾಮಗಾರಿಗಳಿಗೆ ಚಾಲನೆ ನೀಡಿ ಮಾತನಾಡಿದ ಅವರು, ಸರ್ಕಾರವು ಕ್ಷೇತ್ರದ ಅಭಿವೃದ್ಧಿ ದೃಷ್ಟಿಯಿಂದ 25 ಕೋಟಿ ವಿಶೇಷ ಅನುದಾನ ನೀಡಿದೆ. ಈ ಅನುದಾನದೊಂದಿಗೆ ವಿವಿಧ ಕಾಮಗಾರಿಗಳನ್ನು ಕೈಗೊಂಡು ಕ್ಷೇತ್ರವನ್ನು ಅಭಿವೃದ್ಧಿ ಪಡಿಸುವುದು ನನ್ನ ಜವಾಬ್ದಾರಿ ಎಂದರು.
ಲಕ್ಯ ಹೋಬಳಿ ಲಕ್ಕಮ್ಮನಹಳ್ಳಿ ಪಂಚಾಯಿತಿಯಲ್ಲಿ ವ್ಯಾಪ್ತಿಯಲ್ಲಿ 50 ಲಕ್ಷ ಕಾಮಗಾರಿ ಈಗಾಗಲೇ ಪೂರ್ಣಗೊಂಡಿದೆ. ಬಾಳೇನಹಳ್ಳಿ ಬೀರಲಿಂಗೇಶ್ವರ ದೇವಾಲಯಕ್ಕೆ 10 ಲಕ್ಷ ಹಾಗೂ ಕಾಂಕ್ರೀಟ್ ರಸ್ತೆ ನಿರ್ಮಾಣಕ್ಕೆ 10 ಲಕ್ಷ, ಸಿರಬಡಿಗೆ ಗ್ರಾಮದಲ್ಲಿ 20 ಲಕ್ಷ ಕಾಂಕ್ರೀಟ್ ರಸ್ತೆ, ಸೇರಿದಂತೆ ಕುನ್ನಾಳು ರಸ್ತೆ, ದೇವಾಲಯ ಹಾಗೂ ವಿವಿಧ ಅಭಿವೃದ್ಧಿ ಕಾರ್ಯಗಳಿಗೆ ಒಟ್ಟು 1 ಕೋಟಿ 10 ಲಕ್ಷ ಅನುದಾನವನ್ನು ಲಕ್ಕಮ್ಮನಹಳ್ಳಿ ಗ್ರಾ.ಪಂ.ಗೆ ನೀಡಲಾಗಿದೆ. ಬಿಳೇಕಲ್ಲಹಳ್ಳಿ ಗ್ರಾ.ಪಂ.ವ್ಯಾಪ್ತಿಯಲ್ಲಿ ಉದ್ದೆಬೋರನಹಳ್ಳಿ ದೇವಾಲಯಕ್ಕೆ 5 ಲಕ್ಷ, ಉದ್ದೆಬೋರನಹಳ್ಳಿ ಗ್ರಾಮದ ಕಾಂಕ್ರೀಟ್ ರಸ್ತೆಗೆ 20 ಲಕ್ಷ ಹಾಗೂ ಗ್ರಾಮದ ಸಾರ್ವಜನಿಕ ಸಮುದಾಯ ಭವನಕ್ಕೆ 10 ಲಕ್ಷ ಸೇರಿದಂತೆ ಒಟ್ಟು 1 ಕೋಟಿ 15 ಲಕ್ಷ ಕಾಮಗಾರಿಗೆ ಅನುದಾನ ನೀಡಲಾಗಿದೆ ಎಂದರು.ರೈತರ ಹಿತದೃಷ್ಟಿಯಿಂದ ಬಾಳೇನಹಳ್ಳಿಯಿಂದ ಕಟ್ಟೆಹೊಳೆಗೆ ನೀರು ತುಂಬಿಸುವ ಯೋಜನೆಗೆ 1 ಕೋಟಿ 50 ಲಕ್ಷ ಅನುಮೋದನೆ ದೊರಕಿದೆ. ಸದ್ಯದಲ್ಲೆ ಟೆಂಡರ್ ಕರೆದು ಕಾಮಗಾರಿಗೆ ಚಾಲನೆ ನೀಡಲಾಗುವುದು ಎಂದರು.
ಕಿಸಾನ್ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಭರತ್, ಲಕ್ಕಮ್ಮನಹಳ್ಳಿ ಗ್ರಾ.ಪಂ. ಅಧ್ಯಕ್ಷೆ ಶಶಿಕಲಾ ಮಾತನಾಡಿದರು. ಬಿಳೇಕಲ್ಲಹಳ್ಳಿ ಗ್ರಾ.ಪಂ. ಅಧ್ಯಕ್ಷ ಭಾನು ಪ್ರಕಾಶ್, ಲಕ್ಕಮ್ಮನಹಳ್ಳಿ ಗ್ರಾ.ಪಂ. ಉಪಾಧ್ಯಕ್ಷ ಲಕ್ಷಣ್ ಗೌಡ, ಪುಟ್ಟೇಗೌಡ, ಚಂದ್ರಶೇಕರ್, ಸಣ್ಣ ಕಾಟೆಗೌಡ, ಹರೀಶ್, ಯಶೋಧ, ಲತಾ, ರತ್ನಮ್ಮ, ಜಗದೀಶ್, ನಾಗರತ್ನ, ಗೋಪಿಕೃಷ್ಣ, ಲೋಲಾಕ್ಷಿ, ದೌರ್ಜನ್ಯ ಸಮಿತಿ ಸದಸ್ಯ ರಮೇಶ್ ಯು.ಸಿ., ಗ್ರಾಮಸ್ಥರು ಉಪಸ್ಥಿತರಿದ್ದರು.

## ಒಳ್ಳೆಯ ಕೆಲಸಗಳಿಗೆ ದಾನ: ಜೀವನ ಸಾರ್ಥಕ

**ಶಿವಮೊಗ್ಗ:** ಶ್ರೀಮಂತರು, ಅನುಕೂಲಸ್ಥರು ತಾವು ಗಳಿಸಿದ್ದರಲ್ಲಿ ಸ್ವಲ್ಪ ಭಾಗ ವನ್ನಾದರೂ ಮಠ–ಮಾನ್ಯ, ಸಂಘಸಂಸ್ಥೆಗಳಿಗೆ ಒಳ್ಳೆಯ ಕೆಲಸಗಳಿಗೆ ದಾನ ಮಾಡುವುದರ ಮೂಲಕ ಜೀವನ ಸಾರ್ಥಕ ಮಾಡಿಕೊಳ್ಳಬೇಕು ಎಂದು ಶ್ರೀ ಬೆಕ್ಕಿನ ಕಲ್ಮಠದ ಡಾ.ಮಲ್ಲಿಕಾರ್ಜುನ ಮುರುಘರಾಜೇಂದ್ರ ಮಹಾಸ್ವಾಮಿಗಳು ಹೇಳಿದರು.ಭಾನುವಾರ ಇಲ್ಲಿಯ ಶ್ರೀ ಬೆಕ್ಕಿನಕಲಠದಲ್ಲಿ ಶ್ರೀ ಬಸವೇಶ್ವರ ವೀರಶೈವ ಲಿಂಗಾಯತ ಸಮಾಜ ಸೇವಾ ಸಂಘವು ಆಯೋಜಿಸಿದ್ದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮಾತನಾಡುತ್ತಿದ್ದರು.ಶಿಕ್ಷಣ ಸಮಗ್ರ ಬೆಳವಣಿಗೆಗೆ ಪೂರಕವಾಗಿರಬೇಕು. ಅಲ್ಲದೆ ಗುಣಮಟ್ಟದ ನಿರೀಕ್ಷೆಯನ್ನು ಹೊಂದಿರಬೇಕು ಎಂದ ಅವರು ಹಿಂದಿನ ಮೌಲ್ಯಗಳು ಈಗಿಲ್ಲ. ಇಂದಿನ ಟ್ರೆಂಡ್ ಎಲ್ಲಿಗೆ ತಲುಪುತ್ತದೆ ಎಂಬುದು ಊಹೆಗೂ ನಿಲುಕದ ಸಂಗತಿ ಎಂದು ತಿಳಿಸಿದರು.ಸ್ನಾತಕೋತ್ತರ ಪದವಿ ಪಡೆದವರಿಗೆ ಹಲವರಿಗೆ ಸರಿಯಾಗಿ ಒಂದು ವಾಕ್ಯ ವನ್ನೂ ಬರೆಯಲು ಬರುತ್ತಿಲ್ಲ. ಆ ಮಟ್ಟಕ್ಕೆ ಶಿಕ್ಷಣ ಕುಸಿಯುತ್ತಿದೆ ಎಂದು ವಿಷಾದಿಸಿದರು. ಎಎಸ್.ಎಸ್.ಎಲ್.ಸಿ., ಪಿಯುಸಿಯಲ್ಲಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದವರಿಗೆ ಹಾಗೂ ಇನ್ನಿತರ 18 ಸಾಧಕರಿಗೆ ಸುಮಾರು 12 ಲಕ್ಷ ಮೊತ್ತದ ನಗದು ಬಹುಮಾನ ನೀಡಲಾಗುವುದು ಎಂದು ಸಂಘದ ಗೌರವ ಕಾರ್ಯದರ್ಶಿ ಎಸ್.ಪಿ.ದಿನೇಶ್ ಪ್ರಾಸ್ತಾವಿಕ ನುಡಿಯಲ್ಲಿ ಮಾಹಿತಿ ನೀಡಿ ದರು.ಮಂಗಳೂರಿನ ಆರ್.ಜೆ.ನಯನಾ ಶೆಟ್ಟಿ ವಿಶೇಷ ಉಪನ್ಯಾಸ ನೀಡಿದರು. ಬಸವ ಕೇಂದ್ರದ ಡಾ.ಮರುಳಸಿದ್ಧ ಮಹಾಸ್ವಾಮಿಗಳು ಸಾನ್ನಿಧ್ಯ ವಹಿಸಿದ್ದರು. ಸಮಾಜದ ಮುಖಂಡರಾದ ಎಸ್.ಎಸ್,ಜ್ಯೋತಿಪ್ರಕಾಶ್, ರೇಣುಕಾರಾಧ್ಯ, ಮೋಹನ ಬಾಳಿಕಾಯಿ, ಪಿ.ರುದ್ರೇಶ್, ಬಳ್ಳೆಕೆರೆ ಸಂತೋಷ್, ಮಹೇಶ ಮೂರ್ತಿ, ರತ್ನಮ್ಮ, ಅನಿತಾ ರವಿಶಂಕರ, ತಾರಾನಾಥ್ ಮೊದಲಾದ ವರಿದ್ದರು.

## ಮೌಢ್ಯವನ್ನು ತೊಲಗಿಸಿದವರು ಶರಣರು

**ಚನ್ನಗಿರಿ:** 12ನೇ ಶತಮಾನದ ಶರಣರು ಕಾಯಕಕ್ಕೆ ಹೆಚ್ಚಿನ ಆದ್ಯತೆಯನ್ನು ನೀಡುತ್ತಿದ್ದು, ಅದರಿಂದ ದೊರೆಯುತ್ತಿದ್ದ ಆದಾಯದಿಂದ ದಾಸೋಹ ಮಾಡುತ್ತಾ ಸೌಹಾರ್ದತೆಯನ್ನು ಮೆರೆಯುವಲ್ಲಿ ತಾರತಮ್ಯ ಮಾಡದೆ ಸರ್ವರನ್ನು ಸಮಾನವಾಗಿ ಕಾಣುವಂತಹ ಕಾಲ 12ನೇ ಶತಮಾನದ್ದಾಗಿತ್ತು ಎಂದು ರಾಜ್ಯ ಮಾನವ ಬಂಧುತ್ವ ವೇದಿಕೆಯ ಸಂಚಾಲಕ ಎ.ಬಿ.ರಾಮಚಂದ್ರಪ್ಪ ಹೇಳಿದರು.
ತಾಲೂಕಿನ ಪಾಂಡೋಮಟ್ಟಿ ಗ್ರಾಮದಲ್ಲಿನ ವಿರಕ್ತಮಠದಲ್ಲಿ ಏರ್ಪಡಿಸಿದ್ದ ಶರಣ ಜೇಡರ ದಾಸಿಮಯ್ಯನವರ ಸ್ಮರಣೋತ್ಸವ ಮತ್ತು 868ನೇ ಮಾಸಿಕ ಶಿವಾನುಭವ ಗೋಷ್ಠಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.
ಶರಣರ ಕಾಲದಲ್ಲಿ ಲಿಂಗಾಯತ ಧರ್ಮ ಶ್ರಮದ ಬೆವರಿಗೆ ಬೆಲೆಯನ್ನು ಕೊಡುತ್ತಿತ್ತು. ಆಗಿನ ಕಾಲದ ಶರಣರು ಸಾಮಾಜಿಕ ಮೌಢ್ಯವನ್ನು ತೊಲಗಿಸುವಲ್ಲಿ ಜಾಗೃತಿ ಮೂಡಿಸಿ ಮೌಢ್ಯತೆಯನ್ನು ತೊಲಗಿಸಲು ಶ್ರಮಿಸಿದಂತಹ ವಿಚಾರವಂತ ಶರಣರಾಗಿದ್ದರು ಎಂದು ತಿಳಿಸಿದರು.ತುಮ್‌ಕೋಸ್ ನಿರ್ದೇಶಕ ಎಚ್.ಎಸ್.ಶಿವಕುಮಾರ್ ಮಾತನಾಡಿ, ಸ್ವರ್ಗ ನರಕ ಎನ್ನುವುದು ಎಲ್ಲಿಯೂ ಇಲ್ಲ. ನಾವು ಮಾಡುವ ಕಾಯಕದಲ್ಲಿ ಸ್ವರ್ಗ ಮತ್ತು ನರಕಗಳು ಇರುತ್ತವೆ ಎಂದು ಜಗಜ್ಯೋತಿ ಬಸವೇಶ್ವರರು ಹೇಳಿದ್ದಾರೆ. ಪ್ರತಿಯೊಬ್ಬರು ಸಾಮಾಜಿಕವಾಗಿ ಜೀವಿಸುವಾಗ ಸೌಹಾರ್ದತೆಯಿಂದ ನಮ್ಮ ಬದುಕುಗಳನ್ನು ಸಾಗಿಸಿದರೆ



ನೆಮ್ಮದಿಯ ಜೀವನ ನಡೆಸುವ ಜೊತೆಗೆ ಯಶಸ್ಸು ನಮ್ಮದಾಗಲಿದೆ ಎಂದು ಹೇಳಿದರು. ಸಾನ್ನಿಧ್ಯ ವಹಿಸಿ ಮಾತನಾಡಿದ ಶ್ರೀಮಠದ ಡಾ.ಶ್ರೀ ಗುರುಬಸವ ಮಹಾಸ್ವಾಮಿಗಳು, ಜೇಡರ ದಾಸಿಮಯ್ಯನವರ ವಚನ ಸಾಹಿತ್ಯವು 12ನೇ ಶತಮಾನದಲ್ಲಿ ಮೊದಲಿಗೆ ವಚನ ಸಾಹಿತ್ಯವನ್ನು ರಚಿಸಿದವರಾಗಿದ್ದು, ಅವರ ಚಿಂತನೆಗಳು ಇಂದಿನ ದಿನಮಾನಕ್ಕೆ ಅವಶ್ಯಕವಾಗಿ ಬೇಕಾಗಿದೆ. ಕಾಯಕ, ದಾಸೋಹ ಮತ್ತು ದಾನಕ್ಕೆ ಮಹತ್ವ ನೀಡಿದ್ದು ಶರಣರ ಪರಂಪರೆಯಾಗಿದೆ ಎಂದು ಹೇಳಿದರು.
ಮಾಯಕೊಂಡ ಕ್ಷೇತ್ರದ ಮಾಜಿ ಶಾಸಕ ಬಸವರಾಜ ನಾಯ್ಕ್, ಕೃಷಿಕ ಸಮಾಜದ ಅಧ್ಯಕ್ಷ ಅಶೋಕ್ ಪಾಟೀಲ್, ಬಿಇಒ ಎಲ್.ಜಯಪ್ಪ, ಹಾಸ್ಯ ಕಲಾವಿದ ಜಗನ್ನಾಥ್, ಡಾ.ಇಂಚರ, ಕು.ಇಂಪನ ಮಾತನಾಡಿದರು.
ಬಸವ ತತ್ವ ಸಮ್ಮೇಳನದ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಣೆ ಮಾಡಲಾಯಿತು. ಗರಗ ಶಿವಲಿಂಗಪ್ಪ, ಬಿದರೆ ಸಿದ್ದಲಿಂಗಮೂರ್ತಿ, ಖಗ್ಗಿ ಶ್ರೀಕಂಠಮೂರ್ತಿ, ಅತ್ತಿಮೊಗ್ಗೆ ಚಂದ್ರಶೇಖರ್, ಸಿದ್ದಮಠದ ಎಸ್.ಆರ್.ಕುಮಾರ್, ಕಾಕನೂರು ಎಂ.ಬಿ.ನಾಗರಾಜ್, ಶಿವಮೂರ್ತಪ್ಪ, ಧನಂಜಯ ಇದ್ದರು.

## ದಲಿತ ಸಾಹಿತ್ಯ ನಾಡಿನಾದ್ಯಂತ ಪಸರಿಸಲಿ

**ಚಿಕ್ಕಮಗಳೂರು:** ನದಿಗಳು ಉಗಮಗೊಂಡು ಸಣ್ಣ ತೊರೆಗಳಾಗಿ ಕಡಲತೀರಕ್ಕೆ ಸೇರುವಂತೆ, ದಲಿತ ಸಾಹಿತ್ಯ ಚಟುವಟಿಕೆಗಳು ಹಂತ ಹಂತವಾಗಿ ನಾಡಿನಾದ್ಯಂತ ಪಸರಿಸಬೇಕು. ಬೃಹಾದಕಾರವಾಗಿ ಬೆಳೆದು ಸಾಹಿತ್ಯದ ಕಡಲಿನತ್ತ ಸಾಗಬೇಕು ಎಂದು ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಹೇಳಿದರು.ನಗರದ ಕನ್ನಡ ಭವನದಲ್ಲಿ ಭಾನುವಾರ ದಲಿತ ಸಾಹಿತ್ಯ ಪರಿಷತ್ ಜಿಲ್ಲಾ, ಮಹಿಳಾ ಹಾಗೂ ಯುವ ಘಟಕಗಳ ಉದ್ಘಾಟನಾ ಹಾಗೂ ಪದಗ್ರಹಣ ಕಾರ್ಯಕ್ರಮದ ಅಂಗವಾಗಿ ಸಂವಿಧಾನ ಶಿಲ್ಪಿ ಡಾ. ಬಿ.ಆರ್.ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಭಾನುವಾರ ಅವರು ಮಾತನಾಡಿದರು.ಸಾಹಿತ್ಯಾತ್ಮಕ ಚಟುವಟಿಕೆ ಟೊಳ್ಳು ಬೀಜಗಳಾಗದೇ, ಗಟ್ಟಿಬೀಜವಾಗಿ ಹೊರಹೊಮ್ಮಬೇಕು. ಸ್ವಾರ್ಥ ಅಥವಾ ಸಂಕುಚಿತ ಭಾವನೆಯಿಂದ ಸಾಹಿತ್ಯವು ಹೆಚ್ಚು ಕಾಲಗಳ ಉಳಿಯುವುದಿಲ್ಲ. ಬದಲಾಗಿ ಮನಸ್ಸಿನ ಒಡಲಾಳ ಧ್ವನಿಯಾಗಿ ಬೆಳಕು ಚೆಲ್ಲುವ ಜೊತೆಗೆ ಸರಿಯಾದ ಮಾರ್ಗದಿಂದ ಸಾಗಿಸಿದರೆ ಶಾಶ್ವತವಾಗಿ ಮನದಾಳದಲ್ಲಿ ನೆಲೆಯೂರಲು ಸಾಧ್ಯ ಎಂದರು.ಸಾಹಿತ್ಯ ಲೋಕದಲ್ಲಿ ಸದ್ವಿಚಾರ, ಸದುದ್ದೇಶದಿಂದ ಕೂಡಿದಾಗ ಚಿರಕಾಲ ಉಳಿಯುತ್ತದೆ. ರಾಷ್ಟ್ರದಲ್ಲಿನ ರಾಜಮಹಾರಾಜರು, ಶ್ರೀಮಂತರು, ಹಣ ಗಳಿಸಿದವರನ್ನು ಜಗತ್ತು ಮರೆತಿದೆ. ಆದರೆ ಸಮಾಜಮುಖಿ ಕರ್ತವ್ಯ ನಿರ್ವಹಿಸಿದ ಅಂಬೇಡ್ಕರ್, ಬಸವಣ್ಣ, ಶ್ರೀರಾಮರನ್ನು ಇಂದಿಗೂ ನೆನೆಯುವಂಥ ಕೆಲಸವಾಗಲು ಅವರ ಕೊಡುಗೆಗಳೇ ಮುಖ್ಯ ಕಾರಣ ಎಂದರು.ದಸಾಪ ಜಿಲ್ಲಾಧ್ಯಕ್ಷ ಕೆ.ಎನ್.ಶಾಂತಮೂರ್ತಿ ಮಾತನಾಡಿದರು. ಐಡಿಎಸ್‌ಜಿ ಪ್ರಾಂಶುಪಾಲೆ ಪುಷ್ಪಭಾರತಿ ಉಪನ್ಯಾಸ ನೀಡಿದರು. ದಸಾಪ ನೂತನ ಜಿಲ್ಲಾ ಘಟಕ : ಕೆ. ಎನ್.ಶಾಂತಮೂರ್ತಿ (ಅಧ್ಯಕ್ಷ), ಗೌರವಾಧ್ಯಕ್ಷ ಆರ್.ನರಸಿಂಪ್ಪ, ಧರಗುಣಿ ಮಂಜುನಾಥ್ (ಪ್ರ.ಕಾರ್ಯದರ್ಶಿ), ಜಯಣ್ಣ (ಗೌರವ ಸಲಹೆಗಾರ), ಹೆಚ್.ಸಿ.ಸೋಮಶೇಖರ್ (ಕೋಶಾಧ್ಯಕ್ಷ), ಮಂಜುನಾಥ್ (ಸಹ ಕಾರ್ಯದರ್ಶಿ), ಅಭಿಷೇಕ, ಮಹಾದೇವಪ್ಪ, (ಸಂಘಟನಾ ಕಾರ್ಯದರ್ಶಿ), ಪ್ರವೀಣ್ (ಸಂಚಾಲಕ). ಮಹಿಳಾ ಜಿಲ್ಲಾ ಘಟಕ : ಮೀನಾ ಕುಮಾರಿ (ಅಧ್ಯಕ್ಷೆ), ಡಿ.ಯಶೋಧ (ಉಪಾಧ್ಯಕ್ಷೆ), ಅರುಣ (ಪ್ರ. ಕಾರ್ಯದರ್ಶಿ), ಲೀಲಾವತಿ (ಸಹ ಕಾರ್ಯದರ್ಶಿ), ಸುಮಿತ್ರ (ಕೋಶಾಧ್ಯಕ್ಷೆ), ಜಯಮ್ಮ, ಪ್ರಮೀಳ (ನಿರ್ದೇಶಕರು), ಮೀನಾಕ್ಷಮ್ಮ (ಸಂಚಾಲಕಿ), ಕವಿತಾ (ಸಂಘಟನಾ ಕಾರ್ಯದರ್ಶಿ). ಜಿಲ್ಲಾ ಯುವಘಟಕ : ಮಂಜುನಾಥ್ (ಅಧ್ಯಕ್ಷ), ಕು.ಶಿವಾನಿ (ತಾ.ಅಧ್ಯಕ್ಷೆ), ದೇವರಾಜ್ (ಉಪಾಧ್ಯಕ್ಷ), ಕು.ಬಾಂಧವ್ಯ ಕಾರ್ಯ ದರ್ಶಿ), ಖುಷಿ, ಕೃತಿಕಾ (ಸದಸ್ಯರು).ಕಾರ್ಯಕ್ರಮದಲ್ಲಿ ಅಧ್ಯಕ್ಷತೆಯನ್ನು ಮೈಸೂರು ವಿಭಾಗೀಯ ಸಂಯೋಜಕ ಡಾ.ಚಂದ್ರಗುಪ್ತ ವಹಿಸಿ ದ್ದರು. ಮೆಸ್ಕಾಂ ಉಗ್ರಾಣ ಪಾಲಕ ಜಯಣ್ಣ, ಸಾಮಾಜಿಕ ಕಾರ್ಯಕರ್ತೆ ಚೇತನ, ಸಾಹಿತಿ ಸಿ.ಜಿ.ಸುರೇಶ್, ಪ್ರಗತಿಪರ ಮುಖಂಡ ಉಮೇಶ್‌ಕುಮಾರ್, ದಸಾಪ ಚಿಕ್ಕಮಗಳೂರು ಅಧ್ಯಕ್ಷ ಡಾ.ವಿಜಯ್‌ಕುಮಾರ್, ಮೂಡಿಗೆರೆ ಅಧ್ಯಕ್ಷ ಪಿ.ಕೆ.ಮಂಜುನಾಥ, ತರೀಕೆರೆ ಅಧ್ಯಕ್ಷ ಶೇಖರಪ್ಪ, ಶೃಂಗೇರಿ ಅಧ್ಯಕ್ಷೆ ಜಲಜ, ವಕೀಲರ ಸಂಘದ ಕಾರ್ಯದರ್ಶಿ ಅನಿಲ್, ದೌರ್ಜನ್ಯ ನಿಯಂತ್ರಣ ಸಮಿತಿ ಸದಸ್ಯ ಹುಣಸೇಮಕ್ಕಿ ಲಕ್ಷ್ಮಣ್ ಮತ್ತಿತರರಿದ್ದರು.




## 1.34 ಕೋಟಿ ವೆಚ್ಚದ ವಾಣಿಜ್ಯ ಸಂಕೀರ್ಣ ನಿರ್ಮಾಣಕ್ಕೆ ಭೂಮಿಪೂಜೆ



**ಹೊನ್ನಾಳಿ:** ಪಟ್ಟಣದ ತುಮ್ಮಿನಕಟ್ಟೆ ರಸ್ತೆಯಲ್ಲಿರುವ ಟಿಎಪಿಸಿಎಂಎಸ್‌ಗೆ ಸೇರಿದ (ಪಶು ಆಸ್ಪತ್ರೆಯ ಮುಂಭಾಗದಲ್ಲಿ) 72*45 ಅಳತೆಯ ನಿವೇಶನದಲ್ಲಿ ಎರಡು ಅಂತಸ್ತಿನ ವಾಣಿಜ್ಯ ಮಳಿಗೆಗಳನ್ನು ನಿರ್ಮಿಸಲಾಗುವುದು ಎಂದು ಸಂಘದ ನಿರ್ದೇಶಕರು, ಶಾಸಕ ಡಿ.ಜಿ. ಶಾಂತನಗೌಡ ಹೇಳಿದರು.
ಕಟ್ಟಡ ನಿರ್ಮಾಣಕ್ಕೆ ಭೂಮಿಪೂಜೆ ನೆರವೇರಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈ ಜಾಗದಲ್ಲಿ ತುಂಬಾ ಹಳೇಯದಾದ ಕಟ್ಟಡವಿತ್ತು. ತುಮ್ಮಿನಕಟ್ಟೆ ರಸ್ತೆ ಅಗಲೀಕರಣ ಕೂಡ ಇದೇ ಸಂದರ್ಭದಲ್ಲಿ ಬಂದಿದ್ದರಿಂದ ಈ ಹಳೆಯದಾದ ಕಟ್ಟಡವನ್ನು ತೆರವುಗೊಳಿಸಿದ್ದು, ಇದೀಗ 1.34 ಕೋಟಿ ರೂ. ವೆಚ್ಚದಲ್ಲಿ ವಾಣಿಜ್ಯ ಮಳಿಗೆಗಳನ್ನು ನಿರ್ಮಿಸಲಾಗುತ್ತಿದೆ ಎಂದರು.
ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮುರುಗೇಶ್ ಮಾತನಾಡಿ, ನಮ್ಮ ಸಂಘದ ನಿವೇಶನದ ಒಂದಿಷ್ಟು ಜಾಗ ರೋಡ್ ಮಾರ್ಜಿನ್‌ಗೆ ಹೋಗಿದ್ದರಿಂದ ಅದಕ್ಕೆ ಪರಿಹಾರವಾಗಿ ಸಿಕ್ಕ 32 ಲಕ್ಷ ರೂ., ನಬಾರ್ಡ್‌ನಿಂದ 50 ಲಕ್ಷ ರೂ., ನಮ್ಮ ಸಂಘದಿಂದ 20 ಲಕ್ಷ ರೂ. ಹಣವನ್ನು ಕ್ರೂಢೀಕರಿಸಿ, ಬ್ಯಾಂಕಿನಿಂದ 32 ಲಕ್ಷ ರೂ. ಸಾಲವನ್ನು ಪಡೆದು ವಾಣಿಜ್ಯ ಮಳಿಗೆಗಳನ್ನು ನಿರ್ಮಿಸಲಾಗುತ್ತಿದೆ ಎಂದರು.
ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷರಾದ ಎಚ್.ಬಸವರಾಜ್, ಉಪಾಧ್ಯಕ್ಷರಾದ ಎಚ್.ಡಿ.ಬಸವರಾಜಪ್ಪ ಬಸವನಹಳ್ಳಿ, ನಿರ್ದೇಶಕರಾದ ಡಿ.ಮಂಜುನಾಥ್, ಕೆ.ಚೇತನ್, ಎಚ್.ಸಿ. ಶೇಖರಪ್ಪ, ಎಂ.ಜಿ.ಹಾಲಪ್ಪ, ಬಸಮ್ಮ, ಎಚ್.ಜಿ. ಶಂತಮೂರ್ತಿ, ಕೆ.ಬಿ.ಸಿದ್ದನಗೌಡ, ನಾಗಮ್ಮ, ಅನಂತನಾಯ್ಕ, ರಾಜು ಸರಳಿನಮನೆ, ಎಂ.ಎಚ್. ಗಜೇಂದ್ರಪ್ಪ, ಎಚ್.ಸಿ. ಪ್ರಕಾಶ್, ಸಂಘದ ಸಿಬ್ಬಂದಿ ಗೋಪಿನಾಥ್, ಸುರೇಶ್ ಇದ್ದರು.



# ಪ್ರವಾಸಿ ತಾಣಗಳಿಗೆ ಪ್ರಯಾಣವೇ ಕಷ್ಟ

**ಚಿಕ್ಕಮಗಳೂರು:** ರಮಣೀಯ ಪ್ರಕೃತಿ ತಾಣಗಳು, ದಟ್ಟ ಕಾನನದ ಸಾಲುಗಳು, ಇತಿಹಾಸ ಪ್ರಸಿದ್ಧ ಧಾರ್ಮಿಕ ಕೇಂದ್ರ ಬೀಡಾದ ಕಾಫಿ ನಾಡಿಗೆ ಪ್ರವಾಸಿಗರು ವರ್ಷದಿಂದ ವರ್ಷಕ್ಕೆ ಹೆಚ್ಚು. ಪ್ರವಾಸಿ ತಾಣಗಳು ಮೂಲ ಸೌಕರ್ಯಗಳಿಂದ ನಲುಗುತ್ತಿವೆ.
ಕಾರ್ಪೋರೇಟ್ ಸಂಸ್ಕೃತಿ, ಹಲವು ಜಂಜಾಟದ ನಡುವೆ ನಲುಗಿಹೋಗಿರುವ ಜನ, ಕೊಂಚ ನಿರಾಳ ಬದುಕು ಅರಸಿ ಮಲೆನಾಡುಗಳತ್ತ ದಾಂಗುಡಿ ಇಡುತ್ತಿದ್ದಾರೆ. ವರ್ಷದಿಂದ ವರ್ಷಕ್ಕೆ, ತಿಂಗಳಿನಿಂದ ತಿಂಗಳಿಗೆ ಪ್ರವಾಸಿಗರ ಸಂಖ್ಯೆ ಹೆಚ್ಚುತ್ತಲೇ ಇದೆ.
ಪ್ರವಾಸೋದ್ಯಮ ಇಲಾಖೆ ಶೃಂಗೇರಿ,ಹೊರನಾಡು, ಕಳಸ, ಮುಳ್ಳಯ್ಯನಗಿರಿ, ಬಾಬಾಬುಡನ್ಗಿರಿ, ಕೆಮ್ಮಣ್ಣುಗುಂಡಿ ಗಿರಿಧಾಮಗಳಿಗೆ ಬರುವ ಪ್ರವಾಸಿಗರ ಲೆಕ್ಕವನ್ನು ಮಾತ್ರ ಇಟ್ಟುಕೊಂಡಿದೆ. ಆದರೆ, ಜಿಲ್ಲೆಯಲ್ಲಿ ಕ್ಷೇತ್ರಗಳಷ್ಟೇ ಪ್ರವಾಸಿ ತಾಣವಾಗಿ ಉಳಿದಿಲ್ಲ. ರಾಣಿಝರಿ, ಕುದುರೆಮುಖ, ದೇವರಮನೆ, ಎತ್ತಿನಭುಜ ಸೇರಿ ಹಲವು ಪ್ರವಾಸಿ ತಾಣಗಳಿವೆ. ಮುಳ್ಳಯ್ಯನಗಿರಿ, ಬಾಬಾಬುಡನ್ಗಿರಿ, ಸೀತಾಳಯ್ಯನಗಿರಿ, ಗಿರಿಶ್ರೇ ಣಿಯಮಾಣಿಕ್ಯಧಾರ ಾ,ಹೊನ್ನಮ್ಮನ ಹಳ್ಳ, ಹಿರೇಕೊಳಲೆ ಕೆರೆ, ಹಿರೇಮಗಳೂರು ಕೋದಂಡ ರಾಮಚಂದ್ರಸ್ವಾಮಿ ದೇಗುಲ, ಮಲ್ಲೇ ನಹಳ್ಳಿ ಬಿಂಡಿಗದ ದೇವಿರಮ್ಮ ದೇಗುಲ, ಖಾಂಡ್ಯಾದಮಾರ್ಕಂಡೇಶ್ವರ ದೇಗುಲ, ಅಂಬಳೆ ಮೊದಲಾದ ಪ್ರವಾಸಿ ತಾಣಗಳು ಜಿಲ್ಲಾ ಕೇಂದ್ರಕ್ಕೆ ಹೊಂದಿಕೊಂಡಂತೆ ಇವೆ. ಇಲ್ಲಿಗೆ ಪ್ರವಾಸಿಗರು ನಿರಾಯಾಸವಾಗಿಹೋಗಿ ಬರುವ ಸೌಕರ್ಯ ಇದೆಯೇ ಎಂಬ ಪ್ರಶ್ನೆಗೆ ಉತ್ತರ ಸಿಗುವುದಿಲ್ಲ. ವಾರಾಂತ್ಯದಲ್ಲಿ ಮುಳ್ಳಯ್ಯನಗಿರಿ ಮತ್ತು ಬಾಬಾಬುಡನ್ ಗಿರಿಗೆಹೋಗುವ ಪ್ರವಾಸಿಗರು ಸಂಚಾರ ದಟ್ಟಣೆಯಲ್ಲಿ ಸಿಲುಕಿ ನರಳುವುದು ಸಾಮಾನ್ಯ. ಈ ದಟ್ಟಣೆ ನಿಯಂತ್ರಿಸಲು ಗಿರಿಯ ತಳಭಾಗದಲ್ಲೇ ವಾಹನ ನಿಲುಗಡೆ ತಾಣ ನಿರ್ಮಿಸುವ ಪ್ರಸ್ತಾಪ ಹಾಗೇ ಉಳಿದಿದೆ. ಎರಡುಮೂರು ಕಡೆ ಜಾಗ ಗುರುತಿಸಿದ್ದ ಜಿಲ್ಲಾಡಳಿತ, ಅಂತಿಮ ತೀರ್ಮಾನ ಕೈಗೊಂಡಿಲ್ಲ. ಗಿರಿಯ ಮೇಲ್ಭಾಗಕ್ಕೆ ತೆರಳಲು ಆನ್ಲೈನ್ ಬುಕ್ಕಿಂಗ್ಮಾಡುವ ವ್ಯವಸ್ಥೆಯೂಜಾರಿಗೆ ಬಂದಿಲ್ಲ. ಇದರಿಂದಾಗಿ ಸಂಚಾರ ದಟ್ಟಣೆಯಲ್ಲಿ ಪ್ರವಾಸಿಗರು ಸಿಲುಕುವುದು ಸಾಮಾನ್ಯವಾಗಿದೆ.



## ಎಲ್ಲೆಂದರಲ್ಲಿ ನಿಲ್ಲುವ ವಾಹನಗಳು

ಮೂಡಿಗೆರೆ: ತಾಲ್ಲೂಕಿನ ಪ್ರವಾಸಿ ತಾಣಗಳಲ್ಲಿ ಸೂಕ್ತ ವಾಹನ ನಿಲುಗಡೆ ವ್ಯವಸ್ಥೆ ಇಲ್ಲದೇ ರಸ್ತೆ ಬದಿಯಲ್ಲೇ ನಿಲುಗಡೆಗೊಳಿಸಲಾಗುತ್ತಿದೆ. ತಾಲ್ಲೂಕಿನ ಪ್ರವಾಸಿ ತಾಣಗಳಲ್ಲಿ ದೇವರಮನೆ ಭೈರಾಪುರ ರಾಣಿಝರಿ ಪ್ರಮುಖವಾಗಿದ್ದು ರಾಣಿಝರಿಯನ್ನು ಹೊರತು ಪಡಿಸಿ ಉಳಿದೆಲ್ಲಾ ತಾಣಗಳಲ್ಲೂ ವಾಹನ ನಿಲುಗಡೆಗೆ ಯಾವುದೇ ವ್ಯವಸ್ಥೆ ಇಲ್ಲದ ಕಾರಣ ಪ್ರವಾಸಿಗರು ರಸ್ತೆ ಬದಿಯಲ್ಲೇ ವಾಹನ ನಿಲುಗಡೆಗೊಳಿಸುತ್ತಿದ್ದಾರೆ. ಪ್ರವಾಸಿಗರ ವಾಹನಗಳು ರಸ್ತೆ ಬದಿಯಲ್ಲೇ ನಿಲ್ಲುವುದರಿಂದ ಸ್ಥಳೀಯರು ಸಂಚರಿಸಲು ಅಡ್ಡಿಯಾಗುತ್ತಿದ್ದು ಪದೇ ಪದೇ ವಾಗ್ವಾದಗಳು ಕೂಡ ನಡೆಯುತ್ತಿವೆ. ದೇವರಮನೆಗೆ ಬರುವ ವಾಹನಗಳು ದೇವಾಲಯದ ಬಳಿಗೆ ಬರದೇ ಗ್ರಾಮದ ಬೆಟ್ಟದ ತಪ್ಪಲಿನಲ್ಲಿಯೇ ನಿಲುಗಡೆಮಾಡುತ್ತಾರೆ. ಚಾರ್ಮಾ ಡಿ ಘಾಟಿಯಲ್ಲಿ ಅಣ್ಣಪ್ಪಸ್ವಾಮಿ ದೇವಾಲಯದಿಂದ ಕೆಳಭಾಗದಲ್ಲಿ ರಸ್ತೆ ಬದಿಯಲ್ಲೇ ವಾಹನಗಳನ್ನು ನಿಲ್ಲಿಸಿ ಪ್ರಪಾತ ವೀಕ್ಷಣೆಮಾಡಲಾಗುತ್ತಿದೆ. ಇದರಿಂದ ಹೆದ್ದಾರಿಯಲ್ಲಿ ಸಾಗುವ ವಾಹನ ಸವಾರರು ಸಂಕಷ್ಟ ಎದುರಿಸುವಂತಾಗಿದೆ. 'ಪ್ರವಾಸಿ ವಾಹನಗಳಿಗೆ ಸ್ಥಳೀಯವಾಗಿ ಶುಲ್ಕ ವಿಧಿಸುತ್ತಾರಾದರೂ ಸರ್ಕಾರ ವಾಹನ ನಿಲುಗಡೆಗೆಯಾವುದೇ ಕ್ರಮ ಕೈಗೊಂಡಿಲ್ಲ. ವಾರಾಂತ್ಯದಲ್ಲಿ ಬರುವ ನೂರಾರು ವಾಹನಗಳು ರಸ್ತೆ ಬದಿಯೇ ನಿಲ್ಲುವುದರಿಂದ ಪ್ರವಾಸಿಗರು ಕಿರಿಕಿರಿ ಅನುಭವಿಸುವಂತಾಗಿದೆ' ಎನ್ನುತ್ತಾರೆ ಸ್ಥಳೀಯ ಹೋಂ ಸ್ಟೆ ವಾಹನ ಚಾಲಕ ಸುರೇಶ್.

**ಕಳಸದ ಅಂಬಾತೀರ್ಥ ಸೂಕ್ತ ಸುರಕ್ಷತೆ ಇಲ್ಲದಿರುವುದು ಕೆಮ್ಮಣ್ಣುಗುಂಡಿ ಪ್ರಯಾಣ ತ್ರಿಣುಕಾಟ**

ತರೀಕೆರೆ: ತಾಲೂಕಿನಲ್ಲಿ ವಿಶೇಷವಾಗಿ ಕರ್ನಾಟಕದ ಊಟಿ ಎಂದೇ ಪ್ರಸಿದ್ಧವಾಗಿರುವ ಕೆಮ್ಮಣ್ಣುಗುಂಡಿಯ ಕೃಷ್ಣ ರಾಜೇಂದ್ರ ಗಿರಿಧಾಮ ಬಹಳ ಪ್ರಮುಖವಾಗಿದೆ.
ಇದರ ಸಮೀಪವಿರುವ ಹೆಬ್ಬೆ ಜಲಪಾತ ಪ್ರವಾಸಿಗರ ಪ್ರಮುಖ ಆಕರ್ಷಣೆಯ ತಾಣ. ಈ ಪ್ರದೇಶಗಳಿಗೆ ಹೋಗುವ ಮೊದಲೇ ದೊರೆಯುವುದು ಕಲ್ಲತ್ತಿಗಿರಿ ಜಲಪಾತ. ಈ ಜಲಪಾತದೊಂದಿಗೆ ಪ್ರಮುಖ ಧಾರ್ಮಿಕ ಕ್ಷೇತ್ರವು ಆಗಿದೆ. ಈ ಪ್ರದೇಶಗಳಿಗೆ ಬರುವ ಪ್ರವಾಸಿಗರು ತಮ್ಮ ವಾಹನಗಳಲೇ ಬರಬೇಕಾಗುತ್ತದೆ.
ಪ್ರವಾಸಿಗರ ವಾಹನಗಳ ಸಂಖ್ಯೆಯುಹೆಚ್ಚಾಗುತ್ತಿದ್ದು ಮೊದಲೇ ಕಿರಿದಾಗಿರುವ ಈ ರಸ್ತೆಯಲ್ಲಿ ವಾಹನಗಳ ನಿಲುಗಡೆಗೆ ಸರಿಯಾದ ಸ್ಥಳಾವಕಾಶ ಇಲ್ಲ. ಪ್ರವಾಸಿಗರ ವಿಶ್ರಾಂತಿಗೆ ತಂಗುದಾಣಗಳಿಲ್ಲ. ಕೆಮ್ಮಣ್ಣುಗುಂಡಿ ರಸ್ತೆಯಂತೂ ಹೆಬ್ಬೆ ಜಲಪಾತದ ಚೆಕ್ಪೋಸ್ಟಿಂದ ಮುಂದಕ್ಕೆ ಸಂಪೂರ್ಣ ಹಾಳಾಗಿದೆ. ಬರುವ ವಾಹನಗಳಿಗೆ ಶುಲ್ಕ ನಿಗದಿಮಾಡಲಾಗಿದೆ. ಆದರೆ ವಾಹನ ಸಂಚಾರಕ್ಕೆ ಸೂಕ್ತ ರಸ್ತೆ ಇಲ್ಲ. ಇದರಿಂದ ಪ್ರವಾಸಿಗರು ಗಿರಿಧಾಮ ತಲುಪಲು ಪರದಾಡಬೇ ಕಾದ ಸ್ಥಿತಿ ಇದೆ.


## ಕ್ಯಾತನಮಕ್ಕಿ ತಲುಪುವುದೇ ಸಾಹಸ


ಕಳಸ: ತಾಲ್ಲೂಕಿನಲ್ಲಿ ಹಲವಾರು ಪ್ರವಾಸಿ ತಾಣಗಳು ಇದ್ದರೂಮೂಲ ಸೌಕರ್ಯ ಕೊರತೆಯಿಂದ ಬಳಲುತ್ತಿವೆ ಪ್ರವಾಸಿಗರ ನೆಚ್ಚಿನ ಕ್ಯಾತನಮಕ್ಕಿ ತಲುಪುವ ರಸ್ತೆ ಸ್ಥಿತಿ ಅಧೋಗತಿಯಾಗಿದೆ. ಸುರುಮನೆ ಜಲಪಾತ ರಸ್ತೆ ಕೂಡ ಶಿಥಿಲವಾಗಿದೆ. ಪ್ರವಾಸಿಗರಿಗೆ ಇಡೀ ತಾಲ್ಲೂಕಿನಲ್ಲಿ ಮಾಹಿತಿ ಕೇಂದ್ರ ಇಲ್ಲ. ಕುದುರೆಮುಖ ಮತ್ತು ನೇತ್ರಾವತಿ ಚಾರಣ–ಕ್ಕೆ ನೂರಾರು ಜನ ಬರುತ್ತಾರೆ. ಅವರ ವಾಹನ ನಿಲ್ಲಿಸಲು ಸೂಕ್ತ ವ್ಯವಸ್ಥೆ ಇಲ್ಲದೆ ವಾಹನ ಸಂಚಾರಕ್ಕೆ ತೊಡಕಾಗುತ್ತಿದೆ. ಅಂಬಾತೀರ್ಥ ನೋಡಲುಹೋದವರು ಜೀವ ಕೈಯಲ್ಲಿ ಹಿಡಿದು ವಾಪಸ್ ಬರಬೇಕಾಗುತ್ತದೆ. ತುಕ್ಕು ಹಿಡಿದ ತೂಗುಸೇ ತುವೆಗಳು ಕೂಡ ಅಪಾಯಕ್ಕೆ ಅಹ್ವಾನ ಕೊಡುತ್ತವೆ. ಒಟ್ಟಾರೆ ರಮಣೀಯ ತಾಣಗಳು ಇದ್ದರೂಮೂಲ ಸೌಕರ್ಯ ಇಲ್ಲದಿರುವುದು ಪ್ರವಾಸಿಗರಿಗೆ ಕಿರಿಕಿರಿ ಉಂಟು ಮಾಡುತ್ತಿದೆ.
ರಾಣಿಝರಿಗೆ ರಸ್ತೆಯೇ ಸವಾಲು ಪ್ರವಾಸಿಗರನ್ನು ಕೈ ಬೀಸಿ ಕರೆಯುವ ಜಿಲ್ಲೆಯ ಪ್ರಕೃತಿ ತಾಣಗಳಲ್ಲಿ ರಾಣಿ ಝರಿ ಕೂಡ ಒಂದು. ಸಂಪೂರ್ಣ ಹಾಳಾಗಿರುವ ರಸ್ತೆಯಲ್ಲಿ ಈ ತಾಣಕ್ಕೆ ತೆರಳಲು ಜನ ಹರಸಾಹಸ ಪಡುತ್ತಿದ್ದಾರೆ. ಮೂಡಿಗೆರೆ ತಾಲ್ಲೂಕಿನ ಸುಂಕಸಾಲೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿರುವ ರಾಣಿಝರಿ ಪ್ರವಾಸಿ ತಾಣ ಚಿಕ್ಕಮಗಳೂರು ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಗಡಿ ರೇಖೆಯಂತಿದೆ. ಗುಡ್ಡದ ಮೇಲಿಂದಮೂರೂವರೆ ಸಾವಿರ ಅಡಿಯ ಪ್ರಪಾತ ನೋಡಲು ನಿತ್ಯ ಪ್ರವಾಸಿಗರಿಗೆ ಸಾವಿರಾರು ಸಂಖ್ಯೆಯಲ್ಲಿ ಬರುತ್ತಿದ್ದಾರೆ. ಇದ್ದ ರಸ್ತೆ ಸಂಪೂರ್ಣವಾಗಿ ಹಾಳಾಗಿದ್ದು ಕಾರುಗಳು ಮಿನಿ ಬಸ್ಗಳುಹೋಗುವ ಸ್ಥಿತಿಯಲ್ಲಿ ರಸ್ತೆ ಇಲ್ಲವಾಗಿದೆ.ಮೂರು􀀀ನಾಲ್ಕು ಕಿಲೋ ಮೀಟರ್ ದೂರದಲ್ಲೇ ವಾಹನಗಳನ್ನು ನಿಲ್ಲಿಸಿ ಜೀಪ್ಗಳಲ್ಲಿ ತೆರಳಬೇ ಕಾದ ಅನಿವಾರ್ಯತೆ ಇದೆ. ಅರಣ್ಯ ಇಲಾಖೆ ಚೆಕ್ಪೋಸ್ಟ್ ಇರುವ ಜಾಗದಿಂದ ಹತ್ತಿರದಲ್ಲೇ ರಾಣಿಝರಿ ಇದೆ. ಅಲ್ಲಿಂದ ಬಲ್ಲಾಳರಾಯನ ದುರ್ಗ ಬಂಡಾಜೆ ಜಲಪಾತ ವೀಕ್ಷಣೆಗೆ ಜನ ಚಾರಣ ತೆರಳುತ್ತಾರೆ. ಅರಣ್ಯ ಇಲಾಖೆ ಚೆಕ್ಪೋಸ್ಟ್ ತನಕ ಇದ್ದ ರಸ್ತೆಯನ್ನಾದರೂ ಸರಿಪಡಿಸಬೇಕು ಎಂಬುದು ಪ್ರವಾಸಿಗರ ಒತ್ತಾಯ.











# 4 ಕೋಟಿ ವೆಚ್ಚದ ಕಾಮಗಾರಿಗಳಿಗೆ ಶಾಸಕರಿಂದ ಶಂಕು ಸ್ಥಾಪನೆ

**ಜಗಳೂರು:** ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ 4 ಕೋಟಿ ವೆಚ್ಚದ ಸಿಸಿ ರಸ್ತೆ, ಚರಂಡಿ ನಿರ್ಮಾಣ ಕಾಮಗಾರಿಗಳಿಗೆ ಶಾಸಕ ಬಿ. ದೇವೇಂದ್ರಪ್ಪ ಶಂಕುಸ್ಥಾಪನೆ ನೆರವೇರಿಸಿದರು.

ತಾಲ್ಲೂಕಿನ ಹೊಸಕೆರೆ, ಮಲೆಮಾಚಿಕೆರೆ ಗ್ರಾಮಗಳಲ್ಲಿ ತಲಾ 20 ಲಕ್ಷ ವೆಚ್ಚದ ಸಿಸಿ ರಸ್ತೆ, ಸಿಸಿ ಚರಂಡಿ ನಿರ್ಮಾಣ, ಸೊಕ್ಕೆ ಗ್ರಾಮದ 32 ಕಡೆ ಮನರೇಗಾದಡಿ 1 ಕೋಟಿ 83.4 ಲಕ್ಷ ವೆಚ್ಚದ ಬೂದು ನೀರು ನಿರ್ವಹಣೆಗೆ ಸಿಸಿ ಚರಂಡಿ ನಿರ್ಮಾಣ, ಮಾಗಡಿ ಗ್ರಾಮದಲ್ಲಿ 50 ಲಕ್ಷ ವೆಚ್ಚದ ಸಿಸಿ ರಸ್ತೆ, ಬಸವನಕೋಟೆ ಗ್ರಾಮದಲ್ಲಿ ಮುಖ್ಯಮಂತ್ರಿ ವಿಶೇಷ ಅನುದಾನದಲ್ಲಿ 1 ಕೋಟಿ ವೆಚ್ಚದಲ್ಲಿ ಸಿಸಿ ರಸ್ತೆ, ಚರಂಡಿ ನಿರ್ಮಾಣ ಕಾಮಗಾರಿಗಳಿಗೆ ಚಾಲನೆ ನೀಡಿದರು.

ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದ, ಶಾಸಕ ಬಿ. ದೇವೇಂದ್ರಪ್ಪ ಮಾತನಾಡಿ, ಪ್ರತಿಯೊಂದು ಕಾಮಗಾರಿಗಳನ್ನು ಗುಣಮಟ್ಟದಲ್ಲಿ ನಿರ್ಮಾಣಗೊಳಿಸಲು ಗುತ್ತಿಗೆದಾರರು, ಅಧಿಕಾರಿಗಳು ಗಮನಹರಿಸಬೇಕು. ಕ್ಷೇತ್ರದ ಪ್ರತಿ ಗ್ರಾಮಗಳಲ್ಲಿ ಸಿಸಿ ರಸ್ತೆ, ಚರಂಡಿ, ಕುಡಿಯುವ ನೀರು ಸೇರಿದಂತೆ ಮೂಲಸೌಕರ್ಯಕ್ಕೆ ಆದ್ಯತೆ ನೀಡಲಾಗುವುದು. ಸಾರ್ವಜನಿಕರು ಅಭಿವೃದ್ಧಿ ಕಾಮಗಾರಿಗಳಿಗೆ ಕೈಜೋಡಿಸಬೇಕು ಎಂದು ಮನವಿ ಮಾಡಿದರು.

ಶಿಥಿಲಾವಸ್ಥೆಯಲ್ಲಿರುವ ಪಟ್ಟಣದ ಸರ್ಕಾರಿ ಸಾರ್ವಜನಿಕ ಆಸ್ಪತ್ರೆ ನೆಲಸಮಗೊಳಿಸಿ ಹೊಸಕಟ್ಟಡ ನಿರ್ಮಾಣಕ್ಕೆ ಅನುದಾನ, ಹಾಗೂ ಮರೇನಹಳ್ಳಿ ರಸ್ತೆಯಲ್ಲಿ 5 ಎಕರೆ ಸರ್ಕಾರಿ ಜಮೀನು ಗುರುತಿಸಲಾಗಿದ್ದು. ಕೆಎಸ್ ಆರ್ ಟಿಸಿ ಬಸ್ ಡಿಪೋ ಗೆ ಅನುದಾನಕ್ಕೆ ಮಾ.3 ರಿಂದ ನಡೆಯಲಿರುವ ಬಜೆಟ್ ಅಧಿವೇಶನದಲ್ಲಿ ಧ್ವನಿಯಾಗುವೆ. ಎಂದು ಭರವಸೆ ನೀಡಿದರು.



ಕೆರೆಗಳಿಗೆ ಶೀಘ್ರ ನೀರು: ಗುರುಸಿದ್ದಾಪುರ, ಮಾಗಡಿ ಕೆರೆಗಳಿಗೆ ಪೈಪ್ ಲೈನ್ ಕಾಮಗಾರಿಗೆ ಅಡ್ಡಿಯಾಗಿರುವ ಅರಣ್ಯ ಇಲಾಖೆ ಹಾಗೂ ಸರ್ಕಾರದ ಮಧ್ಯೆಯಿರುವ ಕಾನೂನು ತೊಡಕು ಸರಿಪಡಿಸಿ ಶೀಘ್ರದಲ್ಲಿ ಪೈಪ್ ಲೈನ್ ಕಾಮಗಾರಿ ಆರಂಭಿಸಿ ನೀರು ಹರಿಸಲು ಕ್ರಮಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಷಂಷೀರ್ ಅಹಮ್ಮದ್, ಕೆಪಿಸಿಸಿ ಎಸ್ಟಿ ಘಟಕದ ರಾಜ್ಯ ಪ್ರಧಾನ ಕಾರ್ಯದರ್ಶಿ ಎಂ.ಡಿ. ಕೀರ್ತಿಕುಮಾರ್, ಬಸವನಕೋಟೆ ಗ್ರಾ.ಪಂ. ಅಧ್ಯಕ್ಷೆ ಮರಿಯಮ್ಮ, ಸದಸ್ಯರಾದ ಬಸವರಾಜ್, ದೇವರಾಜ್, ಸೊಕ್ಕೆ ಗ್ರಾ.ಪಂ. ಸದಸ್ಯ ರಾಜಪ್ಪ,

ಮುಖಂಡರಾದ ಪಲ್ಲಾಗಟ್ಟೆ ಶೇಖರಪ್ಪ, ಬಿ. ಮಹೇಶ್ವರಪ್ಪ,

ಕೊಟ್ರೇಶ್, ಗೌಸ್ ಪೀರ್, ಹರೀಶ್ ಗೌಡ, ಗಿರೀಶ್, ರಮೇಶ್, ಮಾಗಡಿ ಮಂಜಣ್ಣ, ಶಂಭುಲಿಂಗಪ್ಪ, ಸಣ್ಣಸೂರಜ್ಜ, ಗಿಡ್ಡನಕಟ್ಟೆ ಕಾಂತರಾಜ್, ಮಂಜುನಾಥ್, ಓಬಳೇಶ್, ಕೊರಟಕೆರೆ ಶಿಲ್ಪ, ಸ್ನೇಹ ಪ್ರಕಾಶ್, ಜಿ.ಪಂ. ಎಇಇ ಶಿವಮೂರ್ತಿ, ಎಇ ವಿಜಯ್ ನಾಯ್ಕ ಇನ್ನಿತರರು ಉಪಸ್ಥಿತರಿದ್ದರು.

# ಕಬ್ಬಳ ಗ್ರಾಮದಲ್ಲಿ ಶ್ರೇಷ್ಠ ಸಮಾಜ ಸುಧಾರಕ, ಬಂಜಾರ ಸಮುದಾಯದ ಕುಲಗುರು ಸಂತ ಸೇವಾಲಾಲ್ ಮಹಾರಾಜರ ಜಯಂತಿ ಆಚರಿಸಲಾಯಿತು.

**ದಾವಣಗೆರೆ:** ಸಂತ ಸೇವಾಲಾಲ್ ಅವರ ಆದರ್ಶ ಬದುಕು ಎಲ್ಲರಿಗೂ ಮಾದರಿಯಾಗಿದ್ದು, ಶಿಕ್ಷಣದಿಂದ ಮಾತ್ರ ಸಮುದಾಯವನ್ನು ಉನ್ನತ ಸ್ಥಾನಕ್ಕೆ ಕೊಂಡೊಯ್ಯಬಹುದು ಎಂದು ಚಿತ್ರಮರ್ಗ ಬಂಜಾರ ಗುರುಪೀಠದ ಪೀಠಾಧ್ಯಕ್ಷರಾದ ಶ್ರೀ ಸರ್ದಾರ್ ಸೇವಾಲಾಲ್ ಸ್ವಾಮಿಗಳು ಅಭಿಪ್ರಾಯಪಟ್ಟರು.

ಚನ್ನಗಿರಿ ತಾಲ್ಲೂಕಿನ ಕಬ್ಬಳ ಗ್ರಾಮದಲ್ಲಿ ಇತ್ತೀಚಿಗೆ ನಡೆದ ಶ್ರೀ ಸೇವಾಲಾಲ್ ಯುವಕರ ಸಂಘದ ವತಿಯಿಂದ ಹಮ್ಮಿಕೊಂಡಿದ್ದ ಸಂತ ಸೇವಾಲಾಲ್ ಅವರ 286ನೇ ಜಯಂತಿ ಆಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಜಗತ್ತು ಇಂದು ಬಂಜಾರ ಸಮಾಜವನ್ನು ಕಲೆ, ಸಂಸ್ಕೃತಿ, ಸಾಹಿತ್ಯದ ಹಿನ್ನೆಲೆಯಲ್ಲಿ ಗುರುತಿಸಲು ಸೇವಾಲಾಲ್ ಅವರ ಬದುಕಿದ ರೀತಿ ಕಾರಣ. ಶಾಂತಿ, ಅಹಿಂಸೆಯ ತತ್ವ ಸಾರಿದ ಸೇವಾಲಾಲ್ ಯಾರಿಗೂ ಕೇಡನ್ನು ಬಯಸಬೇಡಿ ಎಂದು ಸಾರಿದರು ಎಂದರು.

ಸಮಾಜ ಸುಧಾರಣೆಯ ಬೋಧನೆಯ ಜೊತೆಗೆ ಸಮುದಾಯದ ಸಂಘಟನೆಗೂ ಸೇವಾಲಾಲ್ ಆದ್ಯತೆ ನೀಡಿದರು. ಶಿಕ್ಷಣದಿಂದ ಮಾತ್ರ ಸಮುದಾಯವನ್ನು ಉನ್ನತ ಸ್ಥಾನಕ್ಕೆ ಕೊಂಡೊಯ್ಯಬಹುದು ಎಂದು ಹಲವು ವರ್ಷಗಳ ಹಿಂದೆಯೇ ಹೇಳಿದ್ದರು, ಅವರ ದೂರದೃಷ್ಟಿ ಮೆಚ್ಚುವಂತಹದ್ದು ಎಂದು ಹೇಳಿದರು.

ಸರ್ಕಾರಿ ನೌಕರರ ಸಂಘ ಸಹಕಾರ್ಯದರ್ಶಿಯಾದ ಸುಧೀರ್ ಎ



ಮಾತನಾಡಿ, ಭರತ ಖಂಡದ ಧಾರ್ಮಿಕ ರಾಯಭಾರಿ ಎಂದೇ ಹೆಸರಾದ ಸೇವಾಲಾಲ್ ಮಹಾರಾಜರು ಅನೇಕ ಪವಾಡಗಳ ಮೂಲಕ ಜನಮನ ಗೆದ್ದವರು. ತಮ್ಮ ಲೀಲೆಗಳನ್ನು ಪ್ರದರ್ಶನ ಮಾಡುತ್ತಾ ಜೀವನದುದ್ದಕ್ಕೂ ಬ್ರಹ್ಮಚರ್ಯ ಪಾಲನೆ ಮಾಡಿದವರು. ಇಂದಿಗೂ ಕೂಡ ಜನಮಾನಸದಲ್ಲಿ ಗುರುವಿನ ಸ್ಥಾನ ಪಡೆದಿದ್ದಾರೆ. ?ಸತ್ಯ, ಅಹಿಂಸೆ, ಕಳ್ಳತನ ಬೇಡ, ವ್ಯಸನಕ್ಕೆ ದಾಸರಾಗಬೇಡಿ, ಕೆಟ್ಟದ್ದನ್ನು ಮಾಡಬೇಡಿ? ಎಂಬ ಐದು ವ್ಯಾಖ್ಯೆಗಳು ಅವರ ಪ್ರಮುಖ ತತ್ವಗಳಾಗಿದ್ದವು? ಎಂದರು.

ಗ್ರಾಮ ಪಂಚಾಯತಿ ಅಧ್ಯಕ್ಷೆ ಸುಷ್ಮಾ ವಿ ಮಾತನಾಡಿ, ಯುವಕರು ಗ್ರಾಮದಲ್ಲಿ ಸೇವಾಲಾಲ್ ಜಯಂತಿಯನ್ನು ವಿಜೃಂಭಣೆಯಿಂದ ಆಚರಿಸುತ್ತಿರುವುದು ಹೆಮ್ಮೆಯ ವಿಚಾರ, ನಮ್ಮ ಒಗ್ಗಟ್ಟು ಇನ್ನಷ್ಟು ಗಟ್ಟಿಯಾಗಬೇಕಿದೆ ಜೊತೆಗೆ ನಮ್ಮ ಸಮಾಜಕ್ಕೆ ಸೇವಾಲಾಲ್ ಒಬ್ಬರೇ ಜಗದ್ಗುರು. ಅವರ ಆದರ್ಶಗಳನ್ನು ಯುವಕರು ಜೀವನದಲ್ಲಿ ಅಳವಡಿಸಿಕೊಳ್ಳಬೇಕು? ಎಂದು ಕಿವಿಮಾತು ಹೇಳಿದರು.

ವಿಶೇಷ ಆಹ್ವಾನಿತರಾದ ಸರಿಗಮಪ ಖ್ಯಾತಿಯ ರಮೇಶ್ ಲಮಾಣಿ ರವರು ತಮ್ಮ ಹಾಡಿನ ಮೂಲಕ ಅಭಿಮಾನಿಗಳಿಗೆ ಮನರಂಜಿಸಿದರು.

ಈ ವೇಳೆ ಕರ್ನಾಟಕ ಗ್ರಾಮೀಣ ಬ್ಯಾಂಕ್ ನ ಮುಖ್ಯ ವ್ಯವಸ್ಥಾಪಕರಾದ ಶ್ರೀಧರ್ ನಿಜಗುಳಿ, ರಮೇಶ್ ಹಳ್ಳಿ ಮಲ್ಲಾಪುರ, ಸಹಕಾರ ಸಂಘದ ಉಪಾಧ್ಯಕ್ಷ ರವಿಪ್ರಕಾಶ್, ಹಟ್ಟಿ ನಾಯಕರಾದ ಮಲ್ಲಿಕಾರ್ಜುನ್ ನಾಯ್ಕ್, ಕಾಮನಾಯ್ಕ (ಡಾವ್), ದಾಗಿಸ್ವಾಮಿನಾಯ್ಕ (ಕಾರ್ಭಾರಿ), ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಪಂಡರಿನಾಥ, ಶ್ರೀ ಸೇವಾಲಾಲ್ ಯುವಕರ ಸಂಘದ ಗೌರವ ಅಧ್ಯಕ್ಷ ಹರೀಶ್ ಕೆ.ಬಿ, ಅಧ್ಯಕ್ಷ ಸಂತೋಷ್ ನಾಯ್ಕ, ಪ್ರಧಾನ ಕಾರ್ಯದರ್ಶಿ ಅಭಿಲಾಷ ಎಂ, ಉಪಾಧ್ಯಕ್ಷ ಲೋಹಿತ್ ಕುಮಾರ್, ಸಂಘದ ಖಜಾಂಚಿ ರುದ್ರೇಶ್, ಕಾರ್ಯದರ್ಶಿ ಸತೀಶ್, ನಿರ್ದೇಶಕರಾದ ತೇಜೇಶ್, ರಾಕೇಶ್, ಕಿರಣ್ ಹಾಗೂ ಸೇವಾಲಾಲ್ ಮಾಲಾಧಾರಿಗಳು ಸೇರಿದಂತೆ ಗ್ರಾಮಸ್ಥರು ಉಪಸ್ಥಿತರಿದ್ದರು.

# ಕರ್ನಾಟಕದ ಎಲ್ಲಾ ತಾಲೂಕುಗಳಲ್ಲೂ ಪ್ರವಾಸ ಕೈಗೊಂಡು ಸ್ವಾಭಿಮಾನದ ಕ್ರಾಂತಿ: ಜಿ. ಬಿ. ವಿನಯ್ ಕುಮಾರ್ ಘೋಷಣೆ

**ದಾವಣಗೆರೆ:** ಕರ್ನಾಟಕ ರಾಜ್ಯದ ಎಲ್ಲಾ ತಾಲೂಕುಗಳಿಗೂ ಭೇಟಿ ನೀಡಿ, ಸ್ವಾಭಿಮಾನಿ ಕ್ರಾಂತಿ ಮೊಳಗಿಸಲಾಗುತ್ತದೆ. ಕೃಷಿ, ಶಿಕ್ಷಣ, ಆರೋಗ್ಯ ಮತ್ತು ಸಾಮಾಜಿಕ ವಿಚಾರ ಜನರ ಮುಂದಿಡಲಾಗುವುದು. ಕನಿಷ್ಠ ಮೂರು ಬಾರಿಯಾದರೂ ತಾಲೂಕುಗಳಿಗೆ ಭೇಟಿ ನೀಡಬೇಕೆಂಬ ಬಯಕೆ ಇದೆ. 2026ರ ಡಿಸೆಂಬರ್ ಒಳಗೆ ಈ ಅಭಿಯಾನ ಪೂರ್ಣಗೊಳಿಸುವ ಗುರಿ ಇದೆ ಎಂದು ಸ್ವಾಭಿಮಾನಿ ಬಳಗದ ರಾಜ್ಯಾಧ್ಯಕ್ಷ ಜಿ. ಬಿ. ವಿನಯ್ ಕುಮಾರ್ ಅವರು ಘೋಷಿಸಿದರು.

ನಗರದ ಎಸ್. ಎಸ್. ಬಡಾವಣೆಯ ಎ ಬ್ಲಾಕ್ 10 ನೇ ಕ್ರಾಸ್ ನಲ್ಲಿರುವ ಸ್ವಾಭಿಮಾನಿ ಬಳಗದ ಗೃಹ ಕಚೇರಿಯಲ್ಲಿ ಆಯೋಜಿಸಿದ್ದ "ಸಂವಿಧಾನವೇ ನಮ್ಮ ಸಿದ್ಧಾಂತ" ಸಂಘಟನಾ ಸಭೆ ಹಾಗೂ ರಾಜ್ಯ ಸಮಿತಿ, ಜಿಲ್ಲಾ ಸಮಿತಿ, ತಾಲೂಕು ಸಮಿತಿಗಳ ರಚನೆ ಹಾಗೂ ಮೈಸೂರಿನಲ್ಲಿ ನಡೆಯುವ 2 ದಿನಗಳ ನಾಯಕತ್ವ – ವ್ಯಕ್ತಿತ್ವ ವಿಕಸನ ಶಿಬಿರ ಹಾಗೂ ಸಂಘಟನೆ ಬಗ್ಗೆ ಮುಕ್ತ ಚರ್ಚೆ ನಡೆಸುವ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ದಿಕ್ಸೂಚಿ ಭಾಷಣ ಮಾಡಿದ ಅವರು, ರಾಜ್ಯದಲ್ಲಿ ಸ್ವಾಭಿಮಾನಿ ಬಳಗ ಕ್ರಾಂತಿ ಎಬ್ಬಿಸಲಿದೆ. ಹೆಚ್ಚಿನ ವಿರೋಧಗಳು, ಟೀಕೆಗಳು, ಬಲಾಢ್ಯ ನಾಯಕರ ಪ್ರತಿರೋಧ ಬರಬಹುದು. ಇದಕ್ಕೆ ಹೆದರುವ ಪ್ರಶ್ನೆಯೇ ಇಲ್ಲ ಎಂದು ತಿಳಿಸಿದರು.

ಕೇವಲ ಎಂಟು ತಿಂಗಳಲ್ಲಿ ದಾವಣಗೆರೆ ಜಿಲ್ಲೆಯಾದ್ಯಂತ ಪಾದಯಾತ್ರೆ ನಡೆಸಿ ಸಾವಿರಕ್ಕೂ ಹೆಚ್ಚು ಹಳ್ಳಿಗಳಿಗೆ ಭೇಟಿ ನೀಡಿ ಜನರ ಸಂಕಷ್ಟ ಆಲಿಸಿದ್ದೆ. ದಾವಣಗೆರೆಯಂತೆ ಪ್ರತಿ ತಾಲೂಕಿನಲ್ಲಿಯೂ ಕನಿಷ್ಠ 50 ಸಾವಿರ ಸಾವಿರ ಸ್ವಾಭಿಮಾನಿಗಳು ಇರಬೇಕು. ಈ ನಿಟ್ಟಿನಲ್ಲಿ ವಿಶೇಷ ಕಾರ್ಯಕ್ರಮ ಆಯೋಜಿಸಲಾಗುವುದು. 15ರಿಂದ 20 ದಿನಗಳ ಕಾಲ ಕಲ್ಯಾಣ ಕರ್ನಾಟಕದಲ್ಲಿ ಉಳಿದು ಪ್ರತಿ ತಾಲೂಕಿಗೂ ಹೋಗುತ್ತೇನೆ. ಶೈಕ್ಷಣಿಕ, ಸಾಮಾಜಿಕ, ಆರ್ಥಿಕ, ರಾಜಕೀಯ ಪ್ರಜ್ಞೆ ಮೂಡಿಸುವ ಪ್ರಯತ್ನ ನಡೆಸುತ್ತೇವೆ ಎಂದು ಹೇಳಿದರು.

ನಮ್ಮ ಹೋರಾಟ ಕ್ರೆಡಿಟ್ ಪಡೆಯಲು ಅಲ್ಲ. ನಿಧಾನವಾದರೂ ಮುಂದೊಂದು ದಿನ ದೊಡ್ಡ ಜವಾಬ್ದಾರಿ ಸಿಗುತ್ತದೆ ಎಂಬ ದೃಢವಾದ ನಂಬಿಕೆ ಇದೆ. ದಾವಣಗೆರೆಯಲ್ಲಿ ಇದುವರೆಗೆ ಮಾಡಿದ ಕೆಲಸ ಬೇರೆ ಕಡೆ ಮಾಡಿದ್ದರೆ ನಾನು ಗೆದ್ದೇ ಗೆಲ್ಲುತ್ತಿದ್ದೆ. ದಾವಣಗೆರೆ ನನ್ನ ಹುಟ್ಟೂರು.



ಎಲ್ಲರಲ್ಲೂ ಅರಿವು ಮೂಡಬೇಕು. ಪ್ರಶ್ನಿಸುವ ಧೈರ್ಯ ಬರಬೇಕೆಂಬ ಕಾರಣಕ್ಕೆ ಆಯ್ದುಕೊಂಡೆ. ಜನರು ಪ್ರೀತಿ ತೋರಿದ್ದಾರೆ. ಕಳೆದ ಲೋಕಸಭೆ ಚುನಾವಣೆಯಲ್ಲಿ ಒಂದು ರೂಪಾಯಿ ಹಂಚದೇ ಇದ್ದರೂ 43 ಸಾವಿರಕ್ಕೂ ಹೆಚ್ಚು ಮತಗಳನ್ನು ನೀಡಿದ್ದಾರೆ. ಇದು ಜನರು ನೀಡಿರುವ ಪ್ರೀತಿ ಅಲ್ಲವೇ ಎಂದು ಪ್ರಶ್ನಿಸಿದರು.

ಹರಿಹರ ತಾಲೂಕಿನಲ್ಲಿನ ರಸ್ತೆ, ಭೈರನ ಪಾದ ನೀರಾವರಿ ಯೋಜನೆ ಜಾರಿ, ಕೆರೆಗಳಿಗೆ ನೀರು ಸಿಗಬೇಕೆಂಬ ಜನರ ಬೇಡಿಕೆ ಈಡೇರಿಸುವಂತೆ ಒತ್ತಾಯಿಸಿ ಮನವಿ ಸಲ್ಲಿಸಲು ಹರಿಹರಕ್ಕೆ ಹೋದರೆ ಇಲ್ಲಿಗೆ ಬರಲು ಅನುಮತಿ ನೀಡಿದ್ಯಾರು ಎಂಬ ಬೆದರಿಕೆ ಹಾಕುವ ಮಟ್ಟಕ್ಕೆ ಬಂದಿರುವುದು ವಿಪರ್ಯಾಸ. ನಾನು ಮದುವೆಯಾಗಿರುವುದು ಹರಿಹರದವರನ್ನು. ಈ ತಾಲೂಕಿನ ಅಳಿಯ ನಾನು. ನಮ್ಮಲ್ಲಿ ನಿಸ್ವಾರ್ಥ ಸೇವೆ ಮಾಡಬೇಕೆಂಬ ಹಂಬಲ ಇದ್ದಾಗ ಸ್ವಾರ್ಥ ನಶಿಸಿ ಹೋಗುತ್ತದೆ. ಯಾರೊಟ್ಟಿಗೂ ರಾಜಿ ಆಗುವ ಪ್ರಶ್ನೆಯೇ ಇಲ್ಲ. ಇದರಿಂದ ಮತ್ತಷ್ಟು ಗಟ್ಟಿಯಾಗುತ್ತಲೇ ಹೋಗುತ್ತೇವೆ. ಕಲ್ಲು ಬಿಸಾಡಿಸಿದರೆ ಸಂಗ್ರಹಿಸಿ ಮನೆ ಕಟ್ಟಬೇಕು ಎನ್ನುವ ಕನಸು ಕಂಡವರು ನಾವು. ಜನಸೇವೆ ಮಾಡದವರ ವಿರೋಧ ಮಾಡುತ್ತಾರೆ ಎಂದರೆ ಅಧಿಕಾರಸ್ಥರು ಮತ್ತು ಜಡ್ಡುಗಟ್ಟಿದ ವ್ಯವಸ್ಥೆಗೆ ಭಯ ಬಂದಿದೆ ಎಂದೇ ಅರ್ಥ. ನಮ್ಮ ಶಕ್ತಿಯೂ ಅವರಿಗೆ ಅರಿವಾಗಿದೆ ಎಂದು ತಿಳಿಸಿದ ಅವರು, ದಾವಣಗೆರೆಯಲ್ಲಿ ನಾಲ್ಕು ದಶಕಗಳ ಹಿಂದೆ ಪಾರುಪತ್ಯ ಸಾಧಿಸಿದ್ದವರು ಇಂದು ಗುಲಾಮರಂತಾಗಿರುವುದು ಬೇಸರದ ಸಂಗತಿ ಎಂದು ಹೇಳಿದರು.

ಭಯಮುಕ್ತ ವಾತಾವರಣ ನಿರ್ಮಾಣ ಆದಾಗ ಮಾತ್ರ ನಿಜವಾದ ಸ್ವಾತಂತ್ರ್ಯ ಸಿಕ್ಕಂತೆ. ದಾಸ್ಯ, ಗುಲಾಮಗಿರಿಯತ್ತ ಸಾಗಿದರೆ ಶಕ್ತಿ ಕುಂಠಿತವಾಗುತ್ತದೆ. ರಾಜಕಾರಣಕ್ಕೆ ಹೆದರಿ, ಸಣ್ಣಪುಟ್ಟ ಹುದ್ದೆ ಹೋಗುತ್ತವೆ ಎಂಬ ಕಾರಣಕ್ಕೆ ದಾಸರಾಗಿ ಕೆಲವರು ಬದುಕುತ್ತಿದ್ದಾರೆ. ಅವರಿನ್ನೂ ಭಯದಿಂದ ಹೊರಗೆ ಬಂದಿಲ್ಲ. ಭಯದಿಂದ ಜನರನ್ನು ಹೊರ ತರಲು ಸಾಧ್ಯವಿರುವುದು ಶಿಕ್ಷಣದಿಂದ ಮಾತ್ರ. ಇಂದಿನ ಶೇಕಡಾ 90ರಷ್ಟು ಮಕ್ಕಳಿಗೆ ನ್ಯಾಯಯುತ ಮತ್ತು ಭಯಮುಕ್ತ ವಿದ್ಯಾಭ್ಯಾಸ ಸಿಗುತ್ತಿಲ್ಲ ಎಂದೆನಿಸುತ್ತಿದೆ. ನಮ್ಮ ನಡೆ ಸರ್ಕಾರಿ ಶಾಲೆಗಳ ಕಡೆಗೆ ಅಭಿಯಾನ ನಡೆಸಿದಾಗ ಇದು ಮನವರಿಕೆಯಾಗಿದೆ. ಸರ್ಕಾರಿ ಶಾಲೆಗಳಲ್ಲಿ ಕನಿಷ್ಠ ಮೂಲಭೂತ ಸೌಲಭ್ಯಗಳೂ ಇಲ್ಲ, ಗ್ರಂಥಾಲಯ ಇದ್ದರೂ ಕಾರ್ಯಾಚರಿಸುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಸ್ವಾಭಿಮಾನ ಇದ್ದವರು ಬೇರೆಯವರ ಬಳಿ ಹೋಗಿ ಬೇಡುವುದಿಲ್ಲ. ನಾನು ಚುನಾವಣೆಗೆ ಸ್ಪರ್ಧಿಸಿದ್ದಕ್ಕೆ ನಾಯಕರು ತಪ್ಪು ಎಂದರೆ, ಜನರು ಸರಿ ಎಂದರು. ಸಿದ್ದರಾಮಯ್ಯ, ಸಚಿವರ ಬಳಿ ಗುರುತಿಸಿಕೊಳ್ಳುವುದು, ಹಿಂದೆ ಮುಂದೆ ಓಡಾಡೋದು, ಮನೆಯೊಳಗೆ ಭಯವಿಲ್ಲದೇ ಓಡಾಡಿದರೆ ಅದೇ ದೊಡ್ಡ ಸಾಧನೆ ಎಂದು ಕೆಲವರು ಭಾವಿಸಿದ್ದಾರೆ.

**ನಾಲ್ಕು ಕ್ಷೇತ್ರಗಳಲ್ಲಿಯೂ ಒತ್ತಡ**

ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧೆ ಮಾಡುವಂತೆ ನಾಲ್ಕು ಕ್ಷೇತ್ರಗಳಿಂದಲೂ ಒತ್ತಡ ಇದೆ. ಮುಂದಿನ ದಿನಗಳಲ್ಲಿ ನಿರ್ಧಾರ ತೆಗೆದುಕೊಳ್ಳಲಾಗುತ್ತದೆ. ಹೊನ್ನಾಳಿ, ಹರಿಹರ, ದಾವಣಗೆರೆ ಉತ್ತರ ಹಾಗೂ ಹರಪನಹಳ್ಳಿ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧೆ ಮಾಡಲು ಜನರು ಕೇಳಿಕೊಳ್ಳುತ್ತಿದ್ದಾರೆ. ಕ್ಷೇತ್ರದ ಬಗ್ಗೆ ಯಾವುದೇ ನಿರ್ಧಾರ ಈವರೆಗೂ ತೆಗೆದುಕೊಂಡಿಲ್ಲ ಎಂದು ಜಿ. ಬಿ. ವಿನಯ್ ಕುಮಾರ್ ಸ್ಪಷ್ಟನೆ ನೀಡಿದರು.

20 ವರ್ಷ ಹಿಂಬಾಲಕರಾಗಿ ಓಡಾಡಿ ಸಣ್ಣಪುಟ್ಟ ಹುದ್ದೆ ಪಡೆದು ತೃಪ್ತಿಪಟ್ಟುಕೊಳ್ಳುತ್ತಾರೆ. ಸ್ವಾಭಿಮಾನಿಗಳ ಬೆಂಬಲಿಸಿದರೆ ಇದಕ್ಕೆ ಕುತ್ತು ಬರುತ್ತೆ ಎಂಬ ಭಯ ಅವರಲ್ಲಿ ಇದೆ. ನಾನು ಸ್ವಾರ್ಥಿ ಆಗಿದ್ದರೆ ಸಿದ್ದರಾಮಯ್ಯರ ಕಾರಿನಲ್ಲೂ ಪ್ರಯಾಣಿಸಬಹುದಿತ್ತು. ಸಾಮಾನ್ಯನಾಗಿ ಐಎಎಸ್ ಇನ್ ಸ್ಟೈಟ್ಸ್ ಸಂಸ್ಥೆ ಹುಟ್ಟು ಹಾಕಿದ್ದೇನೆ. ಕಷ್ಟಪಟ್ಟು ಕಟ್ಟಿದ್ದೇನೆ. ಯಾವ ಪಕ್ಷದವರೊಂದಿಗೆ ವ್ಯವಹಾರ ಹೊಂದಿಲ್ಲ. ರಾಜಕಾರಣಿಗಳ ಬಳಿ ಏನನ್ನೂ ಕೇಳಿಕೊಂಡಿಲ್ಲ. ಸ್ವಾಭಿಮಾನ ಉಳಿಸಿಕೊಂಡು ಬಂದಿದ್ದೇನೆ. ನಿಧಾನ ಆದರೂ ಪರವಾಗಿಲ್ಲ, ರಾಜಕಾರಣದಲ್ಲಿ ಮುಂದೆ ಉಜ್ವಲ ಭವಿಷ್ಯ ಸಿಗುತ್ತದೆ ಎಂಬ ವಿಶ್ವಾಸ ಇದೆ ಎಂದು ತಿಳಿಸಿದರು.

ಮರಾಠಿಗರು ಕಲ್ಲು ಹೊಡೆದಾಗ ಕನ್ನಡ ಜಾಗೃತವಾಗುತ್ತದೆ. ಆಗ ಭಾವಾನಾತ್ಮಕವಾಗಿ ಹೋರಾಟಕ್ಕೆ ಬಳಸಿಕೊಳ್ಳಲಾಗುತ್ತದೆ. ಆದ್ರೆ, ಕನ್ನಡ ಉಳಿಯಬೇಕು, ಬೆಳೆಯಬೇಕು ಎಂದರೆ ಸರ್ಕಾರಿ ಶಾಲೆಗಳು ಉಳಿಯುವ ಜೊತೆಗೆ ಬೆಳೆಯಬೇಕು ಎಂದು ಅಭಿಪ್ರಾಯಪಟ್ಟರು.

ಸಭೆಯಲ್ಲಿ ಬಳಗದ ಪ್ರಮುಖರಾದ ರಾಜು ಮೌರ್ಯ, ವಿರೂಪಾಕ್ಷಪ್ಪ ಪಂಡಿತ್, ಗೀತಾ ಮುರುಗೇಶ್, ಕೇಶವಮೂರ್ತಿ, ಗಂಗಾಧರ್, ಪುರಂದರ ಲೋಕಿಕೆರೆ, ಶಿವಕುಮಾರ್ ಡಿ. ಶೆಟ್ಟರ್, ಮೊಹಮ್ಮದ್ ಸಾಧಿಕ್, ಎಂ. ಪ್ರವೀಣ್ ಕುಮಾರ್, ಎಂ. ರಾಮಕೃಷ್ಣ, ಸುದೀಪ್ ಮತ್ತಿತರರು ಪಾಲ್ಗೊಂಡಿದ್ದರು. ರಾಜ್ಯದ ಬೇರೆ ಬೆ?ರೆ ಜಿಲ್ಲೆಗಳಿಂದಲೂ ಸ್ವಾಭಿಮಾನಿ ಬಳಗದ ಕಾರ್ಯವೈಖರಿ ಮೆಚ್ಚಿ ಆಗಮಿಸಿದ್ದು ವಿಶೇಷವಾಗಿತ್ತು.

## ಕರವೇ ಸ್ವಾಭಿಮಾನಿ ಬಣದಿಂದ ಅಶೋಕ ವೃತ್ತದಲ್ಲಿ ಕೆಎಸ್ಆರ್ಟಿಸಿ ನಿರ್ವಾಹಕನ ಮೇಲೆ ಹಲ್ಲೆ ಖಂಡಿಸಿ ಬೃಹತ್ ಪ್ರತಿಭಟನೆ




**ಶಿವಮೊಗ್ಗ :** ಮರಾಠಿಯಲ್ಲಿ ಮಾತನಾಡಲಿಲ್ಲ ಎಂಬ ಕಾರಣಕ್ಕೆ ಕೆಎಸ್ಆರ್ಟಿಸಿ ಬಸ್ ನಿರ್ವಾಹನ ಮೇಲೆ ಹಲ್ಲೆ ನಡೆಸಿದ ಮರಾಠಿ ಪುಂಡರ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಕರ್ನಾಟಕ ರಕ್ಷಣಾ ವೇದಿಕೆ ಸ್ವಾಭಿಮಾನಿ ಬಣದಿಂದ ನಗರದ ಅಶೋಕ ವೃತ್ತದಲ್ಲಿ ಶನಿವಾರ ಬೃಹತ್ ಪ್ರತಿಭಟನೆ ನಡೆಸಲಾಯಿತು. ಕಂಡಕ್ಟರ್ ಮೇಲೆ ವಿನಾಕಾರಣ ಹಲ್ಲೆ ನಡೆಸುವ ಜೊತೆಗೆ ಪೋಕ್ಸೋ ಪ್ರಕರಣ ದಾಖಲು ಮಾಡಿ ಗಲಾಟೆ ಪ್ರಕರಣವನ್ನು ದಿಕ್ಕು ತಪ್ಪಿಸುವ ಕೆಲಸ ಮಾಡುತ್ತಿದ್ದಾರೆ ಎಂದು ಪ್ರತಿಭಟನಾಕಾರರು ಆಗ್ರಹಿಸಿದರು ಹಾಗೂ ದಾಳಿ ನಡೆಸಿದವರ ಪ್ರತಿ ಕೃತಿಯನ್ನು ದಹಿಸಿ ಆಕ್ರೋಶವನ್ನು ವ್ಯಕ್ತಪಡಿಸಿದ್ದಾರೆ ಅಲ್ಲೇ ನಡೆಸಿದವರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಂಡು ಅವರನ್ನು ರಾಜ್ಯದಿಂದ ಗಡಿಪಾರು ಮಾಡಬೇಕು ಎಂದು ಆಗ್ರಹಿಸಿದರು ರಾಜ್ಯ ಸರ್ಕಾರ ಈ ಪುಂಡರ ಮೇಲೆ ಕ್ರಮ ಕೈಗೊಳ್ಳದಿದ್ದರೆ ಜಿಲ್ಲೆಯಲ್ಲಿ ಮಹಾರಾಷ್ಟ್ರದ ಬಸ್ಸಿನ ಮೇಲೆ ಕನ್ನಡದ ಬಾವುಟವನ್ನು

ಕಟ್ಟಿ ಚಾಲಕ ಮತ್ತು ನಿರ್ವಾಹಕರಿಗೆ ಮಸಿ ಬಳಿಯುತ್ತೇವೆ ಎಂದು ಎಚ್ಚರಿಕೆ ನೀಡಿದರು ಈ ಸಂದರ್ಭದಲ್ಲಿ ಕರವೇ ಸ್ವಾಭಿಮಾನಿ ಬಣದ ಜಿಲ್ಲಾಧ್ಯಕ್ಷ ಕಿರಣ್ ಕುಮಾರ್ ಎಚ್ಎಸ್ ಜಿಲ್ಲಾ ಉಪಾಧ್ಯಕ್ಷ ವಿಜಯಕುಮಾರ್ ಜಿಲ್ಲಾ ಖಜಾಂಚಿ ಗಣೇಶ್ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಹಮ್ಮದ್ ಶಫಿ ಜಿಲ್ಲಾ ಕಾರ್ಯದರ್ಶಿ ರಾಮು ಪತ್ರಿಕಾ ಪ್ರಚಾರ ಸಮಿತಿ ಅಧ್ಯಕ್ಷ ಮಾಲತೇಶ್. ಕನ್ನಡ ಅಭಿಮಾನಿ ಮುಜೀಬ್ ಸತೀಶ್. ಪರಮೇಶ್. ಟಾಟಾ ಏಸ್ ರಾಮಣ್ಣ.ಪುಟ್ಟ .ಸಾಧಿಕ್ ಮಹಿಳಾ ಘಟಕದ ರೇಷ್ಮಾ ಹಾಗೂ ಕಾರ್ಯಕರ್ತರು ಪದಾಧಿಕಾರಿಗಳು ಭಾಗವಹಿಸಿದ್ದರು

# ಪ್ರತಿಬಂಧಕಾಜ್ಞೆ ಜಾರಿ

**ಗದಗ :** ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿಯು 2025 ರ ಮಾರ್ಚ ತಿಂಗಳಲ್ಲಿ ದ್ವಿತೀಯ ಪಿ.ಯು.ಸಿ. ವಾರ್ಷಿಕ ಪರೀಕ್ಷೆಯನ್ನು ಮಾರ್ಚ 1 ರಿಂದ 20 ರವರೆಗೆ ಬೆ 10 ಗಂಟೆಯಿಂದ ಮಧ್ಯಾಹ್ನ 1 ಗಂಟೆಯವರೆಗೆ ನಡೆಸಲಿದೆ. ಪರೀಕ್ಷಾ ಸಮಯದಲ್ಲಿ ನಕಲು ಮಾಡುವುದು, ಪರೀಕ್ಷಾರ್ಥಿಗಳ ಬದಲು ಬೇರೆಯವರು ಪರೀಕ್ಷೆಗೆ ಹಾಜರಾಗುವುದು ಮುಂತಾದ ಅವ್ಯವಹಾರ ತಡೆಗಟ್ಟಲು ಮತ್ತು ಪರೀಕ್ಷಾ ಕೇಂದ್ರಗಳಲ್ಲಿ ಶಿಸ್ತು ಮತ್ತು ಶಾಂತಿ ಸುವ್ಯವಸ್ಥೆ ಕಾಪಾಡುವ ಹಿತದೃಷ್ಟಿಯಿಂದ ಸದರ ಪರೀಕ್ಷಾ ಕೇಂದ್ರದ ಸುತ್ತಲೂ 200 ಮೀಟರ್ ಪ್ರದೇಶವನ್ನು ನಿಷೇಧಿತ ಪ್ರದೇಶವನ್ನಾಗಿ ಘೋಷಿಸಲಾಗಿದೆ. ಜಿಲ್ಲೆಯ 23 ಪರೀಕ್ಷಾ ಕೇಂದ್ರಗಳ ಸುತ್ತಲೂ 200 ಮೀಟರ್ ಪರಿಮಿತಿಯೊಳಗೆ ಮಾರ್ಚ 1 ರಿಂದ 20 ರವರೆಗೆ ಬೆಳಿಗ್ಗೆ 8 ರಿಂದ ಮಧ್ಯಾಹ್ನ 3 ಗಂಟೆಯವರೆಗೆ ಪ್ರತಿಬಂಧಕಾಜ್ಞೆ ಜಾರಿಗೊಳಿಸಲಾಗಿದೆ.

ಪರೀಕ್ಷಾರ್ಥಿಗಳು ಹಾಗೂ ಪರೀಕ್ಷೆಯಲ್ಲಿ ಕರ?ಯನಿರ್ವಹಿಸುವ ಅಧಿಕಾರಿಗಳು ಮತ್ತು ಸಿಬ್ಬಂದಿಗಳನ್ನು ಹೊರತುಪಡಿಸಿ ಇತರ ಯಾವುದೇ ವ್ಯಕ್ತಿ ಅಥವಾ ಐದು ಐದಕ್ಕಿಂತ ಹೆಚ್ಚುಜನರು ಗುಂಪು ಕೂಡುವುದು, ಅಥವಾ ವ್ಯಕ್ತಿಗಳ ಗುಂಪುಗಳ ಪ್ರವೇಶವನ್ನು ನಿರ್ಬಂಧಿಸಲಾಗಿದೆ. ಈ ಪ್ರದೇಶ ವ್ಯಾಪ್ತಿಯಲ್ಲಿ ಬರುವ ಝೆರಾಕ್ಸ್ ಅಂಗಡಿ, ಸೈಬರ್ ಸೆಂಟರ್ , ಬುಕ್ ಸ್ಟಾಲ್, ಫೋಟೋ ಕಾಪಿಯರ್‌ಗಳನ್ನು ಬಂದ್ ಮಾಡಲು ಆದೇಶಿಸಿದೆ. ಈ ಪ್ರದೇಶ ವ್ಯಾಪ್ತಿಯಲ್ಲಿ ಪರೀಕ್ಷೆಗಳು ನಡೆಯುವ ಸಮಯದಲ್ಲಿ ಧ್ವನಿವರ್ಧಕಗಳ ಬಳಕೆಯನ್ನು ನಿರ್ಬಂಧಿಸಿದೆ. ಪರೀಕ್ಷಾ ದಿನಗಳಂದು ಪರೀಕ್ಷಾ ಕೇಂದ್ರಗಳಿಗೆ ವಿದ್ಯಾರ್ಥಿಗಳು ಆಗಮಿಸುವ ಸಮಯ ಮತ್ತು ಹೊರ ಹೋಗುವ ಸಮಯದಲ್ಲಿ ಮಾತ್ರ ಚಿತ್ರೀಕರಿಸಲು

ಮಾಧ್ಯಮದವರಿಗೆ ಅವಕಾಶವಿದ್ದು, ಪರೀಕ್ಷಾ ಗೌಪ್ಯತೆ ದೃಷ್ಟಿಯಿಂದ ಪರೀಕ್ಷಾ ಕೊಠಡಿಗಳಲ್ಲಿ ಪ್ರವೇಶ, ಚಿತ್ರೀಕರಣ ಇತ್ಯಾದಿಗಳನ್ನು ಸಂಪೂರ್ಣವಾಗಿ ನಿಷೇಧಿಸಿದೆ. ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರು ಕ್ಯಾಮರಾ ಹೊಂದಿರದ ಸಾಮಾನ್ಯ ಮೊಬೈಲ್ ಇರಿಸಿಕೊಳ್ಳಲು ಅವಕಾಶವಿದ್ದು ಉಳಿದ ಎಲ್ಲ ಪರೀಕ್ಷಾ ಸಿಬ್ಬಂದಿ / ವಿದ್ಯಾರ್ಥಿಗಳು ಮೊಬೈಲ್ ಫೋನ್ ಮತ್ತು ಇತರೇ ಸಂಪರ್ಕ ಸಲಕರಣಗಳನ್ನು ತರುವುದುನ್ನು / ಉಪಯೋಗಿಸುವುದನ್ನು ನಿಷೇಧಿಸಲಾಗಿದೆ. ಕರ್ನಾಟಕ ಶಾಲಾ ಪರೀಕ್ಷಾ ಮತ್ತು ಮೌಲ್ಯ ನಿರ್ಣಯ ಮಂಡಳಿಯು ಪ್ರತಿಬಂಧಿಸಿದ ಯಾವುದೇ ವಸ್ತುಗಳನ್ನು ಸಂಬಂಧಪಟ್ಟವರು ಪರೀಕ್ಷಾ ಕೇಂದ್ರದಡೆ ತೆಗೆದುಕೊಂಡು ಹೋಗಲು ನಿರ್ಬಂಧಿಸಿದೆ ಎಂದು ಜಿಲ್ಲಾಧಿಕಾರಿಗಳ

# ಕೊಂಡಜ್ಜಿ ಬಸಪ್ಪನವರ ಆದರ್ಶ ಯುವಕರಿಗೆ ಮಾದರಿ

**ದಾವಣಗೆರೆ** :ಕೊಂಡಜ್ಜಿ ಬಸಪ್ಪ ಸ್ಥಳೀಯ ಸಂಸ್ಥೆ ಹಾಗೂ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯ ವತಿಯಿಂದ ದಿ: 23 ರ ಭಾನುವಾರ ದಂದು ಸಂಸ್ಥಾಪಕರ ದಿನಾಚರಣೆ ಹಾಗೂ ಚಿಂತನ ದಿನಾಚರಣೆಯ ಪ್ರಯುಕ್ತ ಶ್ರೀರಾಮ ಪಾರ್ಕ್ ಆವರಣ ಸ್ವಚ್ಛತೆಯನ್ನು ಹಮ್ಮಿಕೊಳ್ಳಲಾಗಿತ್ತು

ಸಂಸ್ಥೆಯ ಅಧ್ಯಕ್ಷರಾದ ದಿನೇಶ್ ಕೆ ಶೆಟ್ಟಿ ಅವರು ಪಾರ್ಕ್ ನಲ್ಲಿ ಸ್ವಚ್ಛತೆ ಮಾಡುವುದರ ಮುಖಾಂತರ ಶ್ರೀ ಕೊಂಡಜ್ಜಿ ಬಸಪ್ಪನವರು ಇವರು ಕರ್ನಾಟಕದ ರಾಜಕಾರಣಿ ಮತ್ತು ಕರ್ನಾಟಕದ ಸ್ಕೌಟ್ಸ್ ಮತ್ತು ಗೈಡ್ಸ್ ಚಳುವಳಿ ನಾಯಕರಾಗಿದ್ದರು

ಕೊಂಡಜ್ಜಿ. ಇದು ಹರಿಹರ– ದಾವಣಗೆರೆಗೆ ಸರಿಸಮಾನ ದೂರದ ಒಂದು ಸಾಧಾರಣ ಹಳ್ಳಿ. ಆದರೆ ಇದಕ್ಕೆ ಇಂದು ಅಂತರರಾಷ್ಟ್ರೀಯ ಸ್ಕೌಟ್ಸ್ ಮತ್ತು ಗೈಡ್ಸ್ ಸಂಘಟನೆಯ ಮಟ್ಟದಲ್ಲಿ ಹೆಸರು ಪಡೆದಿದ್ದು ?ಅದರ




ಕಾರಣಕರ್ತರು ಅದೇ ಗ್ರಾಮದವರಾದ ಕೊಂಡಜ್ಜಿ ಬಸಪ್ಪನವರು. ಅವರು ರಾಜಕಾರಣಿಯಾಗಿದ್ದರೂ ಅದನ್ನೂ ಮೀರಿ ಬೆಳೆದವರು ಅವರು ಜನಿಸಿದ್ದು ಸಾಧಾರಣ ಕುಟುಂಬದಲ್ಲಿ. ಕಷ್ಟಪಟ್ಟು, ಅವರಿವರ ಸಹಾಯದಿಂದ ಓದಿ ಮುಂದೆ ಬಂದವರು ರಾಜಕಾರಣಕ್ಕಿಂತಲೂ ಅವರಿಗೆ ಹೆಚ್ಚು ಪ್ರಿಯವಾಗಿದ್ದ ಕ್ಷೇತ್ರ ಸ್ಕೌಟ್ಸ್ ಮತ್ತು ಗೈಡ್ಸ್ ಸಂಘಟನೆ. ಶಾಲಾ ಮಕ್ಕಳಲ್ಲಿ ಸ್ವಯಂಸೇವೆ, ಶಿಸ್ತು, ಸಜ್ಜನಿಕೆ, ಉತ್ತಮ ನಡೆನುಡಿ, ಸೇವಾ ಮನೋಭಾವ, ಧೈರ್ಯ, ಸಾಹಸ ಪ್ರವೃತ್ತಿ ಮುಂತಾದ ಗುಣಗಳನ್ನು ಬೆಳೆಸಲು ವಿಶ್ವಮಟ್ಟದಲ್ಲಿ ಹುಟ್ಟಿಕೊಂಡ ಈ ಆಂದೋಲನದಲ್ಲಿ ಅವರು ತಮ್ಮನ್ನು ಪೂರ್ಣ ಮಟ್ಟದಲ್ಲಿ ತೊಡಗಿಸಿ ಕೊಂಡಿದ್ದರು ಮಕ್ಕಳು ಯುವಕರು ದೈಹಿಕ ಬೌದ್ಧಿಕ ಸಾಮಾಜಿಕ ದೈವಿಕ ವಾಗಿ ಪೂರ್ಣ ಪ್ರಮಾಣದ ಉನ್ನತಿಯನ್ನು ಸಾಧಿಸುವುದು ಅಲ್ಲದೆ ಪ್ರಾದೇಶಿಕ ರಾಷ್ಟ್ರೀಯ, ಅಂತರ ರಾಷ್ಟ್ರೀಯ ಮಟ್ಟದ ಹೊಣೆಗಾರಿಕೆಯುಳ್ಳ ವ್ಯಕ್ತಿಗಳಾಗಿ ರೂಪುಗೊಳ್ಳುವರು ಎಂದು ತಿಳಿಸಿದರು

ಈ ಸಂದರ್ಭದಲ್ಲಿ ಕಾಂಗ್ರೆಸ್ ಮುಖಂಡರಾದ ಪ್ರವೀಣ್ ಹರೀಶ್ ಪರಶುರಾಮ್ ಗೋಪಾಲ್ ಚೇತನ್ ಕುಮಾರ್ ಶ್ರೀ ರವೀಂದ್ರ ಸ್ವಾಮಿ ಕೊಂಡಜ್ಜಿ ಬಸಪ್ಪ ಸ್ಥಳೀಯ ಸಂಸ್ಥೆ ಕಾರ್ಯದರ್ಶಿಗಳು ಮತ್ತು ಶ್ರೀಮತಿ ಅಶ್ವಿನಿ ಖಉಗಿ ರವರು ರೋವರ್ಸ್ ಮತ್ತು ರೇಂಜರ್ಸ್ ವಿದ್ಯಾರ್ಥಿಗಳಿಂದ ಸ್ವಚ್ಛತಾ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ಸಂಘಟಿಸಿದರು.

## ಮಹಾಶಿವರಾತ್ರಿ ಪ್ರಯುಕ್ತ ಶ್ರೀ ಕ್ಷೇತ್ರ ಪಂಪಾವನದಲ್ಲಿ ಶ್ರೀ ಹಂಪಿ ವಿರೂಪಾಕ್ಷ ಲಿಂಗೇಶ್ವರಸ್ವಾಮಿಗೆ ವಿಶೇಷ ಪೂಜೆ

**ಶಿವಮೊಗ್ಗ :** ನಗರದ ರಾಜೇಂದ್ರ ನಗರದಲ್ಲಿರುವ ಶ್ರೀ ಕ್ಷೇತ್ರ ಪಂಪಾವನದಲ್ಲಿ ಶ್ರೀ ಹಂಪಿ ವಿರೂಪಾಕ್ಷ ಲಿಂಗೇಶ್ವರಸ್ವಾಮಿಗೆ ಫೆ.26ರ ಬುಧವಾರದಂದು ಬೆಳಿಗ್ಗೆ 06 ರಿಂದ 10 ಗಂಟೆಯ ತನಕ ಸಮಸ್ತ ಭಕ್ತಾದಿಗಳಿಂದ ಸ್ವಾಮಿಗೆ ಶ್ರೀರಭಿಷೇಕ ಮತ್ತು ರುದ್ರಾಭಿಷೇಕ ಏರ್ಪಡಿಸಲಾಗಿದೆ. ಈ ಎಲ್ಲಾ ಕಾರ್ಯಕ್ರಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತಾಧಿಗಳು ಪಾಲ್ಗೊಂಡು ಸ್ವಾಮಿಯ ಕೃಪಗೆ ಪಾತ್ರರಾಗಬೇಕಾಗಿ ಶ್ರೀರಾಮ ಮತ್ತು ಅಯ್ಯಪ್ಪಸ್ವಾಮಿ ಸೇವೆ ಸಮಿತಿ ಅಧ್ಯಕ್ಷರು ಮತ್ತು ಪದಾಧಿಕಾರಿಗಳು ಮನವಿ ಮಾಡಿದ್ದಾರೆ. ಹೆಚ್ಚಿನ ವಿವರಗಳಿಗಾಗಿ ಮೊ : 9449455188 ಸಂಪರ್ಕಿಸಬಹುದು.



# ಪರೀಕ್ಷಾ ಕೇಂದ್ರಗಳ ಸುತ್ತ ನಿಷೇಧಾಜ್ಞೆ

**ಚಿಕ್ಕಮಗಳೂರು: ಫೆ. 24:** ಮಾರ್ಚ್ 01 ರಿಂದ 20 ರವರೆಗೆ ರಾಜ್ಯಾದ್ಯಂತ ಏಕಕಾಲದಲ್ಲಿ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆ ನಡೆಸಲಾಗುತ್ತಿದ್ದು, ಜಿಲ್ಲೆಯಾದ್ಯಂತ ಒಟ್ಟು 19 ಪರೀಕ್ಷಾ ಕೇಂದ್ರಗಳಿದ್ದು, ಜಿಲ್ಲೆಯ ಸರ್ಕಾರಿ ಪದವಿ ಪೂರ್ವ ಕಾಲೇಜು ಬೇಲೂರು ರಸ್ತೆ, ಎಲ್.ಬಿ.ಎಸ್. ಸರ್ಕಾರಿ ಪದವಿ ಪೂರ್ವ ಕಾಲೇಜು, ಎಂ.ಇ.ಎಸ್. ಎಸ್‌ಎಸ್‌ಎಂ ಪದವಿ ಪೂರ್ವ ಕಾಲೇಜು, ಬಾಲಿಕಾ ಸರ್ಕಾರಿ ಪದವಿ ಪೂರ್ವ ಕಾಲೇಜು, ಬಸವನಹಳ್ಳಿ, ಮೌಂಟೇನ್ ವ್ಯೂ ಪದವಿ ಪೂರ್ವ ಕಾಲೇಜು, ಎಸ್‌ಟಿಜೆ ಮಹಿಳಾ ಪದವಿ ಪೂರ್ವ ಕಾಲೇಜು ಬೇಲೂರು ರಸ್ತೆ, ಸರ್ಕಾರಿ ಪದವಿ ಪೂರ್ವ ಕಾಲೇಜು, ತರೀಕೆರೆ, ಬಾಲಿಕಾ ಸರ್ಕಾರಿ ಪದವಿ ಪೂರ್ವ ಕಾಲೇಜು, ತರೀಕೆರೆ, ಸರ್ಕಾರಿ ಪದವಿ ಪೂರ್ವ ಕಾಲೇಜು, ಮೂಡಿಗೆರೆ, ಸರ್ಕಾರಿ ಪದವಿ ಪೂರ್ವ ಕಾಲೇಜು, ಕಡೂರು, ಬಾಲಿಕಾ ಸರ್ಕಾರಿ ಪದವಿ ಪೂರ್ವ ಕಾಲೇಜು, ಕಡೂರು, ಸರ್ಕಾರಿ ಪದವಿ ಪೂರ್ವ ಕಾಲೇಜು, ಸಖರಾಯಪಟ್ಟಣ, ಶೆಟ್ರು ಸಿದ್ದಪ್ಪ ಸರ್ಕಾರಿ ಪದವಿ ಪೂರ್ವ ಕಾಲೇಜು, ಅಜ್ಜಂಪುರ, ಕೆ.ಎಲ್.ಕೆ. ಸರ್ಕಾರಿ ಪದವಿ ಪೂರ್ವ ಕಾಲೇಜು, ಬೀರೂರು, ಸರ್ಕಾರಿ ಪದವಿ ಪೂರ್ವ ಕಾಲೇಜು, ಕಳಸ, ಸರ್ಕಾರಿ ಪದವಿ ಪೂರ್ವ ಕಾಲೇಜು, ನರಸಿಂಹರಾಜಪುರ, ಸರ್ಕಾರಿ ಎಸ್.ಎಂ.ಎಸ್.ಡಿ ಪದವಿ ಪೂರ್ವ ಕಾಲೇಜು, ಕೊಪ್ಪ, ಸರ್ಕಾರಿ ಪದವಿ ಪೂರ್ವ ಕಾಲೇಜು, ಶೃಂಗೇರಿ, ಎಸ್.ಜೆ.ಆರ್ ಪದವಿ ಪೂರ್ವ ಕಾಲೇಜು, ಬಾಳೆಹೊನ್ನೂರು ಈ ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆಯು ನಡೆಯಲಿದೆ, ಪರೀಕ್ಷೆ ಸುವ್ಯವಸ್ಥಿತವಾಗಿ ಶಾಂತಿ ಮತ್ತು ಶಿಸ್ತು ಪಾಲನೆ, ಗೌಪ್ಯತೆಯನ್ನು ಕಾಪಾಡುವ ನಿಟ್ಟಿನಲ್ಲಿ ಮಾರ್ಚ್ 01 ರಿಂದ 20 ರವರೆಗೆ ಬೆಳಿಗ್ಗೆ 10.00 ಗಂಟೆಯಿಂದ ಸಂಜೆ. 06.00 ಗಂಟೆಯವರೆಗೆ ಈ ಪರೀಕ್ಷಾ ಕೇಂದ್ರಗಳ ಸುತ್ತ 200 ಮೀಟರ್ ವ್ಯಾಪ್ತಿಯಲ್ಲಿ ನಿಷೇಧಾಜ್ಞೆ ಜಾರಿಗೊಳಿಸಿ ಜಿಲ್ಲಾಧಿಕಾರಿ ಮೀನಾ ನಾಗರಾಜ್ ಸಿ.ಎನ್. ಆದೇಶ ಹೊರಡಿಸಿದ್ದಾರೆ.

ಪರೀಕ್ಷಾ ಕೇಂದ್ರಗಳ ಸುತ್ತ ಇರುವ ಜೆರಾಕ್ಸ್ ಅಂಗಡಿಗಳನ್ನು ಪರೀಕ್ಷೆ ನಡೆಯುವ ಸಮಯದಲ್ಲಿ ಕಡ್ಡಾಯವಾಗಿ ಮುಚ್ಚುವುದು. ನಿರ್ಬಂಧಿತ ಪ್ರದೇಶ ವ್ಯಾಪ್ತಿಯಲ್ಲಿ ಬರುವ ಶಾಲಾ ಕಾಲೇಜುಗಳಲ್ಲಿ ಮತ್ತು ಇತರೆ ಶೈಕ್ಷಣಿಕ ಸಂಸ್ಥೆಗಳಲ್ಲಿ ಈ ಪರೀಕ್ಷೆ ಹೊರತುಪಡಿಸಿ ಇತರೆ ರೀತಿಯ ಶೈಕ್ಷಣಿಕ ಚಟುವಟಿಕೆಗಳಿಗೆ ಅವಕಾಶವಿರುವುದಿಲ್ಲ. ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷಾ ವಿದ್ಯಾರ್ಥಿಗಳು, ಪರೀಕ್ಷಾ ಕಾರ್ಯನಿರತ ಅಧಿಕಾರಿ /ಸಿಬ್ಬಂದಿಗಳು ಮೊಬೈಲ್, ಎಲೆಕ್ಟ್ರಾನಿಕ್ ಉಪಕರಣಗಳ ಬಳಕೆಯನ್ನು ಬಳಸುವುದನ್ನು ನಿರ್ಬಂಧಿಸಲಾಗಿದೆ. ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷಾ ವಿದ್ಯಾರ್ಥಿಗಳು ಮತ್ತು ಪರೀಕ್ಷಾ ಕೇಂದ್ರದ ಅಧಿಕಾರಿ/ಸಿಬ್ಬಂದಿಗಳು ಅಧಿಕೃತ ಗುರುತಿನ ದಾಖಲೆಗಳೊಂದಿಗೆ ಮಾತ್ರ ಹಾಜರಿದ್ದು, ಪರೀಕ್ಷಾ ಕರ್ತವ್ಯಗಳನ್ನು ನಿರ್ವಹಿಸಲು ಅವಕಾಶವಿದೆ. ಉಳಿದಂತೆ ವಿನಾ: ಕಾರಣ ಅಧಿಕಾರಿ/ಸಿಬ್ಬಂದಿಗಳು ಹಾಜರಿರುವುದನ್ನು ನಿರ್ಬಂಧಿಸಿದೆ ಎಂದು ಅವರು ಆದೇಶದಲ್ಲಿ ತಿಳಿಸಿದ್ದಾರೆ.



# ಶಾಲಾ-ಕಾಲೇಜಿಗೊಂದು ಶ್ರೀಗಂಧದ ಗಿಡ
# ಪರಿಸರಾಸಕ್ತ ತಂಡದಿಂದ ವಿಶೇಷ ಪ್ರಯತ್ನ

**ಶಿವಮೊಗ್ಗ:** ಮಲೆನಾಡಿನ ಹೆಬ್ಬಾಗಿಲು ಶಿವಮೊಗ್ಗ ಒಂದೊಮ್ಮೆ ಶ್ರೀಗಂಧದ ಬೀಡು. ಗಂಧದ ಕಾರ್ಖಾನೆಯು ಇತ್ತು. ಆದರೆ ಅದೀಗ ಗತಕಾಲದ ವೈಭವವಷ್ಟೆ. ಮಲೆನಾಡಿನಲ್ಲೂ ಶ್ರೀಗಂಧಕ್ಕೆ ಬರ.

ಶ್ರೀಗಂಧವನ್ನು ಉಳಿಸಿ ಬೆಳೆಸಲು ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ನಾನಾ ಕಸರತ್ತು ನಡೆಸುತ್ತಿವೆ. ಅರಿವು ಮೂಡಿಸಿದರೂ ಕಳ್ಳರ ಭಯದಿಂದ ಶ್ರೀಗಂಧ ಬೆಳೆಯಲು ರೈತರು ಹಿಂದೇಟು ಹಾಕುವಂತಾಗಿದೆ. ಆದರೆ ಶಿವಮೊಗ್ಗದಲ್ಲಿ ಪರಿಸರಾಸಕ್ತರ ತಂಡವೊಂದು ವಿಶೇಷ ಕಾಳಜಿ ವಹಿಸಿ ಶಾಲೆ-ಕಾಲೇಜಿಗೊಂದರಂತೆ ಶ್ರೀಗಂಧದ ಸಸಿ ನೆಟ್ಟು ಬೆಳೆಸಲು ಮುಂದಾಗಿದೆ.

ಶ್ರೀ ವಿದ್ಯಾದೀಪ ಪರಿಸರ ಸೇವಾ ಸಂಘದ ಹೆಸರಿನಲ್ಲಿ ಏಳು ಜನರ ತಂಡವೊಂದು ಜಿಲ್ಲೆಯಾದ್ಯಂತ 2,600 ಶಾಲೆಗಳು ಮತ್ತು 257 ಕಾಲೇಜುಗಳ ಆವರಣದಲ್ಲಿ ಶ್ರೀಗಂಧದ ಸಸಿಗಳನ್ನು ನೆಟ್ಟು ಅರಿವು ಮೂಡಿಸಲು ಸಜ್ಜಾಗಿದೆ. ಈಗಾಗಲೇ ಅರಣ್ಯ ಇಲಾಖೆಯಿಂದ ಬರೋಬ್ಬರಿ 5 ಸಾವಿರ ಸಸಿಗಳನ್ನು ಪಡೆದು-ಕೊಂಡು ಮೂರ್ನಾಲ್ಕು ಕಡೆ ಸದ್ದಿಲ್ಲದೇ ಸಸಿಗಳನ್ನು ನೆಡುವ ಕಾರ್ಯವನ್ನೂ ಮಾಡುತ್ತಿದೆ.

ಸಮಾನ ಮನಸ್ಕರ ತಂಡಕ್ಕೆ ಕಟ್ಟೆ ಗೆಳೆಯರ ಬಳಗ ಸೇರಿದಂತೆ ಶಿವಮೊಗ್ಗದ ಕೆಲ ಸಂಘ ಸಂಸ್ಥೆಗಳು, ಪರಿಸರಾಸಕ್ತರು ಕೈಜೋಡಿಸುತ್ತಿದ್ದಾರೆ. ಜತೆಗೆ ಅರಣ್ಯ ಇಲಾಖೆ, ಸಾರ್ವಜನಿಕ ಶಿಕ್ಷಣ ಇಲಾಖೆಗಳೂ ಬೆನ್ನೆಲುಬಾಗಿ ನಿಂತಿವೆ. ಇದರಿಂದ ಪ್ರತಿ ವರ್ಷ ಮಳೆಗಾಲ ಮುಗಿಯುವುದರೊಳಗೆ ಸರ್ಕಾರಿ ಶಾಲಾ-ಕಾಲೇಜಿನಲ್ಲಿ ಶ್ರೀಗಂಧದ ಸಸಿಗಳನ್ನು ನೆಡಲು ಎಲ್ಲ ತಯಾರಿಗಳನ್ನೂ ಮಾಡಿಕೊಂಡಿದ್ದಾರೆ. ಕಳೆದ ವರ್ಷವು ಕೆಲ ಗಿಡಗಳನ್ನು ನೆಟ್ಟು ಅವರೇ ಪೋಷಿಸಿದ್ದಾರೆ.

ಸಮಾನ ಮನಸ್ಕರಿಂದ ಸಾಮಾಜಿಕ ಕಾರ್ಯ ಗ್ರಾಪಂ ಸದಸ್ಯ, ಕಾರ್ಖಾನೆ ನೌಕರರು, ಟೈಲರ್, ಸೇಲ್ಸ್‌ಮನ್ ಸೇರಿದಂತೆ ವಿವಿಧ ವೃತ್ತಿಗಳಲ್ಲಿ ತೊಡಗಿಕೊಂಡಿರುವ ಸಮಾನ ಮನಸ್ಕರ ತಂಡವು ನಶಿಸುತ್ತಿರುವ ಶ್ರೀಗಂಧದ ಬಗ್ಗೆ ಶಾಲಾ ಹಂತದಿಂದಲೇ ಮಕ್ಕಳಲ್ಲಿ ಜಾಗೃತಿ ಮೂಡಿಸಲು ಮುಂದಾಗಿದೆ. ಈಗಾಗಲೇ

> ಶಿವಮೊಗ್ಗ ಜಿಲ್ಲೆಯಾದ್ಯಂತ ಸರ್ಕಾರಿ ಶಾಲಾ ಕಾಲೇಜು ಆವರಣದಲ್ಲಿ ಶ್ರೀಗಂಧ ಸಸಿಗಳನ್ನು ನೆಟ್ಟು ಬೆಳೆಸಲು ಸಮಾನ ಮನಸ್ಕರು ನಿರ್ಧರಿಸಿದ್ದು ಈಗಾಗಲೇ ಕೆಲವೆಡೆ ಶ್ರೀಗಂಧದ ಸಸಿಗಳನ್ನು ನೆಟ್ಟಿದ್ದೇವೆ. ಶಾಲಾ ಹಂತದಿಂದಲೇ ಶ್ರೀಗಂಧದ ಮಹತ್ವದ ಬಗ್ಗೆ ತಿಳಿಸಿಕೊಡುವುದು ಯೋಜನೆ ಹಿಂದಿನ ಉದ್ದೇಶವಾಗಿದೆ. ಅರಣ್ಯ ಇಲಾಖೆ, ಸಾರ್ವಜನಿಕ ಶಿಕ್ಷಣ ಇಲಾಖೆ ಮತ್ತು ಕೆಲ ಪರಿಸರಾಸಕ್ತರು ಕೈಜೋಡಿಸುತ್ತಿದ್ದಾರೆ.
> **-ಸುದೀಪ್,** ಶ್ರೀ ವಿದ್ಯಾದೀಪ ಪರಿಸರ ಸೇವಾ ಸಂಘದ ನಿರ್ದೇಶಕ

ಸಾರ್ವಜನಿಕ ಶಿಕ್ಷಣ ಇಲಾಖೆಯ ಸಹಕಾರದೊಂದಿಗೆ ಸರ್ಕಾರಿ ಶಾಲಾ-ಕಾಲೇಜುಗಳನ್ನು ಆಯ್ದುಕೊಂಡು ಮಲೆನಾಡನ್ನು ಶ್ರೀಗಂಧದ ಬೀಡನ್ನಾಗಿಸಲು ಶ್ರಮಿಸುತ್ತಿದೆ. ಈ ಮೂಲಕ ಸಮಾನ ಮನಸ್ಕರು ಸಾಮಾಜಿಕ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದಾರೆ.

ಗಂಧದ ಬಗ್ಗೆ ಅರಿವು ಮೂಡಿಸುವುದೇ ಗುರಿ ಭಾರತೀಯ ಸಂಸ್ಕೃತಿಯಲ್ಲಿ ಶ್ರೀಗಂಧಕ್ಕೆ ವಿಶಿಷ್ಠ ಸ್ಥಾನವಿದೆ. ಇಂದು ಶ್ರೀಗಂಧದ ಗಿಡ-ಮರಗಳು ಕಣ್ಮರೆಯಾಗುತ್ತಿವೆ. ಬೆಳಗ್ಗೆ ನೋಡಿದ ಗಿಡ-ಮರಗಳು ರಾತ್ರೋರಾತ್ರಿ ಕಡಿತಲೆ ಆಗುತ್ತಿವೆ. ಇದೇ ಪರಿಸ್ಥಿತಿ ಮುಂದುವರಿದರೆ ಕೆಲವೇ ವರ್ಷಗಳಲ್ಲಿ ಮಲೆನಾಡಿನಲ್ಲಿ ಶ್ರೀಗಂಧ ನಶಿಸಿ ಹೋಗಲಿದೆ. ಇಂದಿನ ಪೀಳಿಗೆಗೆ ಶ್ರೀಗಂಧದ ಬಗ್ಗೆ ಗಂಧ ಗಾಳಿಯೂ ಇಲ್ಲದಂತೆ ಆಗಲಿದೆ. ಹಾಗಾಗಿ ಭವಿಷ್ಯದ ಯುವ ಪೀಳಿಗೆಯಲ್ಲಿ ಅರಿವು ಮೂಡಿಸುವ ಉದ್ದೇಶವನ್ನು ಸಂಘ ಹೊಂದಿದ್ದು ಅದಕ್ಕಾಗಿ ಶಾಲಾ-ಕಾಲೇಜು ಆವರಣಗಳನ್ನೇ ಆಯ್ದುಕೊಂಡಿದೆ.

ಗೋ ಗ್ರೋ ಸ್ಯಾಂಡಲ್‌ಗೆ ಹಿನ್ನಡೆ ಸರ್ಕಾರ ಅರಣ್ಯ ಇಲಾಖೆ ಮೂಲಕ ಶ್ರೀಗಂಧದ ಗಿಡಗಳನ್ನು ಬೆಳೆಸಲು ರೈತರನ್ನು ಪ್ರೋತ್ಸಾಹಿಸುವ ಕೆಲಸವನ್ನು ಮಾಡುತ್ತಿದೆ. ಅದಕ್ಕಾಗಿ ಗೋ ಗ್ರೋ ಸ್ಯಾಂಡಲ್ ಯೋಜನೆಯನ್ನು ಅನುಷ್ಠಾನಗೊಳಿಸಿದ್ದು ಪ್ರತಿ ಗಿಡಕ್ಕೆ ವರ್ಷಕ್ಕೆ 35 ರೂ. ನಂತೆ ಮೂರು ವರ್ಷಕ್ಕೆ 105 ರೂ. ಸಬ್ಸಿಡಿಯನ್ನೂ ನೀಡುತ್ತಿದೆ. ಆದರೆ ದೀರ್ಘ ಕಾಲದ ಬೆಳೆ ಆಗಿರುವ ಕಾರಣ ರೈತರು ಕೂಡ ಶ್ರೀಗಂಧ ಬೆಳೆಸಲು ಹಿಂದೇಟು ಹಾಕುತ್ತಿದ್ದಾರೆ. ಹಾಗಾಗಿ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಗೆ ಹಿನ್ನಡೆಯಾಗಿದೆ. ಇದರಿಂದ ಸಾವಿರಾರು ಶ್ರೀಗಂಧದ ಸಸಿಗಳು ಅರಣ್ಯ ಇಲಾಖೆ ನರ್ಸರಿಗಳಲ್ಲೇ ಹಾಳಾಗುತ್ತಿವೆ.

ವಾರ್ಡ್‌ಗೊಂದು ಸಾವಿರ ಔಷಧ ಸಸ್ಯ ಶಾಲಾ-ಕಾಲೇಜುಗಳಲ್ಲಿ ಶ್ರೀಗಂಧದ ಜತೆಗೆ ಶಿವಮೊಗ್ಗ ಮಹಾನಗರ ಪಾಲಿಕೆ ವ್ಯಾಪ್ತಿಯ ವಾರ್ಡ್‌ಗೊಂಡು ಸಾವಿರ ಔಷಧ ಸಸ್ಯವನ್ನು ನೆಡಲು ಆಲೋಚನೆ ನಡೆಸಿದ್ದಾರೆ. ಇದಕ್ಕಾಗಿ ಸಾರ್ವಜನಿಕ ಶಿಕ್ಷಣ ಇಲಾಖೆಯು ಕ್ಯಾನ್ಸರ್‌ಗೆ ರಾಮಬಾಣ ಆಗಿರುವ ಲಕ್ಷ್ಮಣ ಸೀತಾಫಲ 45 ಸಾವಿರ ಸಸಿಗಳನ್ನು ನೀಡಲು ಒಪ್ಪಿಕೊಂಡಿದೆ. ಶಿವಮೊಗ್ಗದಲ್ಲಿ 32 ವಾರ್ಡ್‌ಗಳಿದ್ದು ವಾರ್ಡ್‌ಗೆ ಒಂದು ಸಾವಿರ ಸಸಿ ನೆಟ್ಟರೂ 32 ಸಾವಿರ ಲಕ್ಷ್ಮಣ ಸೀತಾಫಲ ಸಸಿಗಳನ್ನು ಮುಂದಿನ ದಿನಗಳಲ್ಲಿ ಕೆಲವೇ ದಿನಗಳಲ್ಲಿ ನೆಡಲು ತಯಾರಿ ಮಾಡಿಕೊಂಡಿದ್ದಾರೆ.

# ಗೃಹಜ್ಯೋತಿ ಯೋಜನೆಗೆ ಗ್ರಾಹಕರಿಂದ ಹಣ ಪಡೆಯುವುದಿಲ್ಲ: ಕೆ ಜೆ ಜಾರ್ಜ್ ಸ್ಪಷ್ಟನೆ

**ಬೆಂಗಳೂರು,ಫೆ. 24:** ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾದ ಗೃಹ ಜ್ಯೋತಿಯ ಸಹಾಯಧನವನ್ನು ವಿದ್ಯುತ್ ವಿತರಣಾ ಸಂಸ್ಥೆಗಳಿಗೆ ಸರ್ಕಾರ ಮುಂಗಡವಾಗಿ ಪಾವತಿಸಲಾಗುತ್ತಿದೆ.ಹೀಗಾಗಿ, ಗ್ರಾಹಕರಿಂದ ಹಣ ಪಡೆಯುವ ಯಾವುದೇ ಪ್ರಸ್ತಾಪ ಮುಂದಿಲ್ಲ ಎಂದು ಸರ್ಕಾರ ಸ್ಪಷ್ಟಪಡಿಸಿದೆ. ಸುದ್ದಿಗಾರರೊಂದಿಗೆ ಮಾತನಾಡಿದ ಇಂಧನ ಸಚಿವ ಕೆ.ಜೆ.ಜಾರ್ಜ್ ಈ ವಿಷಯ ತಿಳಿಸಿದರು."ಗೃಹಜ್ಯೋತಿ ಹಣವನ್ನು ಸರ್ಕಾರ ಮುಂಗಡವಾಗಿ ಪಾವತಿಸದಿದ್ದರೆ ಜನರಿಂದ ಪಡೆಯಲು ಕೆಇಆರ್‌ಸಿ ಎಸ್ಕಾಂಗಳಿಗೆ ಸೂಚಿಸಿದೆ ಎಂಬ ವಿಚಾರ ತಪ್ಪು ಕಲ್ಪನೆಯಿಂದ ಸೃಷ್ಟಿಯಾಗಿದೆ.

## ಮೊದಲನೇ ವರ್ಷದ ಪುಣ್ಯಸ್ಮರಣೆ



**ದಿ|| ಶ್ರೀ ಹೆಚ್.ಎನ್. ಕೊಲ್ಲಾರಯ್ಯ**

ಲಿಂಗೈಕ್ಯ : 25.02.2024

**ನಿವೃತ್ತ ಉಪ ತಹಶೀಲ್ದಾರ್.**

ಲೆನಿನ್ ನಗರ, 'ಎ' ಬ್ಲಾಕ್
3ನೇ ಮುಖ್ಯರಸ್ತೆ, 3ನೇ ಕ್ರಾಸ್ ದಾವಣಗೆರೆ.

ನೀವು ನಮ್ಮನ್ನಗಲಿ ವರ್ಷವಾಯಿತು.
ನಿಮ್ಮ ಬದುಕಿನ ಮೌಲ್ಯಗಳೇ ನಮಗೆ ದಾರಿದೀಪ.
ಸದಾ ನಿಮ್ಮ ಸ್ಮರಣೆಯಲ್ಲಿರುವ....

**ಮಕ್ಕಳು, ಸೊಸೆಯಂದಿರು, ಅಳಿಯಂದಿರು**
**ಹಾಗೂ ಮೊಮ್ಮಕ್ಕಳು ಮತ್ತು ನೀಲಯ್ಯ ವಂಶಸ್ಥರು**

# ಶಿವರಾತ್ರಿ ಪವಿತ್ರವಾದ ಹಬ್ಬ : ಶಾಸಕ ಬಸವರಾಜು ಶಿವಗಂಗಾ

**ಚನ್ನಗಿರಿ :** ಶಿವರಾತ್ರಿ ಹಬ್ಬದ ಜಾಗರಣೆಯು ಪವಿತ್ರವಾದ ಹಬ್ಬವಾಗಿದ್ದು ಜಾಗರಣೆಯಲ್ಲಿ ವಿವಿಧ ಕ್ರೀಡೆಗಳನ್ನು ಹವ್ಯಾಸಗಳನ್ನು ಮಾಡದೇ ಶಿವನ ದ್ಯಾನ ಮಾಡುವ ಶಿವವನ್ನು ಅಮಂತ್ರಣ ಮಾಡಬೇಕು ಎಂದು ಶಾಸಕ ಬಸವರಾಜು ಶಿವಗಂಗಾ ಹೇಳಿದರು.

ಸೋಮವಾರ ಪಟ್ಟಣದ ಪ್ರಜಾಪಿತ ಬ್ರಹ್ಮಕುಮಾರಿ ವಿಶ್ವ ವಿದ್ಯಾಲಯದಲ್ಲಿ ಹಮ್ಮಿಕೊಳ್ಳಲಾಗಿದ್ದ 89 ನೇ ಮಹಾಶಿವರಾತ್ರಿಯ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ ಇಂದಿನ ಒತ್ತಡದ ದಿನಗಳಲ್ಲಿ ಶಾಂತಿ ನೆಮ್ಮದಿ ಆಗತ್ಯವಾಗಿದ್ದು ಅಂತಹ ಶಾಂತಿ ಇಂತಹ ಕೇಂದ್ರಗಳಲ್ಲಿ ದೊರಕುತ್ತದೆ ಎಂದರು.

ತುಮ್‌ಕೋಸ್‌ನ ಮಾಜಿ ಅಧ್ಯಕ್ಷ ಎಚ್.ಎಸ್.ಶಿವಕುಮಾರ್ ಮಾತನಾಡಿ ಪ್ರಜಾಪಿತ ಬ್ರಹ್ಮಕುಮಾರಿ ವಿಶ್ವ ವಿದ್ಯಾಲಯದ ಸಂಚಾಲಕರು ಸರ್ವವನ್ನು ತ್ಯಾಗ ಮಾಡಿ ಸಮಾಜದ ಕೆಲಸಗಳಲ್ಲಿ ತೊಡಗುವ ಮೂಲಕ ಆದ್ಯಾತ್ಮದ ಬೀಜಗಳನ್ನು ಬಿತ್ತುವ ಕೆಲಸವನ್ನು ಮಾಡುತ್ತಿದ್ದಾರೆ.

ಭಾರತೀಯ ಸಂಸ್ಕೃತಿಯಲ್ಲಿ ಹಬ್ಬಗಳು ವಿಶೇಷವಾದ ಮಹತ್ವವನ್ನು ಪಡೆದುಕೊಳ್ಳುತ್ತಿದ್ದು ಅಣ್ಣ, ತಮ್ಮ, ಅಕ್ಕ,ತಂಗಿ ಸಂಬಂದಗಳನ್ನು ಬೆಸಯುವ ಕಾರ್ಯವನ್ನು ಕಾರ್ಯವನ್ನು ಮಾಡುತ್ತಿವೆ. ರಾಷ್ಟ್ರದ ಮೂಲೆ ಮೂಲೆಗಳಲ್ಲಿಯೂ ಬ್ರಹ್ಮಕುಮಾರಿಯರು ಕಾರ್ಯ ನಿರ್ವಹಿಸುತ್ತಿದ್ದು ಸಮಾಜವನ್ನು ಉತ್ತಮ ಮಾರ್ಗದ ಕಡೆಗೆ ಕೊಂಡೊಯ್ಯುತ್ತಿದ್ದಾರೆ ಎಂದರು.



ಪ್ರಜಾಪಿತ ಬ್ರಹ್ಮಕುಮಾರಿ ವಿಶ್ವ ವಿದ್ಯಾಲಯದ ಸಂಚಾಲಕರಾದ ತಾರಕ್ಕ ಮಾತನಾಡಿ ಈಶ್ವರೀಯ ವಿದ್ಯಾಲಯವು ಒಂದು ಚೈತನ್ಯ ಶಿಸ್ತು ಮಂದಿರವಾಗಿದ್ದು ದೇವರ ದೇವ ಮಹಾದೇವನ ಕುರಿತು ಮಾನವರಲ್ಲಿ ಜಾಗೃತಿ ಮೂಡಿಸುತ್ತಿದೆ. 1936 ರಲ್ಲಿ ಪ್ರಾರಂಭವಾಗಿ ಸುಮಾರು 148 ದೇಶಗಳಲ್ಲಿ ಸಹಜ ರಾಜಯೋಗವನ್ನು ಕಲಿಸಿಕೊಡುವ ಪ್ರಯತ್ನ ಮಾಡುತ್ತಿದೆ. ಮನುಷ್ಯನ ಮನಸ್ಸು ಕಲುಷಿತವಾಗಿದ್ದು ಯೋಗ ದ್ಯಾನ ಆಚರಣೆಗಳ ಮೂಲಕ ಪರಿಶುದ್ದವಾದ ಮನಸ್ಸನ್ನು ಕಲಿಸಿಕೊಡುತ್ತಿದೆ ಎಂದರು.

ಈ ಸಂದರ್ಭದಲ್ಲಿ ತುಮ್‌ಕೋಸ್‌ಗೆ ಆಯ್ಕೆಯಾದ 15 ಜನ ನಿರ್ದೇಶಕರನ್ನು ಸನ್ಮಾನಿಸಿ ಗೌರವಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಚಾಲಕರಾದ ಬ್ರಹ್ಮ ಕುಮಾರಿ ಮಹಾದೇವಿ ಅಕ್ಕ ವಹಿಸಿದ್ದರು. ಸಂಚಾಲಕರಾದ ಜಯಶ್ರೀ, ಮಹಾಲಕ್ಷಿ ಇತರರು.

# ಮಾಜಿ ಪ್ರಧಾನಿ ವಾಜಪೇಯಿ ಮಾದರಿ ರಾಜಕಾರಣಿ : ಸಿ.ಟಿ. ರವಿ

**ಚಿಕ್ಕಮಗಳೂರು:** ಅಜಾತಶತ್ರು, ಜನಪರ ಆಡಳಿತಗಾರ, ಸ್ನೇಹಜೀವಿ, ಮಾಜಿ ಪ್ರಧಾನಿ ದಿವಂಗತ ಅಟಲ್ ಬಿಹಾರಿ ವಾಜಪೇಯಿ ಅವರ ನೆನಪು ಸದಾ ಕಾಲ ಈ ರಾಷ್ಟ್ರಕ್ಕೆ ಇರುತ್ತದೆ, ಅವರೊಬ್ಬ ಮಾದರಿ ರಾಜಕಾರಣಿ ಎಂದು ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಅಭಿಪ್ರಾಯಿಸಿದರು.

ಅವರು ಇಂದು ತಮ್ಮ ನಿವಾಸದಲ್ಲಿ ಜಿಲ್ಲಾ ಬಿಜೆಪಿ ಏರ್ಪಡಿಸಿದ್ದ ಅಟಲ್ ಬಿಹಾರಿ ವಾಜಪೇಯಿ ಅವರ ಜನ್ಮ ಶತದಿನೋತ್ಸವ ಅಂಗವಾಗಿ ನೀಡಿದ ಸನ್ಮಾನವನ್ನು ಸ್ವೀಕರಿಸಿ ಮಾತನಾಡಿದರು.



ಅಟಲ್ ಬಿಹಾರಿ ವಾಜಪೇಯಿ ಅವರಿಗೂ ಚಿಕ್ಕಮಗಳೂರಿಗೂ ಹಳೇ ಸಂಬಂಧ ಇದೆ, ತುರ್ತು ಪರಿಸ್ಥಿತಿ ಬಳಿಕ ನಡೆದ ಉಪಚುನಾವಣೆ ಸಂದರ್ಭದಲ್ಲಿ ಚಿಕ್ಕಮಗಳೂರು ಲೋಕಸಭಾ ಕ್ಷೇತ್ರದ ಉದ್ದಗಲಕ್ಕೆ ಸಂಚರಿಸಿ ಕಾರ್ಯಕರ್ತರನ್ನು ಹುರಿದುಂಬಿಸಿ ಬಿಜೆಪಿ ಅಭ್ಯರ್ಥಿಯಾಗಿದ್ದ ವೀರೇಂದ್ರ ಪಾಟೀಲ್ ಪರವಾಗಿ ಪ್ರಚಾರ ಮಾಡಿದ್ದರು ಎಂದು ಹೇಳಿದರು.

ಚಿಕ್ಕಮಗಳೂರು ನಗರಕ್ಕಾಗಮಿಸಿದ್ದಾಗ ವಿಠಲ್ ರಾವ್ ಜೊತೆ ಹೋಗಿ ಭೇಟಿಮಾಡಿರುವುದಾಗಿ ಹೇಳಿದ ಅವರು, ಆಲ್ದೂರಿಗೂ ಬಂದು 1990-91 ರ ಲೋಕಸಭಾ ಚುನಾವಣೆ ನಡೆಯುವ ಮುನ್ನವೇ ಅಟಲ್ ಜೀ ಅವರನ್ನು ಆಹ್ವಾನಿಸಿ ಎ.ಸಿ. ಚಂದ್ರಶೇಖರ್ ಅವರ ಅಧ್ಯಕ್ಷತೆಯಲ್ಲಿ ಅಭಿನಂದನಾ ಸಮಿತಿ ಮೂಲಕ ನಿಧಿ ಸಂಗ್ರಹ ಮಾಡಿ ಐಬಿಯಲ್ಲಿ ಭೇಟಿಮಾಡಿ ಮೊದಲ ಬಾರಿಗೆ ಫೋಟೋ ತೆಗೆಸಿಕೊಂಡಾಗ ಬೂತ್ ಮಟ್ಟದ ಅಧ್ಯಕ್ಷನಾಗಿದ್ದೆ ಎಂದು ತಿಳಿಸಿದರು.

ನೇತಾಜಿ ಸುಭಾಷ್ ಚಂದ್ರಬೋಸ್ ಜಿಲ್ಲಾ ಆಟದ ಮೈದಾನದಲ್ಲಿ ಬೃಹತ್ ಸಾರ್ವಜನಿಕ ಸಭೆ ಏರ್ಪಡಿಸಿ ಈ ಸಂದರ್ಭದಲ್ಲಿ ನಿಧಿಯನ್ನು ಸಮರ್ಪಿಸಲಾಯಿತು. 1996 ರಲ್ಲಿ 13 ದಿನಗಳ ಕಾಲ ಪ್ರಧಾನ ಮಂತ್ರಿಯಾಗಿ ರಾಜೀನಾಮೆ ನೀಡಿದ ಸಂದರ್ಭದಲ್ಲಿ ಭಾವನಾತ್ಮಕವಾಗಿ ಒಂದು ವಿಚಾರ ಹೇಳಿದರು. 'ಮತ್ತೆ ಅಧಿಕಾರಕ್ಕೆ ಬರುತ್ತೇವೆ' ಎಂದು ರಾಜಕೀಯ ವಿಪ್ಲವದ ಬಗ್ಗೆ ಹೇಳಿದ್ದನ್ನು ಸ್ಮರಿಸಿದರು.

Published and Owned by : **PRATHIBHA M.S.,** Published at : No. 900/A2, Opp-Banashankri Temple Arch, Main Road, Shakti Nagara, Davanagere, Karnataka-577004. Printed by : **MALLIKARJUNAPPA H.G.** Printed at : SHIVA MEDIA HOUSE, No.900/A2, Opp-Banashankari Temple Arch, Main Road, Davanagere, Karnataka-577004. Editor: **MALLIKARJUNAPPA H.G.**